# ಕಮಲ ಪತ್ರ

RNI No.:KARKAN/2023/84034

ಸಂಪುಟ : 01 | ಸಂಚಿಕೆ : 02 | ಮೇ 2023 | ಬೆಂಗಳೂರು | ₹ 10/-



## ನ ದೈನ್ಯಂ, ನ ಪಲಾಯನಂ...

# ವಿಜಯೋತ್ಸವ ಸಂಭ್ರಮ



ಕು. ಭಾಗೀರಥಿ ಮುರುಳ್ಯ - ಸುಳ್ಯ ವಿಧಾನಸಭಾ ಕ್ಷೇತ್ರ



ಶ್ರೀ ಬಸವರಾಜ ಮತ್ತಿಮೂಡ್ - ಕಲಬುರಗಿ ದಕ್ಷಿಣ ವಿಧಾನಸಭಾ ಕ್ಷೇತ್ರ



ಶ್ರೀ ಚನ್ನಬಸಪ್ಪ - ಶಿವಮೊಗ್ಗ ವಿಧಾನಸಭಾ ಕ್ಷೇತ್ರ



ಶ್ರೀ ಬಸವನಗೌಡ ಆರ್. ಪಾಟೀಲ್ ಯತ್ನಾಳ್ - ವಿಜಯಪುರ ವಿಧಾನಸಭಾ ಕ್ಷೇತ್ರ



ಶ್ರೀ ಮಹೇಶ್ ಟೆಂಗಿನಕಾಯಿ - ಹುಬ್ಬಳ್ಳಿ ಧಾರವಾಡ ಕೇಂದ್ರ ವಿಧಾನಸಭಾ ಕ್ಷೇತ್ರ



ಶ್ರೀ ಹರೀಶ್ ಪೂಂಜಾ - ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ



ಎಸ್.ಟಿ. ಸೋಮಶೇಖರ್ - ಯಶವಂತಪುರ

# ಆತ್ಮಸಾಕ್ಷಿಯೊಂದಿಗೆ ಅವಲೋಕನ

ವಿಧಾನಸಭಾ ಚುನಾವಣಾ ಫಲಿತಾಂಶ ಬಂದಿದೆ. ನಾಯಕತ್ವದ, ಕಾರ್ಯಕರ್ತರ, ಬಹುಜನರ ನಿರೀಕ್ಷೆಯೂ ತಲೆಕೆಳಗಾಗಿ ಬಿಜೆಪಿ ಸೋತಿದೆ. ಪ್ರತೀ ಸೋಲಿನ ಬಗ್ಗೆಯೂ ಆತ್ಮಾವಲೋಕನವಾಗಬೇಕು. ಗೆಲುವಿನ ಯಶಸ್ಸನ್ನು ಹೊರಲು ಸಾಕಷ್ಟು ಜನರು ಸಿಗುತ್ತಾರೆ. ಆದರೆ ಸೋಲಿನ ಹೊಣೆಯನ್ನು ಹೊರುವ ಮಂದಿ ಕಾಣದಾಗುತ್ತಾರೆ. ಗೆಲುವಿಗೆ ವಾರಸುದಾರರಿದ್ದಂತೆ ಸೋಲಿಗೆ ವಾರಸುದಾರರು ಇರುವುದಿಲ್ಲ, ಇದು ವಾಸ್ತವಿಕ. ಸಂಘಟನೆ, ಸಮಾಜ, ಕುಟುಂಬ ಎಲ್ಲದರಲ್ಲೂ ಇದು ಇದ್ದಿದ್ದೇ. ಆದರೆ ದೇಶದ ರಾಜಕಾರಣದಲ್ಲಿ ವಿಶಿಷ್ಟ ಪಾರ್ಟಿ ಎಂದು ಗುರುತಿಸಿಕೊಂಡಿರುವ ಬಿಜೆಪಿಯಲ್ಲಿ ಹಿಂದೆ ಇರದಿದ್ದ ಈ ಪ್ರವೃತ್ತಿ ಈಗ ನುಸುಳಿರುವುದು ಅತ್ಯಂತ ದೌರ್ಭಾಗ್ಯದ ಸಂಗತಿ ಎನ್ನಲೇ ಬೇಕು. ಗೆಲುವಿನ ಯಶಸ್ಸು 'ನನಗೇ' ಸಲ್ಲಬೇಕು. ಆದರೆ ಸಂಭವಿಸಿದ ಸೋಲು ಮಾತ್ರ 'ನಿನ್ನಿಂದಲೇ' ಎನ್ನುವ ಮನೋಭಾವ ಬೇರೆಲ್ಲಾ ರಾಜಕೀಯ ಸಂಘಟನೆಗಳಿಗಿಂತ ವಿಭಿನ್ನ ಎಂದು ಬಿಂಬಿತವಾಗಿರುವ ಬಿಜೆಪಿಯಲ್ಲಿ ಮೊಳಕೆಯೊಡೆಯುತ್ತಿರುವುದು ಅತ್ಯಂತ ಗಂಭೀರ ವಿಷಯ. ಇದಕ್ಕೋಸ್ಕರವೇ ನಾಯಕತ್ವದಿಂದ ಹಿಡಿದು, ಸಾಮಾನ್ಯ ಕಾರ್ಯಕರ್ತನವರೆಗೆ ಆತ್ಮಸಾಕ್ಷಿಯಿಂದ ಸೋಲಿನ ಆತ್ಮಾವಲೋಕನ ಆಗಲೇ ಬೇಕು.

ಬಿಜೆಪಿಗೆ ಸೋಲುಗಳು ಹೊಸದೇನಲ್ಲ, ಸೋಲುತ್ತಲೇ ಬೆಳೆದ ಪಕ್ಷವಿದು. ಜನಸಂಘದ ಕಾಲದಲ್ಲಿ ಬಿಡಿ, ಬಿಜೆಪಿ ಅಸ್ತಿತ್ವಕ್ಕೆ ಬಂದ ಮೇಲೂ ಸೋಲಿನ ಆಘಾತಗಳನ್ನು ಎದುರಿಸಿದೆ. 1983ರ ವಿಧಾನಸಭಾ ಚುನಾವಣೆಯಲ್ಲಿ 18 ಸ್ಥಾನಗಳನ್ನು ಗೆದ್ದು ರಾಜ್ಯದ ಮೊಟ್ಟಮೊದಲ ಕಾಂಗ್ರೆಸ್ಸೇತರ ಸರ್ಕಾರದ ಭಾಗವಾಗಿದ್ದ ಬಿಜೆಪಿ, 1985ರ ವಿಧಾನಸಭಾ ಚುನಾವಣೆಯಲ್ಲಿ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾಪಕ್ಷದ ಅಲೆಯಲ್ಲಿ ಬಿಜೆಪಿ ಕೇವಲ ಎರಡು ಸ್ಥಾನಗಳನ್ನು ಮಾತ್ರ ಗೆಲ್ಲಲು ಸಾಧ್ಯವಾಗಿತ್ತು.

1984 ರಲ್ಲಿ ಇಂದಿರಾಗಾಂಧಿಯವರ ಅನುಕಂಪದ ಅಲೆಯಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಇಬ್ಬರು ಸಂಸದರು ಮಾತ್ರ ಆಯ್ಕೆ ಆಗಲು ಸಾಧ್ಯವಾಗಿತ್ತು. ಆ ಸಂದರ್ಭದಲ್ಲಿ ಸ್ವತಃ ಅಟಲ್‌ಜೀ ಮತ್ತು ಅಡ್ವಾಣಿಯವರಂತಹ ದಿಗ್ಗಜರೇ ಸೋತಿದ್ದರು. ಅಂದೇ ಅಟಲ್‌ಜೀಯವರು 'ನ ದೈನ್ಯಂ, ನ ಪಲಾಯನಂ' ಎಂದು ಹೇಳಿದ್ದರು. ಸೋಲನ್ನು ಸ್ವೀಕರಿಸಿ ಮುಂದೆಯೂ ಸಂಘಟನೆಯನ್ನು ಕಟ್ಟಲೇಬೇಕಾದ ಮಾನಸಿಕತೆಯನ್ನು ಕಾರ್ಯಕರ್ತರಲ್ಲಿ ತುಂಬಿದ್ದರು. 2004ರ ಲೋಕಸಭಾ ಚುನಾವಣೆಯನ್ನೊಮ್ಮೆ ನೆನಪಿಸಿಕೊಳ್ಳಬಹುದು. ಅಟಲ್‌ಜೀಯವರು ನೀಡಿದ ಸರಕಾರದ ಶ್ರೇಷ್ಠ ಆಡಳಿತಾವಧಿಯ ನಂತರ ನಡೆದ ಚುನಾವಣೆ. ಭಾರತ ಪ್ರಕಾಶಿಸುತ್ತಿದೆ, ಸುಶಾಸನ ಎಂಬ ಘೋಷಣೆಗಳ ಜೊತೆಗೆ, ಸಾಲು ಸಾಲು ಸಾಧನೆಗಳು. ಇಡೀ ದೇಶಕ್ಕೆ ಸಂಪರ್ಕ ಕಲ್ಪಿಸುವ ಕ್ರಾಂತಿಕಾರಕ ಸುವರ್ಣ ಚತುಷ್ಪಥ ರಸ್ತೆ, ಅಟಲ್‌ಜೀಯವರ ಮೇರು ವ್ಯಕ್ತಿತ್ವ, ಅಜಾತಶತ್ರು ಎಂಬ ಬಿರುದು ಇವುಗಳೆಲ್ಲ ಇದ್ದರೂ ಬಿಜೆಪಿ ಸೋಲಬೇಕಾಯಿತು. ಲೋಕಸಭಾ ಚುನಾವಣೆಯಲ್ಲಿ ಹಿಂದಿನ ಬಾರಿಗಿಂತ 44 ಸ್ಥಾನಗಳನ್ನು ಗಳಿಸಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಳ್ಳಬೇಕಾಯಿತು.

**ಸಂಪಾದಕೀಯ**

ಬಿಜೆಪಿಗೆ ಈ ರೀತಿಯ ಅನೇಕ ಸೋಲುಗಳು ಬಂದೆರಗಿದೆ. ಈ ರೀತಿಯ ಸೋಲುಗಳ ನಡುವೆಯೂ ಬಿಜೆಪಿ ಬೆಳೆಯುತ್ತಲೇ ಇದೆ. ಏಕೆಂದರೆ ಬಿಜೆಪಿಯ ಪ್ರತೀ ಕಾರ್ಯಕರ್ತನು ಸೋಲುಗಳೆಲ್ಲವನ್ನೂ ಸವಾಲೆಂದು ಸ್ವೀಕರಿಸುತ್ತಾನೆ. ಸೋಲಿಗೆ ಕಾರಣಗಳನ್ನು ಹುಡುಕಿ ತಾನೇ ಸ್ವತಃ ಪರಿಹಾರಗಳನ್ನು ಕಂಡುಕೊಳ್ಳುತ್ತಾನೆ. ಇದು ಪ್ರತೀ ಕಾರ್ಯಕರ್ತನಲ್ಲೂ ರಕ್ತಗತವಾಗಿರುವ ವಿಶೇಷ ಗುಣ. ಗೆಲುವಿನ ಯಶಸ್ಸಿನ ಕಿರೀಟವನ್ನು ಎಲ್ಲರೂ ಹಂಚಿಕೊಳ್ಳುವ ಹಾಗೆ ಸೋಲಿನ ಹೊಣೆಗಾರಿಕೆಯನ್ನೂ ಎಲ್ಲರೂ ಸಹಭಾಗಿತ್ವದಿಂದ ಸಮನಾಗಿ ಹಂಚಿಕೊಳ್ಳುತ್ತಾರೆ. ಇದು ಬಿಜೆಪಿಯ ಕಾರ್ಯಪದ್ಧತಿ. ಬಿಜೆಪಿ ಅಳವಡಿಸಿಕೊಂಡಿರುವ ವಿಚಾರಧಾರೆಯೂ ಬದಲಾಗುವುದಿಲ್ಲ, ಹಾಗೆಯೇ ಅಳವಡಿಸಿಕೊಂಡಿರುವ ಈ ಕಾರ್ಯಪದ್ಧತಿಯಲ್ಲೂ ಬದಲಾವಣೆಯಿಲ್ಲ, ಬದಲಾಗಲೂ ಬಾರದು. ಆದರೆ ಸೋಲನ್ನು ಸೂಕ್ಷ್ಮವಾಗಿ ತೆಗೆದುಕೊಳ್ಳುವ ಮನಃಸ್ಥಿತಿಯ ಕಾರ್ಯಕರ್ತರಿಂದ ಕೆಲವೊಮ್ಮೆ ಆವೇಶಭರಿತ ಮಾತುಗಳು ಹೊರಹೊಮ್ಮಿರಬಹುದು. ಆಡಿರುವ ಮಾತುಗಳು ಸಂಘಟನೆಯ ಚೌಕಟ್ಟಿನ ಪಥವ ಬಿಟ್ಟು ಬದಿಗೆ ಸರಿದಿರಬಹುದು. ಹಾಗೆಂದ ಮಾತ್ರಕ್ಕೆ ಆ ಕಾರ್ಯಕರ್ತ ಬಿಜೆಪಿಯ ಧ್ಯೇಯಪಥವನ್ನೇ ಬಿಟ್ಟು ಬದಿಗೆ ಸರಿದಿದ್ದಾನೆಂದಲ್ಲ. ಆದರೆ ಆತ್ಮಸಾಕ್ಷಿಯಿಂದ ಆತ್ಮಾವಲೋಕನ ಮಾಡಿಕೊಳ್ಳುವಲ್ಲಿ ಸ್ವಲ್ಪ ಬದಿಗೆ ಸರಿದಿದ್ದಾನೆ ಎಂಬ ಅರ್ಥ ಅಷ್ಟೆ.

ಎಲ್ಲಕ್ಕಿಂತ ಮಿಗಿಲಾಗಿ ಬಿಜೆಪಿ ಎಂಬ ಸಂಘಟನೆ ಕಟ್ಟಿರುವುದೇ ಸಂಬಂಧಗಳ ಆಧಾರದಲ್ಲಿ. ಇದರಿಂದ ಸಂಕಷ್ಟಗಳು ಬಂದಾಗ ಸಂಬಂಧಗಳು ಗಟ್ಟಿಯಾಗಬೇಕು. ಗಟ್ಟಿ ಆಗಿಯೇ ಆಗುತ್ತದೆ. ಇಂತಹ ಸಮಯದಲ್ಲಿ ಸಂವೇದನಾ ಶೀಲ ಸಾಂತ್ವಾನ ನಾಯಕತ್ವದಿಂದ ಆಗಬೇಕು, ಆತ್ಮವಿಶ್ವಾಸ ತುಂಬುವ ಕಾರ್ಯದಲ್ಲಿ ನೇತೃತ್ವ ಹೆಚ್ಚು ಕ್ರಿಯಾಶೀಲವಾಗಬೇಕು. ನೋವಿನಲ್ಲಿ ನೀಡುವ ಸಾಂತ್ವಾನ ಸಂಬಂಧಗಳನ್ನು ಗಟ್ಟಿ ಮಾಡುತ್ತದೆ. ಗಟ್ಟಿಯಾದ ಸಂಬಂಧದಿಂದ ಸಂಘಟನೆಯೂ ಗಟ್ಟಿಯಾಗುತ್ತದೆ. ನಾಯಕತ್ವದ ಈ ಕ್ರಿಯೆಗಳಿಗೆಲ್ಲಾ ಸೂಕ್ತ ರೀತಿಯಲ್ಲಿ ಸ್ಪಂದನೆಯೂ ಕಾರ್ಯಕರ್ತನಿಂದ ಅಗತ್ಯ. ಇದು ಆಗಿಯೇ ಆಗುತ್ತದೆ. ಏಕೆಂದರೆ ರಾಜಕಾರಣದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡಿರುವ ಪಕ್ಷ ಬಿಜೆಪಿ ಮತ್ತು ಇಂತಹ ಸಂಘಟನೆಯನ್ನು ತಲೆಯ ಮೇಲೆ ಹೊತ್ತಿರುವುದು ಬದ್ಧತೆಯುಳ್ಳ ಕಾರ್ಯಕರ್ತ.

**(ಬಿದರೆ ಪ್ರಕಾಶ್)**
ಸಂಪಾದಕರು

ಕಮಲ ಪಥ

# ಸುಭಾಷಿತ




**ಹೆಚ್ಚು ಹೆಚ್ಚು ಭಾರತೀಯರು
ವಿದ್ಯಾವಂತರಾಗಿ, ದೇಶಕ್ಕಾಗಿ,
ಸಮಾಜಕ್ಕಾಗಿ ದುಡಿಯುವಂತಾದಾಗ
ಮಾತ್ರ ನಿಜವಾದ
ರಾಜಕೀಯ ಬದಲಾವಣೆ ಸಾಧ್ಯ...**

**– ಗೋಪಾಲಕೃಷ್ಣ ಗೋಖಲೆ**

**ಪ್ರಕಾಶಕರು**
**ಶ್ರೀ ಹೆಚ್.ಎಸ್. ಗೋಪಿನಾಥ್**

**ಸಂಪಾದಕರು**
**ಶ್ರೀ ಬಿದರೆ ಪ್ರಕಾಶ್**




**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
**ಅಜಿತ್‌ಶೆಟ್ಟಿ ಹೆರಂಜೆ 97430 91999**
**ಪದ್ಮಾವತಿ ಜೋಷಿ : 95380 20388**
email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005



## ಈ ಸಂಚಿಕೆಯಲ್ಲಿ...




- **ದೀವಟಿಗೆ :** ಸ್ವಾತಂತ್ರ್ಯ ವೀರ ಸಾವರ್ಕರ್ ....................5
- **ಧ್ಯೇಯಪಥ:** ಮಾತೃ ಹೃದಯಿ ಶ್ರೀ ಎಲ್.ಕೆ. ಅಡ್ವಾಣಿ ....... 6
- **ಮೆಲುಕು:** ಬಿಜೆಪಿ, ಚುನಾವಣೆ ಮತ್ತು ಸೋಲು ...............7
- ಮೋದಿ – ಮೋಡಿ .........................................8
- ಕರ್ನಾಟಕ ವಿಧಾನಸಭಾ ಚುನಾವಣೆ – 2023 ಫಲಿತಾಂಶ ...10
- ನಿಶ್ಚಿತ ವಿಚಾರ – ನಿಯಮಿತ ಕಾರ್ಯಪದ್ಧತಿ ...............14
- ಉತ್ತಮ ಪಕ್ಷ ಸೋಲುವುದು ಹೇಗೆಂದರೆ ..................19
- ವಿಸ್ತಾರಕರಿಂದ ಸಂಘಟನೆಯ ವಿಸ್ತಾರ ......................23
- ಚುನಾವಣಾ ನಿರ್ವಹಣ ಕಾರ್ಯದ ಒಂದು ಅವಲೋಕನ...25
- ಸಿಡ್ನಿ ಕ್ರೀಡಾಂಗಣದಲ್ಲಿ ಪ್ರಧಾನಿ ಮೋದಿ ಮಿಂಚು ...........30
- **ನುಡಿನಮನ :** ಸಂಘದ ಹಿರಿಯ ಪ್ರಚಾರಕ ಹರಿಭಾವು ವಝೆ 31
- **ಹಿರಿಯ ಕಾರ್ಯಕರ್ತರ ಪರಿಚಯ ಮಾಲೆ :** ಹಿರಿಯೂರು ಕೃಷ್ಣಮೂರ್ತಿ.............................................32
- **ಮನ್ ಕಿ ಬಾತ್** – ನವ ಭಾರತದತ್ತ ಸಾಗೋಣ... ...........34

# ಸ್ವಾತಂತ್ರ್ಯವೀರ ಸಾವರ್ಕರ್

(ಮೇ 28, 1883 – ಫೆಬ್ರವರಿ 26, 1966)

ಗಿರೀಶ್ ವಿಠ್ಠಲ ಬಡಿಗೇರ

ವಿನಾಯಕ ದಾಮೋದರ ಸಾವರ್ಕರ್ ಎಂದರೆ ಭಾರತೀಯ ಸ್ವಾತಂತ್ರ್ಯ ಚಳುವಳಿಯ ಒಂದು ಬೆಳ್ಳಿಚುಕ್ಕಿ. ಹಿಂದುತ್ವದ ಪ್ರಖರ ಸಂದೇಶಗಳು ಮತ್ತು ಭಾರತೀಯತೆಯನ್ನು ಜನಮಾನಸಕ್ಕೆ ಪಸರಿಸಲು ಶ್ರಮಿಸಿದ ಈ ಸ್ವಾತಂತ್ರ್ಯವೀರನ ಜೀವನದ ಘಟನೆಗಳು ನಿಜಕ್ಕೂ ಪ್ರೇರಣಾದಾಯಿ.

**ಜೀವಾವಧಿ ಶಿಕ್ಷೆ:** ಕ್ರಾಂತಿ ಎಸಗಿ ದಾಸ್ಯದ ಪ್ರಭುತ್ವವನ್ನು ಉರುಳಿಸುವ ಸಂಚು ನಡೆಸಿದ್ದಕ್ಕಾಗಿ ಮತ್ತು ಆಂಗ್ಲ ಅಧಿಕಾರಿಗಳ ಕೊಲೆಗೆ ಪ್ರೇರೇಪಣೆ ನೀಡಿದ್ದಕ್ಕಾಗಿ ಪ್ರತ್ಯೇಕವಾಗಿ ಎರಡು ಕರಿನೀರಿನ ಜೀವಾವಧಿ ಶಿಕ್ಷೆಗಳು ವಿಧಿಸಲ್ಪಟ್ಟವು.

ಆಂಗ್ಲ ನ್ಯಾಯಾಧೀಶರು ಎರಡು ಜೀವಾವಧಿ ಶಿಕ್ಷೆ ಕೊಟ್ಟಾಗ ಸಾವರ್ಕರ್ ''ಹೋ, ಆಂಗ್ಲರಿಗೂ ಹಿಂದೂಗಳ ಪುನರ್ಜನ್ಮದಲ್ಲಿ ನಂಬಿಕೆ ಇದೆ ಎಂದಂತಾಯ್ತು, ಎರಡು ಜೀವಾಮಾನಗಳ ಅವಧಿಯ ಶಿಕ್ಷೆ ವಿಧಿಸಿದ್ದೇ ಅದಕ್ಕೆ ನಿದರ್ಶನ'' ಎಂದು ಉದ್ಗರಿಸಿದರು. ಅವರ ಆಸ್ತಿಪಾಸ್ತಿಗಳನ್ನೆಲ್ಲ ಸರಕಾರ ಮುಟ್ಟುಗೋಲು ಹಾಕಿತು. ಎರಡು ಜೀವಾವಧಿ ಶಿಕ್ಷೆ ಎಂದರೆ ಐವತ್ತು ವರ್ಷಗಳ ಕಾಲ ಅಂಡಮಾನಿನ ಕಾರಾಗೃಹದಲ್ಲಿ ಕೊಳೆಯಬೇಕಿತ್ತು. ಕರಿನೀರಿನ ಶಿಕ್ಷೆಗೆ ಪಾತ್ರರಾಗುವ ಅಪರಾಧಿಗಳನ್ನು ನಾನಾ ರೀತಿಯ ಕಠಿಣ ಕ್ರಮಗಳಿಗೆ ಈಡು ಮಾಡಲಾಗುತ್ತಿತ್ತು. ವಿನಾಯಕ ಸಾವರ್ಕರರನ್ನು ಎಣ್ಣೆ ಹಿಂಡುವ ಗಾಣಕ್ಕೆ ಹೂಡುತ್ತಿದ್ದರು. ಬೆಳಗಿನಿಂದ ಸಂಜೆಯವರೆಗೆ ಗಾಣ ಸುತ್ತಿ ಸುತ್ತಿ ಬಳಲುತ್ತಿದ್ದರು. ಹಗ್ಗ ಹೊಸೆಯುವ ಕೆಲಸವನ್ನೂ ವಿಧಿಸಲಾಗುತ್ತಿತ್ತು.




ಚರ್ಮ ಸುಲಿದು ನೆತ್ತರು ಬಸಿಯುತ್ತಿದ್ದರೂ ನಿಗದಿಯಾದ ಪ್ರಮಾಣದಲ್ಲಿ ಇಂಥ ಕೆಲಸಗಳನ್ನು ಪೂರೈಸಲೇಬೇಕಿತ್ತು. ತಪ್ಪಿದಲ್ಲಿ ಬೆತ್ತದ ಏಟು! ಪರಸ್ಪರ ಮಾತನಾಡಲು, ವಿಚಾರ ವಿನಿಮಯ ನಡೆಸಲು ಕರಿನೀರಿನ ಕಾರಾವಾಸದಲ್ಲಿ ಶಕ್ಯವಿರಲಿಲ್ಲ. ಕಾವಲುಗಾರರ ಮನ ಒಲಿಸಿ ಚೀಟಿ ಬರೆದು ಕಳುಹಿಸುವುದು ಕೂಡ ಪ್ರತಿಯೊಂದು ಸಲ ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಸಾವರ್ಕರ್ ಸಹೋದರರು ತಮ್ಮದೇ ಒಂದು ಉಪಾಯ ಹೂಡಿದರು. ಮುಂಗೈಗೆ ತೊಡಿಸಿದ ಸಂಕೋಲೆಗಳನ್ನು ಒಂದಕ್ಕೊಂಡು ತಟ್ಟಿ ಸಂಕೇತಭಾಷೆಯಲ್ಲಿ ಮಾತನಾಡಿಕೊಳ್ಳುವುದನ್ನು ಕಲಿತರು. ಬರಬರುತ್ತ ಸಂಕೋಲೆಯ ಸಂಕೇತವಾದ ಸಮಸ್ತ ಸೆರೆಯಾಳುಗಳಿಗೆ ಸಂಭಾಷಣೆಯ ಸಾಧನವಾಯಿತು!

**ಸಂಕೋಲೆಯೊಳಗೂ ಸಮಾಜಸೇವೆ :** ಸರೀಕರ ಸೆರೆಯಾಳುಗಳು ಕೊಲೆಗಾರರೋ, ಸುಲಿಗೆಗಾರರೋ ಆಗಿದ್ದರೂ ಸಾವರ್ಕರ್ ಅವರೊಡನೆ ಪ್ರೀತಿಯಿಂದ ವರ್ತಿಸಿ ಅವರ ಪ್ರೀತಿ ಅಭಿಮಾನ ಗಳಿಸಿಕೊಂಡಿದ್ದರು. ಜೊತೆಯ ಸೆರೆಯಾಳುಗಳಿಗೆ ಅಕ್ಷರ ಜ್ಞಾನ ಕಲಿಸುತ್ತಿದ್ದರು, ಭಾರತ ಇತಿಹಾಸದ, ಪರಂಪರೆಯ ಕಥೆಗಳನ್ನು ಹೇಳುತ್ತಿದ್ದರು. ಕಾರಾವಾಸದ ಕಾಲದಲ್ಲಿ ತಮ್ಮ ಮನವನ್ನು ಚಿಂತೆಗೊಳಪಡಿಸದೆ ಚಿಂತನ ಮನನಗಳಿಂದ ಕಾವ್ಯವನ್ನು ರಚಿಸಿದರು. ಅವರ ಶರೀರವನ್ನು ಸಂಕೋಲೆಯಿಂದ ಬಂಧಿಸಿದ್ದರು ಆದರೆ ಅವರ ಬುದ್ಧಿ, ಕಲ್ಪನಾಶಕ್ತಿಗಳಿಗೆ ಯಾವ ಅಡೆತಡೆ ಇರಲಿಲ್ಲ. ಕಾವ್ಯರಚನೆ ಮಾಡಿ ಕಾರಾಗೃಹದ ಗೋಡೆಗಳ ಮೇಲೆ ಮೊಳೆಯಿಂದ ಬರೆಯುತ್ತಿದ್ದರು. ರಚಿಸಿದ ಕಾವ್ಯಭಾಗವನ್ನು ಓದಿ ಓದಿ ಗಟ್ಟಿಮಾಡಿಕೊಳ್ಳುತ್ತಿದ್ದರು. ಅದು ತಮ್ಮ ನೆನಪಿನ ಪಟಲದ ಮೇಲೆ ಅಚ್ಚಳಿಯದಂತೆ ಒಡಮೂಡಿತೆಂದರೆ ಮುಂದಿನ ರಚನೆ ಕೈಗೊಳ್ಳುತ್ತಿದ್ದರು. ಕಮಲಾ, ಗೋಮಾಂತಕ, ಮಹಾಸಾಗರ ಎಂಬ ಅನೇಕ ಕಾವ್ಯಗಳನ್ನು ಸಾವರ್ಕರ್ ಅಂಡಮಾನ್ ಕಾರಾಗೃಹವಾಸದಲ್ಲಿ ಸೃಷ್ಟಿಸಿದರು. ಮಣ್ಣಿನ ವಾಸನೆಯ ಕಾವ್ಯಗಳು ಅನೇಕರಿಂದ ರಚಿಸಲ್ಪಟ್ಟಿರಬಹುದು. ಆದರೆ ಅಂಡಮಾನದ ಗೋಡೆಗಳ ಕಲ್ಲಿನ ವಾಸನೆಯ ಈ ಕಾವ್ಯಗಳ ವಿಶೇಷತೆ ಅಪೂರ್ವವೇ!

**ಹಿಂದೂಗಳೆಲ್ಲ ಬಂಧುಗಳು:** ಹಿಂದೂ ಸಮಾಜದಲ್ಲಿ ಅಸ್ಪೃಶ್ಯತೆ ಶಾಪವಾಗಿ ಹರಡಿತ್ತು. ಭೇದಭಾವಗಳಿಂದಾಗಿ ಹಿಂದೂಸಮಾಜ ಛಿನ್ನ ವಿಚ್ಛಿನ್ನವಾಗಿತ್ತು. ಹೀಗಾಗಿ ಅನೇಕ ಹಿಂದೂಗಳು ಪರಧರ್ಮಕ್ಕೆ ಮೊರೆ ಹೋಗುತ್ತಿದ್ದರು. ಸಾವರ್ಕರ್ ಅಸ್ಪೃಶ್ಯತೆಯ ವಿರುದ್ಧ ಹೋರಾಟಕ್ಕೆ ಟೊಂಕ ಕಟ್ಟಿದರು. ಸತ್ಯಾಗ್ರಹ ಹೂಡಿ ರತ್ನಾಗಿರಿಯ ವಿಠ್ಠಲ ಮಂದಿರದಲ್ಲಿ ಕೆಳಜಾತಿಯವರಿಗೂ ಮುಕ್ತ ಪ್ರವೇಶದ ಅಧಿಕಾರ ದೊರಕಿಸಿಕೊಟ್ಟರು. ರತ್ನಾಗಿರಿಯಲ್ಲಿ ಪತಿತಪಾವನ ಮಂದಿರದ ಸ್ಥಾಪನೆ ಮಾಡಿದರು. ಸಮಸ್ತ ಹಿಂದೂಗಳು ಸಹಪಂಕ್ತಿ– ಸಹಭೋಜನದಲ್ಲಿ ಸಹಭಾಗಿಗಳಾಗುವಂತೆ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಶಾಲೆಗಳಿಗೆ ಹೋಗಿ ಜಾತಿ ಭೇದಭಾವವಿಲ್ಲದೇ ಎಲ್ಲ ವಿದ್ಯಾರ್ಥಿಗಳನ್ನು ಒಂದೆಡೆ ಕೂರಿಸುವಂತೆ ಶಾಲಾ ಅಧ್ಯಾಪಕರಿಗೆ ಪ್ರಾರ್ಥಿಸಿದರು. ಅಷ್ಟೇ ಅಲ್ಲ; ಈಗಾಗಲೇ ಹಿಂದೂ ಧರ್ಮ ತೊರೆದು ಹೊರಹೋದವರನ್ನು ಪುನಃ ಹಿಂದೂ ಧರ್ಮಕ್ಕೆ ಈ ಶುದ್ಧೀಕರಣದಿಂದ ಮತ್ತೆ ಮಾತೃಧರ್ಮಕ್ಕೆ ಮರಳಿಸುವಲ್ಲಿ ಸಫಲವಾದರು.

# ಮಾತೃ ಹೃದಯಿ
# ಶ್ರೀ ಎಲ್.ಕೆ. ಅಡ್ವಾಣಿ

ತಿಂಗಳೆ ವಿಕ್ರಮಾರ್ಜುನ ಹೆಗಡೆ



**1975** ರಲ್ಲಿ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಹೇರಿದ್ದ ಸಂದರ್ಭದಲ್ಲಿ ಅನೇಕ ಹಿರಿಯ ನಾಯಕರು ಹಾಗೂ ಕಾರ್ಯಕರ್ತರು ಜೈಲುವಾಸ ಅನುಭವಿಸಬೇಕಾಯಿತು. ಅವರಲ್ಲಿ ಹಿರಿಯ ಕಾರ್ಯಕರ್ತರಾದ ಶ್ರೀಮತಿ ಗಾಯಿತ್ರಿ ಬಾಯಿ ಹಾಗೂ ಶ್ರೀ ಹನುಮಂತರಾವ್ ಅವರು ಕೂಡ ಒಬ್ಬರು.

ಶ್ರೀಮತಿ ಗಾಯಿತ್ರಿ ಬಾಯಿ ಅವರು ಗೃಹಿಣಿಯಾಗಿದ್ದರು. ಅವರ ಪತಿ ಬಿನ್ನಿ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಎಲ್ಲೆಡೆ ಪ್ರತಿಭಟನೆಗಳು ನಡೆಯುತ್ತಿದ್ದವು. ಚಾಮರಾಜ ಪೇಟೆಯಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಶ್ರೀಮತಿ ಗಾಯಿತ್ರಿ ಬಾಯಿ ಹಾಗೂ ಅವರ ನೆರೆ-ಹೊರೆಯವರು ಭಾಗವಹಿಸಿದ್ದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಶ್ರೀಮತಿ ಗಾಯಿತ್ರಿ ಬಾಯಿ ಹಾಗೂ ಇತರರನ್ನು ಪೊಲೀಸರು ಬಂಧಿಸಿ ಅವರನ್ನು ಎರಡು ದಿನಗಳ ಕಾಲ ಆಶ್ರಮದಲ್ಲಿ ಇಟ್ಟಿದ್ದರು. ಎರಡು ದಿನಗಳ ನಂತರ ಅವರನ್ನು ಕೋರ್ಟ್‌ಗೆ ಹಾಜರುಪಡಿಸಲಾಯಿತು. ನ್ಯಾಯಾಧೀಶರು ಶ್ರೀಮತಿ ಗಾಯಿತ್ರಿ ಬಾಯಿಯವರನ್ನು ಅಪರಾಧಿ ಎಂದು ತೀರ್ಮಾನಿಸಿ ಕಾರಾಗೃಹ ವಾಸದ ತೀರ್ಪು ನೀಡಿದರು. ಶ್ರೀಮತಿ ಗಾಯಿತ್ರಿ ಬಾಯಿ ಅವರನ್ನು ಜೈಲಿಗೆ ಕಳುಹಿಸಲಾಯಿತು. ಆ ಸಂದರ್ಭದಲ್ಲಿ ಶ್ರೀಮತಿ ಗಾಯಿತ್ರಿ ಬಾಯಿ ಅವರು ಏಳು ತಿಂಗಳ ತುಂಬು ಗರ್ಭಿಣಿ.

ಜೈಲಿನಲ್ಲಿರುವಾಗ ಶ್ರೀಮತಿ ಗಾಯಿತ್ರಿಯವರಿಗೆ ಹೆರಿಗೆ ನೋವು ಕಾಣಿಸಿತು. ಹಿರಿಯ ನಾಯಕರಾದ ಶ್ರೀ ಅಡ್ವಾಣಿಯವರು ಅವರನ್ನು ವಾಣಿ ವಿಲಾಸ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಅಲ್ಲಿರುವ ಅಧಿಕಾರಿಗಳಿಗೆ ಮನವಿ ಮಾಡಿ ಸ್ವತಹ ತಾವೇ ಶ್ರೀಮತಿ ಗಾಯಿತ್ರಿ ಅವರನ್ನು ಮುಖ್ಯ ಬಾಗಿಲಿನವರೆಗೂ ಕರೆದುಕೊಂಡು ಬಂದು ಆಸ್ಪತ್ರೆಗೆ ಕಳುಹಿಸಿದರು. ಆಸ್ಪತ್ರೆಗೆ ದಾಖಲಾದ ಶ್ರೀಮತಿ ಗಾಯಿತ್ರಿ ಬಾಯಿ ಅವರ ಕಾವಲಿಗಾಗಿ ನಾಲ್ಕು ಜನ ಪೊಲೀಸರನ್ನು ನೇಮಿಸಿದ್ದರು.

ಹೆರಿಗೆಯಾದ ನಂತರ ಶ್ರೀಮತಿ ಗಾಯಿತ್ರಿ ಬಾಯಿ ಅವರು ಮಗುವಿನೊಂದಿಗೆ ಪುನಃ ಜೈಲಿಗೆ ಬಂದಾಗ ಶ್ರೀ ಅಡ್ವಾಣಿಯವರು ಯಾವ ಮಗು? ಎಂದು ಕೇಳಿದಾಗ ಶ್ರೀಮತಿ ಗಾಯಿತ್ರಿ ಬಾಯಿ ಅವರು ಗಂಡು ಮಗು ಎಂದು ಹೇಳಿದರು. ಅದಕ್ಕೆ ಶ್ರೀ ಅಡ್ವಾಣಿಯವರು ಮಗುವಿಗೆ 'ಕೃಷ್ಣ' ಎಂದು ಹೆಸರಿಡಲು ಮುಂದಾಗಿ ನಂತರ ಬೇಡ 'ಕೃಷ್ಣ' ಎಂದರೆ ಮುಂದೆ ತುಂಟನಾಗುತ್ತಾನೆಂದು ಹೇಳಿ 'ಶ್ಯಾಮ' ಎಂದು ಹೆಸರಿಟ್ಟರು.

ಬಾಣಂತಿ ಶ್ರೀಮತಿ ಗಾಯಿತ್ರಿ ಬಾಯಿ ಹಾಗೂ ಮಗುವಿಗೆ ಶ್ರೀ ಅಡ್ವಾಣಿಯವರೇ ಸ್ವತಹ ಅಲ್ಲಿರುವ ಪೇಪರ್‌ಗಳನ್ನು ಒಟ್ಟು ಮಾಡಿ ಬೆಂಕಿ ಹಾಕಿ ಸ್ನಾನಕ್ಕೆ ಎರಡು ಬಕೆಟ್ ಬಿಸಿ ನೀರನ್ನು ಕಾಯಿಸಿ ಕೊಡುತ್ತಿದ್ದರು. ಸ್ವಲ್ಪ ದಿನಗಳ ನಂತರ ಶ್ರೀಮತಿ ಗಾಯಿತ್ರಿ ಬಾಯಿ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು. ನಾಲ್ಕು ತಿಂಗಳು ಎರಡು ದಿನ ಜೈಲಿನಲ್ಲಿದ್ದ ಶ್ರೀಮತಿ ಗಾಯಿತ್ರಿ ಬಾಯಿ ಅವರಿಗೆ ಪ್ರತಿನಿತ್ಯವೂ ಶ್ರೀ ಅಡ್ವಾಣಿಯವರೇ ಬಿಸಿ ನೀರಿನ ವ್ಯವಸ್ಥೆ ಮಾಡುತ್ತಿದ್ದರು.

ಶ್ರೀ ಅಡ್ವಾಣಿ ಅವರು ಹಿರಿಯ ನಾಯಕರಾಗಿದ್ದರೂ ಕೂಡ ಸಾಮಾನ್ಯರಂತೆ ಎಲ್ಲರೊಂದಿಗೆ ತಾವು ಒಬ್ಬರಾಗಿ ಮಾತೃ ಹೃದಯಿಯ ಪ್ರೀತಿ, ಕಾಳಜಿ ತೋರಿದ ಆ ಸಂದರ್ಭ ನಿಜಕ್ಕೂ ಪ್ರಶಂಸನೀಯ

ಮೆಲುಕು

# ಬಿಜೆಪಿ, ಚುನಾವಣೆ ಮತ್ತು ಸೋಲು

ಹಿರಿಯ ಕಾರ್ಯಕರ್ತರಿಂದ

ಬಿಜೆಪಿಗೆ ರಾಜಕಾರಣದ ಅಂತಿಮ ಗುರಿ ಚುನಾವಣೆ ಗೆದ್ದು ಅಧಿಕಾರಕ್ಕೇರುವುದೊಂದೇ ಅಲ್ಲ. ಸಮಾಜದ, ದೇಶದ ಸಂಘಟನೆ ಮಾಡಲು ಕೂಡ ಇದೊಂದು ಮಾಧ್ಯಮ ಎನ್ನುವುದನ್ನು ನಂಬಿದ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಹಾಗೇ ಬದುಕಿ ತೋರಿಸಿದರು ಎಂಬ ಸಂಗತಿಗೆ ಅನೇಕ ನಿದರ್ಶನಗಳು ನಮ್ಮ ಮುಂದಿದೆ. ಅಂತಹುದೇ ಒಂದು ಘಟನೆ 1989ರ ಚುನಾವಣೆಯ ಸಂದರ್ಭದಲ್ಲಿ ನಡೆಯಿತು.

1989ರಲ್ಲಿ ಅಂದಿನ ಅವಿಭಜಿತ ಗಾಂಧಿನಗರ, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಶ್ರೀ ಎಸ್. ಕೈಲಾಸ್ ಅವರು ಸ್ಪರ್ಧಿಸಿದ್ದರು. ಕಾಂಗ್ರೆಸ್ ಪಕ್ಷದಿಂದ ಶ್ರೀ ಪೆರಿಕಾಲ್ ಮಲ್ಲಪ್ಪ ಚುನಾವಣೆಗೆ ಸ್ಪರ್ಧೆ ಮಾಡಿದ್ದರು. ಆಗಿನ್ನೂ ದೇಶದಲ್ಲಿ ಬಿಜೆಪಿ ರಾಜಕೀಯ ಕ್ಷೇತ್ರದಲ್ಲಿ ಕಣ್ಣು ತೆರೆಯುತ್ತಿದ್ದ ಕಾಲ. ಭಾರತೀಯ ರಾಜಕೀಯ ವ್ಯವಸ್ಥೆಯೊಳಗೆ ಕಾಂಗ್ರೆಸ್ ಪಕ್ಷ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲ. ಅವರಿಗೆ ಚುನಾವಣೆ ನಡೆಸಲು ಸಂಪನ್ಮೂಲಗಳ ಕೊರತೆಯೂ ಇರಲಿಲ್ಲ, ಕಾರ್ಯಕರ್ತರ ಸಮಸ್ಯೆಯೂ ಇರಲಿಲ್ಲ. ಜೊತೆಗೆ ಅಧಿಕಾರದ ವಿಶೇಷವಾದ ಸಹಕಾರವೂ ಇತ್ತು. ಆದರೆ ಬಿಜೆಪಿಗೆ ಸಂಪನ್ಮೂಲವೂ ಇರಲಿಲ್ಲ, ಸೌಕರ್ಯಗಳೂ ಇರಲಿಲ್ಲ. ಆ ಭಾಗಗಳಲ್ಲಿ ದಿನ ನಿತ್ಯ ಶಾಖೆಗೆ ಬರುತ್ತಿದ್ದ ಸ್ವಯಂಸೇವಕರೇ ಬಿಜೆಪಿಯ ಚುನಾವಣಾ ಕೆಲಸದಲ್ಲೂ ತೊಡಗಿಕೊಳ್ಳುತ್ತಿದ್ದರು. ಬಿಜೆಪಿಗೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದಿರಲಿ, ಠೇವಣಿ ಉಳಿಸಿಕೊಳ್ಳುವುದೇ ಕಷ್ಟ ಎನ್ನುವ ವಾತಾವರಣ ಇದ್ದ ಆ ಕಾಲದಲ್ಲಿ ಸ್ಪರ್ಧಿಸಲು ಅಭ್ಯರ್ಥಿಗಳೇ ಸಿಗುತ್ತಿರಲಿಲ್ಲ. ಅಂತಹ ಕಾಲದಲ್ಲಿ ಶ್ರೀ ಎಸ್. ಕೈಲಾಸ ಅವರು ಚುನಾವಣೆಗೆ ನಿಂತಿದ್ದರು.

ಹೀಗೆ ಗೆಲುವು ಕಷ್ಟವೆನ್ನುವ ಕಾಲದಲ್ಲೂ ಕಾರ್ಯಕರ್ತರೊಂದಿಗೆ ಕ್ಷೇತ್ರವೆಲ್ಲವನ್ನೂ ಸುತ್ತಿ ಪ್ರಚಾರ ಮಾಡಿದರು. ಚುನಾವಣೆ ಮುಗಿಯಿತು, ಮತ ಎಣಿಕೆಯ ದಿನ ಎಲ್ಲರೂ ಎಣಿಕಾ ಕೇಂದ್ರದಲ್ಲಿ ಸೇರಿದ್ದರು. ಗೆಲ್ಲುವ ಭರವಸೆ ಇರಲಿಲ್ಲವಾದರು ಮೊದಲ ಮೂರು-ನಾಲ್ಕು ಸುತ್ತಿನ ಮತ ಎಣಿಕೆ ಮುಗಿಯುವ ಹೊತ್ತಿಗೆ ಬಿಜೆಪಿಯ ಶ್ರೀ ಎಸ್. ಕೈಲಾಸ್ ಅವರು ಕಾಂಗ್ರೆಸ್‌ನ ಶ್ರೀ ಪೆರಿಕಾಲ್ ಮಲ್ಲಪ್ಪ ಅವರಿಗಿಂತ ಮುನ್ನಡೆ ಸಾಧಿಸಿದ್ದರು. ಇದನ್ನು ನೋಡಿದ ಶ್ರೀ ಪೆರಿಕಾಲ್ ಮಲ್ಲಪ್ಪ, ಎಣಿಕೆ ಕೇಂದ್ರದಿಂದ ಹೊರ ನಡೆದರು. ನಂತರದ ಸುತ್ತುಗಳಲ್ಲಿ ಬಿಜೆಪಿ ತನ್ನ ಮುನ್ನಡೆಯನ್ನು ಕಳೆದುಕೊಂಡಿತು. ಶ್ರೀ ಪೆರಿಕಾಲ್ ಮಲ್ಲಪ್ಪ ಭಾರಿ ಅಂತರದಿಂದ ಗೆಲುವನ್ನು ಸಾಧಿಸಿದರು. ಮರಳಿ ಮತ ಎಣಿಕೆ ಕೇಂದ್ರಕ್ಕೆ ಬಂದ ಶ್ರೀ ಪೆರಿಕಾಲ್ ಮಲ್ಲಪ್ಪ ಅವರು ಬಿಜೆಪಿ ಕಾರ್ಯಕರ್ತರ ಸ್ವಾಭಿಮಾನವನ್ನೂ ಘಾಸಿಗೊಳಿಸುವ ಮಾತುಗಳನ್ನೂ ಆಡಿದರು.

ಶ್ರೀ ಎಸ್. ಕೈಲಾಸ ಅವರು ಠೇವಣಿಯನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು ಎನ್ನುವ ಸಮಾಧಾನ ಬಿಟ್ಟರೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಂದ ಕೊಂಕು ನುಡಿಗಳಿಗೇನು ಕೊರತೆ ಇರಲಿಲ್ಲ. ಆದರೆ ಶ್ರೀ ಎಸ್. ಕೈಲಾಸ್ ಅವರು ಇಷ್ಟೆಲ್ಲಾ ಆದಮೇಲೂ ಫಲಿತಾಂಶ ಹೊರಬಿದ್ದ ಮಾರನೇ ದಿನ ವಿಶ್ರಾಂತಿಯನ್ನೂ ತೆಗೆದುಕೊಳ್ಳದೆ ಮತ್ತೆ ತಮ್ಮ ಕ್ಷೇತ್ರದಲ್ಲಿ ತಮ್ಮ ಮತದಾರನ ದೈನಂದಿನ ಸಮಸ್ಯೆಗಳಿಗೆ ಸ್ಪಂದಿಸುವುದರಲ್ಲಿ ಕಾರ್ಯಪ್ರವೃತ್ತರಾದರು. ಚುನಾವಣೆಯಲ್ಲಿ ಇವರಿಗೆ ಮತ ಹಾಕದವರಿಗೂ ಇವರ ಈ ನಡುವಳಿಕೆ ಹಾಗೂ ಬಿಜೆಪಿ ಬಗ್ಗೆ ಗೌರವ ಹೆಚ್ಚಿಸುವಂತೆ ಮಾಡಿತು.

ಹೀಗೆ ಭಾರತೀಯ ಜನತಾ ಪಾರ್ಟಿಯಲ್ಲಿ ಚುನಾವಣೆ ಕೇವಲ ಅಧಿಕಾರವನ್ನು ಹಿಡಿಯಲು ಇರುವ ಏಕೈಕ ಮಾರ್ಗ ಅಲ್ಲ, ಅದು ಸಮಾಜದ ಸಂಘಟನೆಯ ಪ್ರಕ್ರಿಯೆಯಲ್ಲಿ ಇರುವ ಇನ್ನುಳಿದ ಮಾರ್ಗಗಳಂತೆಯೇ ಇನ್ನೊಂದು ಎಂಬದನ್ನು ಸ್ಪಷ್ಟವಾಗಿ ತೋರಿಸುತ್ತಿತ್ತು. ಇಲ್ಲಿ ಸಿಗುವ ಸೋಲು – ಗೆಲುವುಗಳು ಬಿಜೆಪಿಯ ಕಾರ್ಯಕರ್ತರ ಧ್ಯೇಯ ಪಥದ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರದು ಎಂಬುದನ್ನು ಸಾಧಿಸಿ ತೋರಿಸಿತು.

# ಮೋದಿ- ಮೋಡಿ


NAMO AGAIN
Shri Narendra Modi Ji
ಬೆಂಗಳೂರು
SRI RAM SWEETS
WELCOME MODI




ಕಲಬುರಗಿ

ಮೈಸೂರು

ತುಮಕೂರು

# ಕರ್ನಾಟಕ ವಿಧಾನಸಭಾ ಕ್ಷೇತ್ರವಾರು ಫಲಿತಾಂಶ - 2023



# ವಿಧಾನಸಭಾ ಚುನಾವಣೆ - 2023

## ವಿಜೇತ ಬಿಜೆಪಿ ಅಭ್ಯರ್ಥಿಗಳಿಗೆ ಅಭಿನಂದನೆಗಳು



ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ
1 - ನಿಪ್ಪಾಣಿ
ಪಡೆದ ಮತ : 73,348
ಗೆಲುವಿನ ಅಂತರ: 7,292



ಶ್ರೀ ದುರ್ಯೋಧನ ಮಹಾಲಿಂಗಪ್ಪ ಐಹೊಳೆ
6 - ರಾಯಭಾಗ (ಎಸ್‌ಸಿ)
ಪಡೆದ ಮತ : 57,500
ಗೆಲುವಿನ ಅಂತರ: 2,570



ಶ್ರೀ ನಿಖಿಲ್ ಕತ್ತಿ
7 - ಹುಕ್ಕೇರಿ
ಪಡೆದ ಮತ :1,03,574
ಗೆಲುವಿನ ಅಂತರ: 42,551



ಶ್ರೀ ಬಾಲಚಂದ್ರ ಜಾರಕಿಹೊಳಿ
8 - ಅರಭಾವಿ
ಪಡೆದ ಮತ :1,15,402
ಗೆಲುವಿನ ಅಂತರ: 71,540



ಶ್ರೀ ರಮೇಶ್ ಜಾರಕಿಹೊಳಿ
9 - ಗೋಕಾಕ
ಪಡೆದ ಮತ :1,05,313
ಗೆಲುವಿನ ಅಂತರ: 25,412



ಶ್ರೀ ಅಭಯ್ ಪಾಟೀಲ್
12 - ಬೆಳಗಾವಿ ದಕ್ಷಿಣ
ಪಡೆದ ಮತ :77,094
ಗೆಲುವಿನ ಅಂತರ:12,308



ಶ್ರೀ ವಿಠ್ಠಲ್ ಹಲಗೇಕರ್
14 - ಖಾನಾಪುರ
ಪಡೆದ ಮತ :91,834
ಗೆಲುವಿನ ಅಂತರ:54,629



ಶ್ರೀ ಸಿದ್ದು ಸವದಿ
20 - ತೇರದಾಳ
ಪಡೆದ ಮತ : 77,265
ಗೆಲುವಿನ ಅಂತರ: 10,745



ಶ್ರೀ ಜಗದೀಶ ಗುಡಗುಂಟಿ
21 - ಜಮಖಂಡಿ
ಪಡೆದ ಮತ : 81,937
ಗೆಲುವಿನ ಅಂತರ: 4,716



ಶ್ರೀ ಬಸನಗೌಡ ಆರ್. ಪಾಟೀಲ್ ಯತ್ನಾಳ್
30 - ವಿಜಯಪುರ ನಗರ
ಪಡೆದ ಮತ : 94,211
ಗೆಲುವಿನ ಅಂತರ: 8,233



ಡಾ. ಅವಿನಾಶ್ ಜಾಧವ್
42 - ಚಿಂಚೋಳಿ (ಎಸ್‌ಸಿ)
ಪಡೆದ ಮತ : 69,963
ಗೆಲುವಿನ ಅಂತರ: 858



ಶ್ರೀ ಬಸವರಾಜ ಮತ್ತಿಮೂಡ್
43 - ಕಲಬುರಗಿ ಗ್ರಾ. (ಎಸ್‌ಸಿ)
ಪಡೆದ ಮತ : 84,466
ಗೆಲುವಿನ ಅಂತರ: 12,627



ಶ್ರೀ ಶರಣು ಸಲಗಾರ್
47 - ಬಸವಕಲ್ಯಾಣ
ಪಡೆದ ಮತ : 92,920
ಗೆಲುವಿನ ಅಂತರ: 14,415



ಶ್ರೀ ಸಿದ್ದು ಪಾಟೀಲ್
48 - ಹುಮನಾಬಾದ್
ಪಡೆದ ಮತ :75,515
ಗೆಲುವಿನ ಅಂತರ: 1,594



ಡಾ. ಶೈಲೇಂದ್ರ ಬೆಲ್ದಾಳೆ
49 - ಬೀದರ್ ದಕ್ಷಿಣ
ಪಡೆದ ಮತ :49,872
ಗೆಲುವಿನ ಅಂತರ: 1,263



ಶ್ರೀ ಪ್ರಭು ಚೌವ್ಹಾಣ್
52 - ಔರಾದ್ (ಎಸ್‌ಸಿ)
ಪಡೆದ ಮತ :81,382
ಗೆಲುವಿನ ಅಂತರ: 9,569



ಡಾ. ಶಿವರಾಜ್ ಪಾಟೀಲ್
54 - ರಾಯಚೂರು
ಪಡೆದ ಮತ :69,655
ಗೆಲುವಿನ ಅಂತರ: 3,732



ಶ್ರೀ ಮಾನಪ್ಪ ಡಿ. ವಜ್ಜಲ್
57 - ಲಿಂಗಸಗೂರು (ಎಸ್‌ಸಿ)
ಪಡೆದ ಮತ :58,769
ಗೆಲುವಿನ ಅಂತರ: 2,809



ಶ್ರೀ ದೊಡ್ಡನಗೌಡ ಪಾಟೀಲ್
60 - ಕುಷ್ಟಗಿ
ಪಡೆದ ಮತ :92,915
ಗೆಲುವಿನ ಅಂತರ: 9,646



ಡಾ. ಚಂದ್ರು ಲಮಾಣಿ
65 - ಶಿರಹಟ್ಟಿ (ಎಸ್‌ಸಿ)
ಪಡೆದ ಮತ :74,489
ಗೆಲುವಿನ ಅಂತರ:28,520



ಶ್ರೀ ಸಿ.ಸಿ. ಪಾಟೀಲ್
68 - ನರಗುಂದ
ಪಡೆದ ಮತ :72,835
ಗೆಲುವಿನ ಅಂತರ: 1,791



ಶ್ರೀ ಎಂ.ಆರ್. ಪಾಟೀಲ್
70 - ಕುಂದಗೋಳ
ಪಡೆದ ಮತ :76,105
ಗೆಲುವಿನ ಅಂತರ:35,341



ಶ್ರೀ ಮಹೇಶ್ ಟೆಂಗಿನಕಾಯಿ
73 - ಹು. - ಧಾ. ಕೇಂದ್ರ
ಪಡೆದ ಮತ :95,064
ಗೆಲುವಿನ ಅಂತರ:34,289



ಶ್ರೀ ಅರವಿಂದ್ ಬೆಲ್ಲದ್
74 - ಹು. - ಧಾ. ಪಶ್ಚಿಮ
ಪಡೆದ ಮತ :101,410
ಗೆಲುವಿನ ಅಂತರ: 38,693



ಶ್ರೀ ದಿನಕರ್ ಶೆಟ್ಟಿ
78 - ಕುಮಟಾ
ಪಡೆದ ಮತ :59,965
ಗೆಲುವಿನ ಅಂತರ: 676



ಶ್ರೀ ಶಿವರಾಮ್ ಹೆಬ್ಬಾರ್
81 - ಯಲ್ಲಾಪುರ
ಪಡೆದ ಮತ :74,699
ಗೆಲುವಿನ ಅಂತರ: 4,004



ಶ್ರೀ ಬಸವರಾಜ ಬೊಮ್ಮಾಯಿ
83 - ಶಿಗ್ಗಾಂವ್
ಪಡೆದ ಮತ :1,00,016
ಗೆಲುವಿನ ಅಂತರ: 35,978



ಶ್ರೀ ಕೃಷ್ಣ ನಾಯ್ಕ್
88 - ಹಡಗಲಿ (ಎಸ್‌ಸಿ)
ಪಡೆದ ಮತ :73,200
ಗೆಲುವಿನ ಅಂತರ: 1,444



ಶ್ರೀ ಎಂ. ಚಂದ್ರಪ್ಪ
102 - ಹೊಳಲ್ಕೆರೆ (ಎಸ್‌ಸಿ)
ಪಡೆದ ಮತ :88,732
ಗೆಲುವಿನ ಅಂತರ: 5,682



ಶ್ರೀ ಬಿ.ಪಿ. ಹರೀಶ್
105 - ಹರಿಹರ
ಪಡೆದ ಮತ :63,924
ಗೆಲುವಿನ ಅಂತರ: 4,304

# ವಿಧಾನಸಭಾ ಚುನಾವಣೆ - 2023

## ವಿಜೇತ ಬಿಜೆಪಿ ಅಭ್ಯರ್ಥಿಗಳಿಗೆ ಅಭಿನಂದನೆಗಳು



**ಶ್ರೀ ಚನ್ನಬಸಪ್ಪ**
113 - ಶಿವಮೊಗ್ಗ
ಪಡೆದ ಮತ :**96,490**
ಗೆಲುವಿನ ಅಂತರ :**27,674**



**ಶ್ರೀ ಅರಗ ಜ್ಞಾನೇಂದ್ರ**
114 - ತೀರ್ಥಹಳ್ಳಿ
ಪಡೆದ ಮತ :**84,563**
ಗೆಲುವಿನ ಅಂತರ :**12,241**



**ಶ್ರೀ ಬಿ.ವೈ. ವಿಜಯೇಂದ್ರ**
115 - ಶಿಕಾರಿಪುರ
ಪಡೆದ ಮತ :**81,810**
ಗೆಲುವಿನ ಅಂತರ :**11,008**



**ಶ್ರೀ ಗುರುರಾಜ್ ಗಂಟಿಹೊಳೆ**
118 - ಬೈಂದೂರು
ಪಡೆದ ಮತ :**98,628**
ಗೆಲುವಿನ ಅಂತರ :**16,153**



**ಶ್ರೀ ಕಿರಣ್ ಕುಮಾರ್ ಕೊಡ್ಗಿ**
119 - ಕುಂದಾಪುರ
ಪಡೆದ ಮತ :**1,02,424**
ಗೆಲುವಿನ ಅಂತರ : **41,556**



**ಶ್ರೀ ಯಶಪಾಲ್ ಸುವರ್ಣ**
120 - ಉಡುಪಿ
ಪಡೆದ ಮತ :**97,079**
ಗೆಲುವಿನ ಅಂತರ :**32,776**



**ಶ್ರೀ ಗುರ್ಮೆ ಸುರೇಶ್ ಶೆಟ್ಟಿ**
121 - ಕಾಪು
ಪಡೆದ ಮತ :**80,559**
ಗೆಲುವಿನ ಅಂತರ :**13,004**



**ಶ್ರೀ ವಿ. ಸುನೀಲ್ ಕುಮಾರ್**
122 - ಕಾರ್ಕಳ
ಪಡೆದ ಮತ :**77,028**
ಗೆಲುವಿನ ಅಂತರ : **4,602**



**ಶ್ರೀ ಜಿ.ಬಿ. ಜ್ಯೋತಿ ಗಣೇಶ್**
132 - ತುಮಕೂರು ನಗರ
ಪಡೆದ ಮತ :**59,165**
ಗೆಲುವಿನ ಅಂತರ : **3,198**



**ಶ್ರೀ ಬಿ. ಸುರೇಶ್ ಗೌಡ**
133 - ತುಮಕೂರು ಗ್ರಾಮಾಂತರ
ಪಡೆದ ಮತ :**89,191**
ಗೆಲುವಿನ ಅಂತರ : **4,594**



**ಶ್ರೀ ಎಸ್.ಆರ್. ವಿಶ್ವನಾಥ್**
150 - ಯಲಹಂಕ
ಪಡೆದ ಮತ :**1,41,538**
ಗೆಲುವಿನ ಅಂತರ : **64,110**



**ಶ್ರೀ ಬಿ.ಎ. ಬಸವರಾಜ**
151 - ಕೆ.ಆರ್.ಪುರ
ಪಡೆದ ಮತ :**1,39,925**
ಗೆಲುವಿನ ಅಂತರ : **24,301**



**ಶ್ರೀ ಎಸ್.ಟಿ. ಸೋಮಶೇಖರ್**
153 - ಯಶವಂತಪುರ
ಪಡೆದ ಮತ :**1,69,149**
ಗೆಲುವಿನ ಅಂತರ : **15,118**



**ಶ್ರೀ ಮುನಿರತ್ನ ನಾಯ್ಡು**
154 - ರಾಜರಾಜೇಶ್ವರಿ ನಗರ
ಪಡೆದ ಮತ :**1,27,980**
ಗೆಲುವಿನ ಅಂತರ : **11,842**



**ಶ್ರೀ ಎಸ್. ಮುನಿರಾಜು**
155 - ದಾಸರಹಳ್ಳಿ
ಪಡೆದ ಮತ :**91,289**
ಗೆಲುವಿನ ಅಂತರ : **9,194**



**ಶ್ರೀ ಕೆ. ಗೋಪಾಲಯ್ಯ**
156 - ಮಹಾಲಕ್ಷ್ಮೀ ಲೇಔಟ್
ಪಡೆದ ಮತ :**96,424**
ಗೆಲುವಿನ ಅಂತರ :**51,165**



**ಡಾ. ಸಿ.ಎನ್. ಅಶ್ವತ್ಥ್ ನಾರಾಯಣ್**
157 - ಮಲ್ಲೇಶ್ವರಂ
ಪಡೆದ ಮತ :**80,606**
ಗೆಲುವಿನ ಅಂತರ :**41,302**



**ಶ್ರೀ ಎಸ್. ರಘು**
161 - ಸಿ.ವಿ. ರಾಮನ್‌ನಗರ (ಎಸ್‌ಸಿ)
ಪಡೆದ ಮತ :**69,228**
ಗೆಲುವಿನ ಅಂತರ :**16,395**



**ಶ್ರೀ ಎಸ್. ಸುರೇಶ್ ಕುಮಾರ್**
165 - ರಾಜಾಜಿನಗರ
ಪಡೆದ ಮತ :**58,624**
ಗೆಲುವಿನ ಅಂತರ : **8,060**



**ಶ್ರೀ ಉದಯ ಬಿ. ಗರುಡಾಚಾರ್**
169 - ಚಿಕ್ಕಪೇಟೆ
ಪಡೆದ ಮತ :**57,299**
ಗೆಲುವಿನ ಅಂತರ :**12,113**

# ವಿಧಾನಸಭಾ ಚುನಾವಣೆ - 2023

## ವಿಜೇತ ಬಿಜೆಪಿ ಅಭ್ಯರ್ಥಿಗಳಿಗೆ ಅಭಿನಂದನೆಗಳು



**ಶ್ರೀ ಎಲ್.ಎ. ರವಿ ಸುಬ್ರಮಣ್ಯ**
170 - ಬಸವನಗುಡಿ
ಪಡೆದ ಮತ :78,854
ಗೆಲುವಿನ ಅಂತರ :54,978



**ಶ್ರೀ ಆರ್. ಅಶೋಕ್**
171 - ಪದ್ಮನಾಭನಗರ
ಪಡೆದ ಮತ :98,750
ಗೆಲುವಿನ ಅಂತರ :55,175



**ಶ್ರೀ ಸಿ.ಕೆ. ರಾಮಮೂರ್ತಿ**
173 - ಜಯನಗರ
ಪಡೆದ ಮತ :57,797
ಗೆಲುವಿನ ಅಂತರ : 16



**ಶ್ರೀಮತಿ ಮಂಜುಳಾ ಅರವಿಂದ ಲಿಂಬಾವಳಿ**
174 - ಮಹಾದೇವಪುರ (ಎಸ್‌ಸಿ)
ಪಡೆದ ಮತ :1,81,731
ಗೆಲುವಿನ ಅಂತರ : 44,501



**ಶ್ರೀ ಸತೀಶ್ ರೆಡ್ಡಿ**
175 - ಬೊಮ್ಮನಹಳ್ಳಿ
ಪಡೆದ ಮತ :1,13,574
ಗೆಲುವಿನ ಅಂತರ : 24,215



**ಶ್ರೀ ಎಂ. ಕೃಷ್ಣಪ್ಪ**
176 - ಬೆಂಗಳೂರು ದಕ್ಷಿಣ
ಪಡೆದ ಮತ :1,96,220
ಗೆಲುವಿನ ಅಂತರ : 49,699



**ಶ್ರೀ ಧೀರಜ್ ಮುನಿರಾಜು**
180 - ದೊಡ್ಡಬಳ್ಳಾಪುರ
ಪಡೆದ ಮತ :85,144
ಗೆಲುವಿನ ಅಂತರ :31,753



**ಶ್ರೀ ಹೆಚ್.ಕೆ. ಸುರೇಶ್**
195 - ಬೇಲೂರು
ಪಡೆದ ಮತ :63,571
ಗೆಲುವಿನ ಅಂತರ : 7,736



**ಶ್ರೀ ಸಿಮೆಂಟ್ ಮಂಜುನಾಥ್**
199 - ಸಕಲೇಶಪುರ (ಎಸ್‌ಸಿ)
ಪಡೆದ ಮತ :58,604
ಗೆಲುವಿನ ಅಂತರ : 2,056



**ಶ್ರೀ ಹರೀಶ್ ಪೂಂಜಾ**
200 - ಬೆಳ್ತಂಗಡಿ
ಪಡೆದ ಮತ :1,01,004
ಗೆಲುವಿನ ಅಂತರ : 18,216



**ಶ್ರೀ ಉಮಾನಾಥ್ ಕೋಟ್ಯಾನ್**
201 - ಮೂಡಬಿದರೆ
ಪಡೆದ ಮತ :86,925
ಗೆಲುವಿನ ಅಂತರ :22,468



**ಡಾ. ವೈ. ಭರತ್ ಶೆಟ್ಟಿ**
202 - ಮಂಗಳೂರು ಉತ್ತರ
ಪಡೆದ ಮತ :1,03,531
ಗೆಲುವಿನ ಅಂತರ : 32,922



**ಶ್ರೀ ವೇದವ್ಯಾಸ್ ಕಾಮತ್**
203 - ಮಂಗಳೂರು ದಕ್ಷಿಣ
ಪಡೆದ ಮತ :91,437
ಗೆಲುವಿನ ಅಂತರ :23,962



**ಶ್ರೀ ರಾಜೇಶ್ ನಾಯ್ಕ್**
205 - ಬಂಟ್ವಾಳ
ಪಡೆದ ಮತ :93,324
ಗೆಲುವಿನ ಅಂತರ : 8,282



**ಕು. ಭಾಗೀರಥಿ ಮುರುಳ್ಯ**
207 - ಸುಳ್ಯ (ಎಸ್‌ಸಿ)
ಪಡೆದ ಮತ : 93,911
ಗೆಲುವಿನ ಅಂತರ :30,874



**ಶ್ರೀ ಟಿ.ಎಸ್. ಶ್ರೀವತ್ಸ**
216 - ಕೃಷ್ಣರಾಜ
ಪಡೆದ ಮತ : 73,670
ಗೆಲುವಿನ ಅಂತರ : 7,213



# ನಿಶ್ಚಿತ ವಿಚಾರ, ನಿಯಮಿತ ಕಾರ್ಯಪದ್ಧತಿ

# ಇದು ಬಿಜೆಪಿಯ ವಿಚಾರದ ಪಯಣ ...




ಎಂ.ಬಿ. ಭಾನುಪ್ರಕಾಶ್

ರಾಜ್ಯ ಪ್ರಕೋಷ್ಠಗಳ ಸಂಯೋಜಕರು


ಅನೇಕ ಬಾರಿ ನಮ್ಮ ಪಥದಲ್ಲಿ, ಕಾರ್ಯದ ರೀತಿ ನೀತಿಯಲ್ಲಿ ತಿರುವು ಕಾಣಿಸಿಕೊಂಡಿದೆ. ಬದಲಾವಣೆಗಳು ಬಂದಿದೆ, ಕಾರ್ಯದ ಮಾರ್ಗದ ಬಗ್ಗೆ ಸಂಶಯ ಉತ್ಪನ್ನವಾಗಿದೆ. ಹೊಸ ಹೊಸ ಪ್ರತಿಭಾವಂತರ ಆಗಮನವಾಗಿದೆ. ಪಥದ ಬಗ್ಗೆ, ಗುರಿ ಬಗ್ಗೆ ಸಂಶಯ ಹೊಂದಿ ಅನೇಕರು ನಮ್ಮನ್ನು ತ್ಯಜಿಸಿದ್ದಾರೆ. ನಮ್ಮ ವೈಚಾರಿಕ ವಿರೋಧಿಗಳು ನಮ್ಮನ್ನು ಗೆದ್ದು ಬೀಗುತ್ತಿದ್ದಾರೆ. ಎಲ್ಲವೂ ನಿಜ ಮತ್ತು ಸತ್ಯ. ಆದರೆ ಇದು ಮೊದಲಲ್ಲ, ಕೊನೆಯೂ ಅಲ್ಲ. ದೇಶ, ಸಮಾಜ ಕಟ್ಟುವ ಕಾರ್ಯದಲ್ಲಿ, ದೀರ್ಘಕಾಲದ ವಿಚಾರ ಯಾತ್ರೆಯಲ್ಲಿ ಸಹಜವಾಗಿ ಬರಬಹುದಾದ ಅವಕಾಶಗಳು, ಅಡ್ಡಿಗಳು. ಇವೆಲ್ಲ ತಾತ್ಕಾಲಿಕ.



ಪುನಃ ಪುನಃ ನೆನಪಿಸಿಕೊಳ್ಳುವುದು, ಸರಿಪಡಿಸಿಕೊಳ್ಳುವುದು ಹಾಗೂ ಮುಂದಕ್ಕೆ ಸಾಗುವುದು ‘ಚರೈವೇತಿ-ಚರೈವೇತಿ ಯಹೀತೋ ಮಂತ್ರ ಹೈ ಅಪನಾ!’. ಭಗವಾನ್ ಸೂರ್ಯನ ರೀತಿ ಪ್ರಪಂಚಕ್ಕೆ ಬೆಳಕನ್ನು ನೀಡುವ ಕಾರ್ಯ ನಮ್ಮದು.

ಮೋಡಗಳು ಅಡ್ಡ ಬರಲಿ, ಭೂಮಿ ಸುತ್ತುತ್ತಾ ಕೆಲವು ಭಾಗ ಕತ್ತಲಿನಿಂದ ಕೂಡಿದಾಗಲು ಸ್ಥಿರವಾಗಿದ್ದು, ನಿಶ್ಚಿತ ರೀತಿ, ನಿಶ್ಚಿತವಾದ ಸಮಯ, ನಿಗದಿತ ರೀತಿಯಲ್ಲಿ ತನ್ನ ಕಾಯಕ ಮಾಡುವ ಸೂರ್ಯ ನಮ್ಮ ಕಾರ್ಯಕ್ಕೆ ಪ್ರೇರಕ, ರಾಜಕೀಯ ಕ್ಷೇತ್ರದಲ್ಲಿ ಕಾರ್ಯ ಮಾಡುತ್ತಾ, ಪರಿವರ್ತನೆಯಲ್ಲಿ ನಮ್ಮನ್ನು ತೊಡಗಿಸಿಕೊಂಡಿರುವ ಕಾರ್ಯದ ಆರಾಧಕರು ಹಾಗೂ ವ್ರತದಾರಿಗಳು ಸೋಲು ಗೆಲುವುಗಳನ್ನು ಸ್ವೀಕರಿಸಿ, ಮಾನಾಪಮಾನಗಳನ್ನು ಸಹಿಸಿ, ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಮೂಲ ಉದ್ದೇಶವನ್ನು ಮರೆಯದೇ ಅಂತಿಮ ಗಮ್ಯ ಸ್ಥಾನದ ಕಡೆ, ಕರ್ತವ್ಯದ ಪಥದಲ್ಲಿ ಸಾಗುತ್ತಿರುವವರು ನಾವು ಬಿಜೆಪಿ ಕಾರ್ಯಕರ್ತರು.

ನಿಜ, ಅನೇಕ ಬಾರಿ ನಮ್ಮ ಪಥದಲ್ಲಿ, ಕಾರ್ಯದ ರೀತಿ ನೀತಿಯಲ್ಲಿ ತಿರುವು ಕಾಣಿಸಿಕೊಂಡಿದೆ. ಬದಲಾವಣೆಗಳು ಬಂದಿದೆ, ಕಾರ್ಯದ ಮಾರ್ಗದ ಬಗ್ಗೆ ಸಂಶಯ ಉತ್ಪನ್ನವಾಗಿದೆ. ಹೊಸ ಹೊಸ ಪ್ರತಿಭಾವಂತರ ಆಗಮನವಾಗಿದೆ. ಪಥದ ಬಗ್ಗೆ, ಗುರಿ ಬಗ್ಗೆ ಸಂಶಯ ಹೊಂದಿ ಅನೇಕರು ನಮ್ಮನ್ನು ತ್ಯಜಿಸಿದ್ದಾರೆ. ನಮ್ಮ ವೈಚಾರಿಕ ವಿರೋಧಿಗಳು ನಮ್ಮನ್ನು ಗೆದ್ದು ಬೀಗುತ್ತಿದ್ದಾರೆ. ಎಲ್ಲವೂ ನಿಜ ಮತ್ತು ಸತ್ಯ. ಆದರೆ ಇದು ಮೊದಲಲ್ಲ, ಕೊನೆಯೂ ಅಲ್ಲ. ದೇಶ, ಸಮಾಜ ಕಟ್ಟುವ ಕಾರ್ಯದಲ್ಲಿ, ದೀರ್ಘಕಾಲದ ವಿಚಾರ ಯಾತ್ರೆಯಲ್ಲಿ ಸಹಜವಾಗಿ ಬರಬಹುದಾದ ಅವಕಾಶಗಳು, ಅಡ್ಡಿಗಳು ಇವೆಲ್ಲ ತಾತ್ಕಾಲಿಕ. ಪ್ರಕೃತಿಯಲ್ಲಿ ಆಗುವ ಬದಲಾವಣೆಗಳು, ಋತುಧರ್ಮಗಳು ಕೂಡಾ ವ್ಯತ್ಯಾಸವಾಗುತ್ತಿರುವ ಕಾಲ ಇದು. ಆದರೆ ಮನುಷ್ಯ ಹಾಗೂ ಉಳಿದೆಲ್ಲಾ ಚರಾಚರ ಸೃಷ್ಠಿಗಳು, ಆ ಬದಲಾವಣೆಗೆ ಹೊಂದಿಕೊಂಡು, ತನ್ನನ್ನು ತಾನು ಬಗ್ಗಿಸಿಕೊಂಡು ತನ್ನ ಜೀವನ ಧ್ಯೇಯಕ್ಕಾಗಿ ಸತತ ಪ್ರಯತ್ನ, ಸಂಘರ್ಷ ಮಾಡುತ್ತದೆಯೋ ಹಾಗೇ ರಾಜಕಾರಣದ ಬದಲಾವಣೆಗೆ, ನಮ್ಮನ್ನು ನಾವು ಸಜ್ಜುಗೊಳಿಸಿಕೊಂಡು ಮುಂದೆ ಸಾಗಬೇಕಾಗಿದೆ.

2023 ಕರ್ನಾಟಕದ ಚುನಾವಣೆ ಫಲಿತಾಂಶದ ಅಧಾರದ ಮೇಲೆ ವಿತ್ತಷ್ಟು ವಿಮರ್ಶೆಗಳು ಆಗುತ್ತಿದೆ. ವಿವಿಧ ಹಂತಗಳಲ್ಲಿ ನಡೆಯುತ್ತಿದೆ. ವಿಮರ್ಶೆಯಲ್ಲಿ ಸೋಲಿಗೆ ಕಾರಣ ಹುಡುಕುವ ಪ್ರಯತ್ನ ನಡೆಯುತ್ತಿದೆ. ಸೋಲಿನ ಮನಸ್ಥಿತಿಯಲ್ಲಿ ಎಲ್ಲವೂ ಸೋಲಿಗೆ ಕಾರಣ ಎಂದು ವಿಶ್ಲೇಷಣೆ ನಡೆಯುತ್ತಿದೆ. ನಮ್ಮ ಬಗ್ಗೆ ಸಹನಾಭೂತಿಯುಳ್ಳ ಹಿತೈಷಿಗಳು, ನಮ್ಮ ಕಾರ್ಯ ಪದ್ಧತಿ ಒಪ್ಪುವವರು, ನಮ್ಮನ್ನು ದ್ವೇಷ ಮಾಡುವವರು ಹಾಗೂ ಸ್ವಾರ್ಥಿಗಳು, ಸಮಯ ಸಾಧಕರು ಮಾಡುವ ವಿಶ್ಲೇಷಣೆ ಭಿನ್ನ ಭಿನ್ನ ರೀತಿಯಲ್ಲಿರುವುದು ನಮ್ಮ ಗಮನಕ್ಕೆ ಬಂದೇ ಇದೆ. ಈ ರೀತಿ ವಿಮರ್ಶೆಗಳು ನಮ್ಮ ಕಾರ್ಯಕ್ಕೆ ಇರುವ ಎಚ್ಚರಿಕೆ ಸಂದೇಶಗಳು, ಗಂಟೆ ಶಬ್ಧ ಕೇಳಿ ಮೈ ಮರೆಯುತ್ತಾ, ಧೃತಿಗೆಡುತ್ತಾ, ಭಯಪಡುತ್ತಾ ಕೂರುವ ಕಾಲ ಇದಲ್ಲ. ಈಗ ಪರಾಮರ್ಶಿಸುವ ಕಾಲ.

ಪರಾಮರ್ಶೆಗೆ ಬಹಳ ವ್ಯಾಪಕ ಅರ್ಥ ಇದೆ. ‘ಸಮಾನ ಮನಸ್ಕರ’ ಆದರೆ ಭಿನ್ನ ಸ್ವಭಾವ ಹಾಗೂ ಅಭಿಪ್ರಾಯ ವ್ಯಕ್ತಪಡಿಸುವ ಸಾಮರ್ಥ್ಯ ಮತ್ತು ಧೈರ್ಯ ಇರುವ ಜನಗಳ ಮಧ್ಯೆ ಪರಾಮರ್ಶೆ ನಡೆಸಿ, ಮುಂದಿನ ಯೋಜನೆ ಸಿದ್ಧಪಡಿಸಬೇಕಾಗಿದೆ. ‘ಎಚ್ಚರಿಕೆಯಿಂದ

ಹಾಗೂ ವಿವರವಾಗಿ' ಪರಿಗಣಿಸುವುದು-ಪರಾಮರ್ಶೆ, ವಿಮರ್ಶೆ ಎಚ್ಚರಿಸಿದರೆ ಪರಾಮರ್ಶೆ ಪೂರ್ವ ಚಿಂತನೆ ಮತ್ತು ಪೂರ್ಣ ಚಿಂತನೆ ಮಾಡಲು ಒತ್ತಾಯಿಸುತ್ತದೆ. ಎಚ್ಚರ ಮಾಡಲು ಗಂಟೆ ಶಬ್ದ ಸಾಕು ಆದರೆ, ಮುಂದೆ ಸಾಗಲು ಮನಸ್ಸು, ದೇಹ, ಆತ್ಮ ಬುದ್ಧಿಪೂರ್ವಕವಾಗಿ ಮುನ್ನಡೆಸಲು ತುಂಬಾ ಅಗತ್ಯ. ಇಡೀ ಸಂಘಟನೆಯನ್ನು ದೇಶಾದ್ಯಂತ ಎಚ್ಚರಿಸಲು ವಿಮರ್ಶೆ ಗಂಟೆ ಸದ್ದು ಸಾಕು. ಆದರೆ, ಮುಂದಿನ ಕಾರ್ಯಯೋಜನೆ ಮಾಡಲು, ನಿಶ್ಚಿತ ವಿಚಾರ, ನಿಗದಿತ ಪದ್ಧತಿ, ಗುರಿ ತಲುಪುವ ಯಾತ್ರೆ ಮುಂದುವರೆಸಲು ಪರಾಮರ್ಶೆ ತುಂಬಾ ಅಗತ್ಯ. ಈ ವಿಚಾರ ಯಾತ್ರೆ ಆರಂಭ ಮಾಡಿದ ಸಮಯ, ಪರಿಸ್ಥಿತಿ, ನೋಡಿರುವ, ಓದಿರುವ ನಮಗೆ ಆಗಾಗ ಯಶಸ್ಸನ್ನು ಕಂಡಿರುವ ನಾವು ನಮ್ಮ ಕಾರ್ಯಪದ್ಧತಿಯನ್ನು ವ್ಯವಹಾರ ಯೋಗ್ಯವಲ್ಲವೆಂಬ ಮಾನಸಿಕತೆಗೆ ತಲುಪಿರುವುದು ದುರ್ದೈವದ ಸಂಗತಿ.

ಚುನಾವಣೆಯನ್ನು ತಂತ್ರಗಾರಿಕೆ ಮೂಲಕ ಗೆಲ್ಲಬಹುದು. ಆದರೆ ಸಂಘಟನೆ ನಿರ್ಮಾಣ ಮಾಡಲು ಅದರಲ್ಲೂ ಅಭೇದ್ಯವಾದ ಸಂಘಟನೆ ನಿರ್ಮಿಸಲು ಕೇವಲ ತಂತ್ರಗಾರಿಕೆಯಿಂದ ಸಾಧ್ಯವಿಲ್ಲ. ಬದಲಾಗಿ ಪ್ರತಿಯೊಬ್ಬರಲ್ಲಿ ಧ್ಯೇಯನಿಷ್ಠೆ, ಪ್ರಾಮಾಣಿಕತೆ, ಧೈರ್ಯ ವಿಜಗೀಷು ಪ್ರವೃತ್ತಿ ಯಾರೂ ಕೊಳ್ಳಲಾಗದ ವ್ಯಕ್ತಿತ್ವ ರೂಪಿಸುವುದು, ಜಗತ್ತು ಗೌರವಿಸುವಂತಹ ಚಾರಿತ್ರ್ಯ (ಶೀಲ) ಬೆಳೆಸುವುದು-ಹೀಗೆ ಹತ್ತು ಹಲವಾರು. ಬಿಜೆಪಿಯಾಗಿ ಅದಕ್ಕೆ ಪೂರ್ವ ಜನಸಂಘದಲ್ಲಿ ನಾವು ಮಾಡಿದ ಪ್ರಯೋಗಗಳು ರಾಜಕೀಯ ಕ್ಷೇತ್ರದಲ್ಲಿ ನಮಗೆ ಯಶಸ್ಸನ್ನು ತಂದುಕೊಟ್ಟಿದೆ. ಸಮ್ಮಿಶ್ರ ಸರ್ಕಾರಗಳ ರಚನೆ ಕಾಂಗ್ರೆಸ್ಸೇತರ ಪಕ್ಷಗಳಿಂದ ಆಗಿದ್ದು ಜನಸಂಘದ ನೇತೃತ್ವದಲ್ಲಿ.

## ವಿಮರ್ಶೆ ಮತ್ತು ಒಂದಿಷ್ಟು ಪ್ರಶ್ನೆಗಳು



ತುರ್ತು ಪರಿಸ್ಥಿತಿ ವಿರುದ್ಧ ಪ್ರಜಾಪ್ರಭುತ್ವ ಉಳಿಸುವ ಹೋರಾಟದಲ್ಲಿ ಹಾಗೂ ನಂತರ ಪಕ್ಷಗಳನ್ನು ವಿಸರ್ಜಿಸಿ ದೇಶಕ್ಕೆ ಹೊಸರೀತಿಯ ರಾಜಕಾರಣ ಪರಿಚಯಿಸಿದ್ದು ಜನಸಂಘ. ಅಟಲ್ ಜೀ ನೇತೃತ್ವದಲ್ಲಿ , 23 ಪಕ್ಷಗಳ ಅಧಿಕಾರ ಮಾಡುವ ಮೂಲಕ ಹೊಸ



ರಾಜಕಾರಣದಲ್ಲಿ ಹೊಸ ಭಾಷ್ಯ ಬರೆದಿದ್ದು ಬಿಜೆಪಿ. ಅಧಿಕಾರಕ್ಕಿಂತ ಮೌಲ್ಯ ದೊಡ್ಡದು, ಪ್ರಧಾನಿ ಹುದ್ದೆಗಿಂತ ಜಗತ್ತಿನೆದುರಲ್ಲಿ ಶೀಲ ದೊಡ್ಡದು ಎನ್ನುವುದನ್ನು ಸಾಧಿಸಿ ತೋರಿಸಿದ್ದು ಅಟಲ್ ಜೀ.

ಮರೆಯಲಾಗದ ವ್ಯಕ್ತಿತ್ವದವರು, ಬಿಜೆಪಿ ಕಾರ್ಯಪದ್ಧತಿಯಲ್ಲಿ ವಿಚಾರವನ್ನು ಮೈಗೂಡಿಸಿಕೊಂಡವರು. ಭ್ರಷ್ಟಾಚಾರದ ದೇಶ ಎಂದು ಪ್ರಪಂಚದ ಕಣ್ಣಲ್ಲಿ ಕಿರಿದಾಗಿದ್ದ, ದೇಶದ ಕೀರ್ತಿಯನ್ನು ಜಗದಗಲ ಎತ್ತರಕ್ಕೆ ಬೆಳೆಸಿದ ಕೀರ್ತಿ ಭ್ರಷ್ಟಾಚಾರ ರಹಿತ ಆಡಳಿತ ನೀಡಿದ ನೇತೃತ್ವ ನೀಡಿದ ಶ್ರೀ ನರೇಂದ್ರಮೋದಿ ಬಿಜೆಪಿಯವರು, ಸಂಘದ ಪ್ರಚಾರಕರು. ಉಗ್ರವಾದದ ವಿರುದ್ಧ ಪ್ರಪಂಚ ಗಟ್ಟಿ ನಿಲುವು ತಾಳುವಂತೆ ಹಾಗೂ ಯುದ್ಧದ ಹೊರತಾಗಿ ಮಾತುಕತೆ ಮೂಲಕ ವಿವಾದ ಬಗೆಹರಿಸಿಕೊಳ್ಳುವಂತೆ ಸಲಹೆ ನೀಡುವಷ್ಟು ಶಕ್ತಿ, ವಿವೇಕ ಬೆಳೆಸಿಕೊಂಡಿರುವ ದೇಶದ ನೇತೃತ್ವ ಬಿಜೆಪಿಯದು.



ಕೊರೋನಾ ರೀತಿಯ ಅತ್ಯಂತ ಅಪಾಯವಾದ ಸನ್ನಿವೇಶದಲ್ಲೂ ಧೃತಿಗೆಡದೆ ರಾಷ್ಟ್ರದ ಸರ್ವರ ಹಿತ ಬಯಸಿದ್ದು ಮಾತ್ರವಲ್ಲ, ಅಗತ್ಯ ಔಷಧೌಪಚಾರ ವ್ಯವಸ್ಥೆ ಮಾಡಿದ್ದು ಸನ್ಮಾನ್ಯ ಶ್ರೀ ನರೇಂದ್ರಮೋದಿ. ನಮ್ಮದೇ 'ವಿಶಿಷ್ಠ ಕಾರ್ಯಪದ್ಧತಿ'ಯಲ್ಲಿ ಬೆಳೆದ 'ಕಾರ್ಯಕರ್ತ'. ಇನ್ನೂ ಸಾವಿರಾರು ಉದಾಹರಣೆ ನೀಡಬಹುದು. ಹಾಗಾಗಿ ವಿಮರ್ಶೆ ಮಾಡುವಾಗ ವ್ಯಕ್ತಿ ವಿಮರ್ಶೆಗಿಂತ ನಮ್ಮ ವ್ಯವಸ್ಥೆಗಳ ವಿಮರ್ಶೆ ಮಾಡುವುದು ಅಗತ್ಯ. ಕಳೆದ ಸ್ವಲ್ಪ ವರ್ಷಗಳಿಂದ ನಮ್ಮ ವ್ಯವಸ್ಥೆಗಳು ಹೆಚ್ಚು ವಿಮರ್ಶೆಗೆ ಒಳಪಡಬೇಕಾಗಿದೆ. ಅದನ್ನು ರೂಪಿಸುತ್ತಿರುವವರು ವ್ಯಕ್ತಿಗಳೇ ಆದರೂ ಚರ್ಚೆ ಮಾಡಲು ಕಾಲಾವಕಾಶ ಬಹಳವಿತ್ತು. ನಮ್ಮ ಪ್ರಶಿಕ್ಷಣ ಯಾವ ವಾತಾವರಣದಲ್ಲಿ ನಡೆದಿದೆ? ನಮ್ಮ ಮಂಡಲ, ಜಿಲ್ಲಾ, ರಾಜ್ಯ ಕಾರ್ಯಕಾರಿ ಸಮಿತಿಯ

ವೈಭವದ ವ್ಯವಸ್ಥೆ? ವ್ಯಕ್ತಿ ವೈಭವೀಕರಣ? ಜನಸಾಮಾನ್ಯರು ಮೆಚ್ಚುವಂತೆ ಮಾಡಬೇಕಾದ ಜಾಗದಲ್ಲಿ ಅಸೂಯೆ ಪಡುವಂತೆ ಆಗಿರಲಿಲ್ಲವಾ? ಪಕ್ಷದ ಕಾರ್ಯಕರ್ತ ಮತ್ತು ನಾಯಕರ ಮಧ್ಯೆ ವೈಭವದ ಪ್ರದರ್ಶನ ಯಾವ ಸ್ತರದಲ್ಲಿತ್ತು? ಪಕ್ಷದ ಸಂಘಟನೆಗೆ ಬೇಕಾದ ಸಂಪನ್ಮೂಲ ಕ್ರೋಢೀಕರಣದ ವ್ಯವಸ್ಥೆ, ಅದರ ವಿತರಣೆ, ಅದರ ಪಾರದರ್ಶಕತೆ ಹೇಗಿತ್ತು? ಸಂಘಟನೆ ಕಾರ್ಯಕ್ರಮಕ್ಕೆ ಆಗಮಿಸಿದ ರಾಷ್ಟ್ರೀಯ ನಾಯಕರು ಹಾಗೂ ಸ್ಥಾನೀಯ ಕಾರ್ಯಕರ್ತರ ಮಾತುಕತೆ, ವ್ಯವಹಾರ, ಸಹವಾಸ ಸಂಬಂಧ ಹೇಗಿತ್ತು? ಬಿಡುವಿಲ್ಲದ ಕಾರ್ಯಕ್ರಮ ನೀಡುತ್ತಿದ್ದ ಸಂಘಟನೆ, ಕಾರ್ಯಕರ್ತರ ಸಮಸ್ಯೆಗೆ ಸ್ಪಂದಿಸಿದ್ದು ಎಷ್ಟು?

ಆಪದ್ಧರ್ಮ-ನಿತ್ಯಧರ್ಮದಲ್ಲಿ ವ್ಯತ್ಯಾಸವೇ ಕಾಣದಷ್ಟು ನಮ್ಮ ರೀತಿಯಾಯಿತಾ? ಚುನಾವಣೆ ನಮಗೆ ಒಂದು ಆಪತ್ಕಾಲ, ಆಗ ಅದನ್ನು ಗೆಲ್ಲಲು ಅಗತ್ಯ ನಿಯಮ, ರೀತಿ ನೀತಿ, ಸಂಪನ್ಮೂಲ, ತಂತ್ರ ರಣತಂತ್ರ ಹೆಣೆಯುವ ಅಗತ್ಯ ಖಂಡಿತಾ ಇದೆ. ಅದನ್ನು ಯಾರೂ ಪ್ರಶ್ನಿಸಲಾಗದು. ಅದು ಯುದ್ಧದ ಸಮಯ. ಸೇನಾಧಿಪತಿ ಹೇಳುವುದನ್ನು ಚರ್ಚಿಸದೇ ಪಾಲನೆ ಮಾಡಬೇಕಾಗಿರುವುದು ಪ್ರತಿ ಕಾರ್ಯಕರ್ತನ ಹೊಣೆ, ಕರ್ತವ್ಯ, ಸೂಚನೆ ಪಾಲನೆಗೆ ಅತೀ ಹೆಚ್ಚು ಮಹತ್ವ. ಆದರೆ ಸಂಘಟನೆ ಕಟ್ಟುವುದು ಸೂಚನೆ ನೀಡುವುದರಿಂದ ಆಗುವುದಿಲ್ಲ. ಇದು ಕಾರ್ಯಕರ್ತರ ಮನಸ್ಸನ್ನು ಕಟ್ಟುವ ಕಾರ್ಯ.

ಪ್ರತಿಯೊಬ್ಬರ ದೇಹ, ಮನಸ್ಸು, ಬುದ್ಧಿ, ಆತ್ಮ ಪ್ರತ್ಯೇಕ. ಅದರಲ್ಲಿ ಏಕತೆಯನ್ನು ಏಕರೂಪತೆಯನ್ನು ತರಲು ವಿಶೇಷ ಪ್ರಯತ್ನ ಅಗತ್ಯ. ಚಟುವಟಿಕೆಗಳ ಮೂಲಕ ಒಂದಾಗುತ್ತೇವೆ ನಿಜ. ಆದರೆ, ಆ ಚಟುವಟಿಕೆಗೆ ಮೊದಲು ಸಂಬಂಧಿಸಿದ ಕಾರ್ಯಕರ್ತರನ್ನೆಲ್ಲಾ ಸೇರಿಸಿ ನೈಜ ಪರಾಮರ್ಶೆ ಆಗಿದೆಯಾ? ಅವಸರದ ಪ್ರಕ್ರಿಯೆ ಮಾಡದೇ ಸಮಾಧಾನಕರ ಉತ್ತರ ಕಾರ್ಯಕರ್ತನಿಗೆ ಸಿಕ್ಕಿದೆಯಾ? 3 ವರ್ಷಗಳಿಂದ ಸಂಘಟನಾತ್ಮಕವಾಗಿ ಆರಂಭವಾದ ಸಮಸ್ಯೆಗಳು ತಾರ್ಕಿಕ ಅಂತ್ಯ ಕಂಡಿತಾ? ಸೇನಾ ಸಿದ್ಧತೆ ಮಾಡುವಾಗ ಸಂಶಯಗಳನ್ನು ಉಳಿಸಿ, ಯುದ್ಧಕ್ಕೆ ಆ ಸೈನ್ಯ ತೆಗೆದುಕೊಂಡು ಹೋದಾಗ ಎಷ್ಟು ಲಾಭ ಆಗುತ್ತೆ.? ಸಮುದ್ರದ ನೆಂಟಸ್ತನ-ಉಪ್ಪಿಗೆ ಬಡತನ ಸ್ಥಿತಿ ನಮ್ಮದು. ವಿಶ್ವದಲ್ಲಿ ಅತೀ ಹೆಚ್ಚು ಸದಸ್ಯರಿರುವ ಪಕ್ಷ, ಸಂಘಟನೆ ನಮ್ಮದು ಆದರೆ ಬೂತ್ ಸಮಿತಿ, ಪೇಜ್ ಸಮಿತಿಗೆ ಜನರಿಲ್ಲದ ಸ್ಥಿತಿ. ಇಷ್ಟೆಲ್ಲಾ ಸಂಘಟನೆ ಜಾಲದ ವ್ಯವಸ್ಥೆ ಇದ್ದಾಗಲೂ ಈಗ ಸೋಲಾಗಲು ಕಾರಣ ಜಾತಿ, ಯಾವುದೋ ವ್ಯಕ್ತಿ, ನೇತೃತ್ವ, ಟಿಕೇಟ್ ಹಂಚಿಕೆ ಗೊಂದಲ, ರಾಜ್ಯ ಸರ್ಕಾರದ ವೈಫಲ್ಯಗಳು, ಕೆಲವು ವ್ಯಕ್ತಿಗಳ ಹಠಮಾರಿತನ ಎನ್ನುವ ವಿಶ್ಲೇಷಣೆಗೆ ಏನು ಅರ್ಥವಿದೆ. ವ್ಯವಸ್ಥೆಯಲ್ಲಿನ ಟೊಳ್ಳು – ಗಟ್ಟಿತನದ ವಿಮರ್ಶೆ ಆಗಬೇಕಾಗಿದೆ.

ಇಂದಿನವರೆಗೆ ಈ ಪಕ್ಷವನ್ನು ಬೆಳೆಸಿದ ಹಿರಿಯರು, ಕಾರ್ಯಕರ್ತರ ಮನದಲ್ಲಿ ಒಂದು ಉನ್ನತ ಧ್ಯೇಯವನ್ನು ಬಿತ್ತಿದ್ದರು. ಬೆಳೆಸುವ ಪ್ರಯತ್ನ ಮಾಡಿದ್ದರು. ಧ್ಯೇಯ ನಿಷ್ಠೆ ಜೀವನ ನಡೆಸುವಂತೆ




ವ್ಯವಸ್ಥೆ ರೂಪಿಸಿದ್ದರು. ಅಗತ್ಯ ಬಂದಾಗ ಮೇಲ್ಪಂಕ್ತಿಯಾಗಿ ನಿಂತರು. ಪದವಿ, ಪುರಸ್ಕಾರ, ಸುಖಕರ ಸೌಲಭ್ಯಗಳ ವ್ಯವಸ್ಥೆಯಿಂದ ದೂರವಿರಿಸಿದರು. ಒಂದು ಒಳ್ಳೆಯ ಬೀಜ ಮಣ್ಣಿನಲ್ಲಿ ಬೆಳೆಯುವಾಗ ಏನೆಲ್ಲಾ ಕಷ್ಟ ಸಹಿಸಬೇಕಾಗುತ್ತೋ, ಬೆಳೆದ ನಂತರ ಬೇಕಾದ ರಕ್ಷಣೆ, ಫಲ ನೀಡುವಾಗ ನಿಸ್ವಾರ್ಥವಾಗಿ ನೀಡುವ ಬುದ್ಧಿಯನ್ನು ಕಲಿಸಿಕೊಟ್ಟರು. ಜೀವನದ ಉದ್ದೇಶವನ್ನು ನಿತ್ಯ ಸ್ಮರಿಸುವಂತೆ ಮಾಡಿದರು. ಅನಗತ್ಯ ಸಂಗತಿಗಳು ಬೆಳೆದಾಗ ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಗಿಡದ ಸಂರಕ್ಷಣೆ ಮಾಡಿದರು. ಈಗ ನಡೆಯುತ್ತಿರುವ ಕಾರ್ಯದಲ್ಲಿ ಇದೆಯೇ ಎಂಬ ವಿಮರ್ಶೆ ನಡೆಯಬೇಕಾಗಿದೆ.

ಕಾಂಗ್ರೆಸ್ ಮತ್ತಿತರ ಪಕ್ಷದ ಹೈಕಮಾಂಡ್ ಪದವಿ, ಹೈ ಕಮಾಂಡ್ ವ್ಯವಸ್ಥೆ, ನಿರ್ಣಯವನ್ನು ಒಂದು ಕಾಲದಲ್ಲಿ ಟೀಕಿಸುತ್ತಿದ್ದ ನಮಗೆ, ನಮ್ಮ ಪಕ್ಷದ ವಿಭಿನ್ನ ಹೈಕಮಾಂಡ್ ಸ್ತರಗಳು ಬಂದಿದ್ದು, ಬೇರು ಬಿಟ್ಟಿದ್ದು ಗೊತ್ತಾಗಲಿಲ್ಲ. ಬದಲಾಗಿ, ಆ ವ್ಯವಸ್ಥೆಯನ್ನು ಗೌರವಿಸುತ್ತಾ ನಾವೇ ಆ ವ್ಯವಸ್ಥೆಯಲ್ಲಿ ಆತ್ಮರತಿ ಹೊಂದಲು ಆರಂಭಿಸಿರುವುದು ವಿಪರ್ಯಾಸ. ವಂಶಪಾರಂಪರ್ಯ ಆಡಳಿತ ಟೀಕಿಸುತ್ತಿದ್ದ ನಾವು, ನಮ್ಮ ಪಕ್ಷದಲ್ಲಿ ಅದು ಕಾಣಿಸಿಕೊಂಡು ಹೆಮ್ಮರವಾಗಿ ಬೆಳೆಯಲು ಆರಂಭಿಸಿದಾಗ ವಂಶಪಾರಂಪರ್ಯ ಆಡಳಿತಕ್ಕೆ ಹೊಸ ವ್ಯಾಖ್ಯೆಯನ್ನು ನೀಡಿದವರು. 'ಗಣಪತಿಯನ್ನು ಮಾಡಲು ಹೋಗಿ ಅವರಪ್ಪನನ್ನು ಮಾಡಿದ ಪರಿ' ನಮ್ಮದು! ವಿಮರ್ಶೆ ಎಲ್ಲಾ ಹಂತಗಳಲ್ಲೂ ಈ ಬಗ್ಗೆ ಆಗಬೇಕಾಗಿದೆ.

ನಮ್ಮದು ಕಾರ್ಯಕರ್ತ ಆಧಾರಿತ ಬಹುಜನರ ಪಕ್ಷ (Cader Based Mass Party) 300 ಮಂಡಲ, 40 ಜಿಲ್ಲೆ, 224 ವಿಧಾನಸಭಾ ಕ್ಷೇತ್ರ, 28 ಲೋಕಸಭಾ ಕ್ಷೇತ್ರವಿರುವ ನಮ್ಮ ರಾಜ್ಯದಲ್ಲಿ ಬಿಜೆಪಿ ಸಂಘಟನೆ (ರಾಜ್ಯಕ್ಕೆ) ಹಾಗೂ ಸರ್ಕಾರಕ್ಕೆ ನಮ್ಮದೊಂದು ಪರಿಗಣಿಸಬಹುದಾದ ಸಲಹೆ ನೀಡುವಷ್ಟು ಸಬಲವಾಗಿದೆಯಾ? ಮೇಲಿನಿಂದ ನೀಡುವ ಆಜ್ಞಾಪಾಲನೆ ಮಾಡುವ ಕಾರ್ಯಕರ್ತರನ್ನು ನಿರ್ಮಾಣ ಮಾಡುತ್ತಿದೆಯಾ ಅಥವಾ 'ತಮಗೆ ಸರಿ' ಎನ್ನಿಸಿದ್ದನ್ನು ನಮ್ಮದೇ ಪ್ರಜಾಪ್ರಭುತ್ವ ವ್ಯವಸ್ಥೆ ರೀತಿಯಲ್ಲಿ ರಾಜ್ಯಕ್ಕೆ ತಿಳಿಸುವ ಸ್ತರದ ಸಮಿತಿಗಳನ್ನು ಬೆಳೆಸಿದ್ದೀವಾ? ಸಂಘಟನೆ ಕೇಂದ್ರಿತ ಕಾರ್ಯದ ವರ್ಧನೆ ಆಗುತ್ತಿದೆಯಾ? ಅಥವಾ ಚುನಾಯಿತ ವ್ಯಕ್ತಿ ಕೇಂದ್ರಿತ



ಕಾರ್ಯವರ್ಧನೆ ಆಗಿ ಬೆಳೆಯುತ್ತಿದಿಯಾ. ಈ ಬಗ್ಗೆ ವಿಮರ್ಶೆ ಅಲ್ಲ-ಪರಾಮರ್ಶೆ ಆಗಬೇಕಾಗಿದೆ. ಈಗ ಮಾಡುತ್ತಿರುವ ಕಾರ್ಯ ಅನುಪಯೋಗಿ ಎನ್ನಲು ನಾನು ಬರೆಯುತ್ತಿಲ್ಲ, ಸೋಲನ್ನು ಮಾಧ್ಯಮಗಳು ವಿಶ್ಲೇಷಣೆ ಮಾಡುತ್ತಾರೆ. ಅದು ಅವರ ಹಕ್ಕು ಕೂಡಾ ಆದರೆ ಒಳ್ಳೆಯ ಸಂಗತಿ ಬಗ್ಗೆ ಅವರ ಅವಲೋಕನಕ್ಕಿಂತ ಹೆಚ್ಚಾಗಿ ನಮ್ಮನ್ನು ಧರಾಶಾಯಿಯನ್ನಾಗಿ ಮಾಡುವುದರಲ್ಲಿ ಮತ್ತು ಅವರು ಹೇಳುವುದು ಮಾತ್ರ ನಿಜ ಎಂಬ ಮನೋಭಾವದಿಂದ ಬರೆಯುತ್ತಾರೆ. ಅದು ಎಚ್ಚರಿಕೆ ಗಂಟೆ ಮಾತ್ರ. ಆದರೆ ಶಬ್ಧ ನಮ್ಮನ್ನು ಎಚ್ಚರಿಸಲು ಮಾತ್ರ. ಅದರಿಂದ ಮುಂದೆ ಹೋಗಲು ನಾವೇ ಪ್ರಯತ್ನಿಸಬೇಕು. ನಮಗೆ ನಾವೇ ದಾರಿದೀಪ ಆತ್ಮದೀಪೋಭವ-ಭಗವಾನ್ ಬುದ್ಧನ ಮಾತಿನಂತೆ ನಡೆಯುವ ದಿಟ್ಟತನ ತೋರಬೇಕಾಗಿದೆ.

ಘಟಿಸಿರುವ ಘಟನೆಗಳನ್ನು ಚರ್ಚಿಸುವುದು ವಿಮರ್ಶೆ. ಅವರು 'ವಿಮರ್ಶಕರು'-ಮುಂದೆ ಆಗಬೇಕಾದ್ದನ್ನು ಚಿಂತಿಸಿ ಯೋಜಿಸುವವರು ಪರಾಮರ್ಶೆ ಮಾಡುವರು. ಅವರು 'ಪರಾಮರ್ಶಕರು' ರಾಜಕೀಯ ಭಾಷೆಯಲ್ಲಿ ಹೇಳುವ ವ್ಯಾಖ್ಯೆ ಮುಂದಿನ ಚುನಾವಣೆ ಬಗ್ಗೆ ಯೋಚಿಸಿ ಕಾರ್ಯ ಮಾಡುವುದು ರಾಜಕೀಯ ನೇತಾರ. ಮುಂದಿನ ಜನಾಂಗದ ಬಗ್ಗೆ ಯೋಚಿಸಿ ಕಾರ್ಯಪ್ರವೃತ್ತರಾಗುವ ಯೋಜನೆ ಮಾಡುವರು ಮುತ್ಸದ್ದಿಗಳು. ಮುಂದಿನ ಹಲವು ಪೀಳಿಗೆಗಳ ಬಗ್ಗೆ ಯೋಜಿಸಿ, ತಪಸ್ಸುಮಾಡಿ, ಚಿಂತನೆ ಮಾಡಿ ಕಾರ್ಯಪದ್ಧತಿಯ ಬೀಜವನ್ನು ಬಿತ್ತುವವರು ದೃಷ್ಟಾರರು ನಮ್ಮ ಪಕ್ಷದ ಸಿದ್ಧಾಂತ, ಕಾರ್ಯಪದ್ಧತಿ, ಕಾರ್ಯಕರ್ತ ಎಲ್ಲವೂ ದೃಷ್ಟಾರರು ಕಂಡುಕೊಂಡಿರುವುದು ಯಾವುದೋ ಸಣ್ಣ ಉದ್ದೇಶಕ್ಕಲ್ಲ. ಬದಲಾಗಿ ನಮ್ಮ ಸಂಸ್ಕೃತಿ, ಧರ್ಮ, ಸಮಾಜ ಶಾಶ್ವತವಾಗಿ ಉಳಿಯಲು ನಿರಂತರತೆಯಿಂದ ಮುಂದುವರೆಯುವ ಶಕ್ತಿಯನ್ನು ಸಂಘಟನೆ ಮೂಲಕ ಕಟ್ಟುವ ಸಂಕಲ್ಪ ನಮ್ಮ ಮುಂದಿದೆ. ಇದೊಂದು ವಿಚಾರಯಾತ್ರೆ. ನಮ್ಮ ದೇಶದ ಯಾತ್ರೆಯ ಕಲ್ಪನೆ. ಭಾರತದ ಮಣ್ಣಿನಲ್ಲಿ 'ಕಂಕರ್ ಕಂಕರ್ ಮೇ ಶಂಕರ್ ಹೈ' ಎನ್ನುವ ಭಾವನೆಯಿಂದ ಯಾತ್ರೆ. ಹಾಗಾಗಿ ಅದು ಬಹಳ ದೀರ್ಘಕಾಲದ ಯಾತ್ರೆ. ನಮ್ಮ ದೃಷ್ಟಾರರು ಕಂಡುಕೊಂಡ ಸತ್ಯದ ಅನಾವರಣದ ಕಾಯಕದಲ್ಲಿದ್ದೇವೆ. ಎಷ್ಟೋ ಜನರ ತ್ಯಾಗದ ಬಲಿದಾನದ ಆಧಾರದ ಮೇಲೆ ಈ ಸತ್ಯ, ಧರ್ಮ ನಿಲ್ಲುತ್ತದೆ, ಬೆಳೆಯುತ್ತದೆ. ತಾತ್ಕಾಲಿಕ ಸೋಲು ಗೆಲುವಿನ ನಿರ್ಧಾಣ ನಮ್ಮದಲ್ಲ. ನಮ್ಮ ಗಂತವ್ಯ ಬಹಳ ದೂರದಲ್ಲಿದೆ. ಹಾಗಾಗಿ ನಮ್ಮ ಪ್ರಯತ್ನ ಸದಾಕಾಲ ಇರಲಿ. ನಮ್ಮ ಪರೀಕ್ಷೆಯೂ ಇದೇ ಆಗಿದೆ. ಪರಿಣಾಮವನ್ನು ಕಾರಣವೆಂದು ಕಾರಣವನ್ನು ಪರಿಣಾಮವೆಂದು ಭ್ರಮೆಗೆ ಒಳಗಾಗುವ ಅಗತ್ಯವಿಲ್ಲ, ಅಪನಂಬಿಕೆ ಬೇಡ. ವಿಶ್ವಾಸವಿಟ್ಟು ಮುನ್ನಡೆಯೋಣ. ಕ್ಷಣಕ್ಷಣದ ಭ್ರಾಂತಿಗೆ ಮರುಳಾಗುವುದು ಬೇಡ.

### ಕೊನೆಗೊಂದು ಕಥೆ

ಒಂದು ಕಥೆ ಇದೆ, ಜನರು ಗಿಡಗಳನ್ನು ನೆಡುವ ಕಾರ್ಯ ಮಾಡುತ್ತಿದ್ದರು. ಉತ್ತಮವಾದ ಫಲ ವೃಕ್ಷಗಳ ಬೀಜ ಹಾಗೂ ಸಸಿಗಳನ್ನು ನೆಡುತ್ತಿದ್ದರು. ಮರದ ಮೇಲೆ ಮಂಗವೊಂದು ಕುಳಿತು ವೀಕ್ಷಿಸುತ್ತಿತ್ತು. ಜನರು ಕೆಲಸ ಮುಗಿಸಿ ಮನೆಗೆ ತೆರಳಿದ ನಂತರ, ಮಂಗ ಅಲ್ಲಿ ಬಿದ್ದಿದ್ದ ಮಾವಿನ ಹಣ್ಣಿನ ಓಟೆ (ಬೀಜ) ಯೊಂದನ್ನು ಸಂಪಾದಿಸಿತು. ದೂರದಲ್ಲಿದ್ದ ತನ್ನ ವಾಸಸ್ಥಾನಕ್ಕೆ ತೆರಳಿ, ಆ ಮರದ ಬುಡದಲ್ಲಿ ಆ ಬೀಜವನ್ನು ನೆಲದೊಳಗೆ ಬಿತ್ತಿತು. ಪ್ರತಿ ಗಂಟೆಗೊಮ್ಮೆ ಈ ಬೀಜ ಹೇಗಿದೆ ಎಂದು ಮಣ್ಣಿನಿಂದ ತೆಗೆದು ನೋಡಿತು. ಸಂಜೆಯಾದರೂ ಏನೂ ಫಲವಿಲ್ಲದ ಕಾರಣ ಓಟೆ ಎಸೆದು ಹೋಯಿತು. ಜನರು ನೆಟ್ಟ ಬೀಜ, ಸಸಿಗಳಿಗೆ ಕಾಲಕಾಲಕ್ಕೆ ನೀರು, ಗೊಬ್ಬರ, ರಕ್ಷಣೆ ವ್ಯವಸ್ಥೆ ಮಾಡಿದ್ದನ್ನು ಮಂಗ ನೋಡಲೂ ಇಲ್ಲ-ಅನುಸರಿಸಲೂ ಇಲ್ಲ. ಹಾಗಾಗಿ ಆ ಮಂಗದ ರೀತಿಯ ಬುದ್ಧಿ ನಮ್ಮದಾಗದಿರಲಿ ಎಂಬ ವಿನಂತಿ.

## ಚರ್ಚೆಗೊಂದು ಸಾಲು...

**ಸಂಕಷ್ಟಗಳು ಬಂದಾಗ ಸಂಬಂಧಗಳು ಗಟ್ಟಿಯಾಗಬೇಕು. ಸಂಘಟನೆಯೂ ಕೂಡ...**

# ಉತ್ತಮ ಪಕ್ಷ

## ಸೋಲುವುದು ಹೇಗೆಂದರೆ...





ಸಂತೋಷ್ ತಮ್ಮಯ್ಯ
ಪತ್ರಕರ್ತರು ಹಾಗೂ ಅಂಕಣಕಾರರು

‘ಮತದಾರನು ಹಕ್ಕೊತ್ತಾಯದಿಂದ ಕೇಳಬೇಕು.
ಅವನು ಮೌಲ್ಯಮಾಪನ ಮಾಡಿ ತನ್ನನ್ನು ತಾನು ದೃಢವಾಗಿ
ಪ್ರತಿಪಾದಿಸಿಕೊಳ್ಳಬೇಕು. ಮತದಾರನು ತಾನು
ಒಂದು ತತ್ವಕ್ಕಾಗಿ, ಸಿದ್ಧಾಂತಕ್ಕಾಗಿ ಮತ ನೀಡುತ್ತೇನೆಂದು,
ಯಾವುದೇ ಪಕ್ಷಕ್ಕೆ ಅಲ್ಲವೆಂದು, ಯಾವುದೇ ವ್ಯಕ್ತಿತ್ವಕ್ಕೆ ಅಲ್ಲವೆಂದು,
ಹಣಕ್ಕಾಗಿ ಅಲ್ಲವೆಂದು ತಿಳಿದುಕೊಳ್ಳಬೇಕು’



1950ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಹೀಗೆ ಹೇಳಿದ್ದನ್ನೇ 1961ರಲ್ಲಿ ಪಂ. ದೀನದಯಾಳ ಉಪಾಧ್ಯಾಯರು ಹೇಳಿದ್ದು ಹೀಗೆ:

ಮತದಾರನು ಧ್ಯೇಯವನ್ನು ಪರಿಗಣಿಸಲಿ, ಜಾತಿಯನ್ನಲ್ಲ ವಿಜಯಿಯಾದವನ ಜೊತೆಗಿರುವುದಕ್ಕಿಂತಲೂ ಯೋಗ್ಯನಾದವನನ್ನು ಅನುಸರಿಸಲಿ. ಯೋಗ್ಯನಾದ ಮನುಷ್ಯನನ್ನು ಆರಿಸಿ ಮತ್ತು ನೀವು ಆರಿಸಿದ ವ್ಯಕ್ತಿಯು ವಿಜಯಿಯಾಗುವಂತೆ ನೋಡಿಕೊಳ್ಳಿ, ಅದು ನಿಮ್ಮ ವಿಜಯವಾಗುತ್ತದೆ. ಏಕೆಂದರೆ ರಾಜಕೀಯ ಪಕ್ಷಗಳ ವಾಸ್ತುಶಿಲ್ಪಿಗಳೇ ಜನರು ಮತ್ತು ಅವರ ಮೂಲಕವೇ ಪಕ್ಷಗಳ ರಾಜಕೀಯ ಹಣೆಬರಹ ಸರ್ವರಿಗೂ ಸಾಮಾಜಿಕ ನ್ಯಾಯ ಸಿಗಬೇಕೆಂಬ ನಿಟ್ಟಿನಲ್ಲಿ ರಚಿಸಿದ ಸಂವಿಧಾನ ಮತ ಪ್ರಕ್ರಿಯೆಯ ಮೂಲಕ ಸಾಕಾರವಾಗುವುದೆಂಬ ಕನಸನ್ನು ಹೊತ್ತುಕೊಂಡೇ ಅಂಬೇಡ್ಕರರು ಕಾಲವಾದರು.

ಆದರೆ ಯಾವ ಕಾಂಗ್ರೆಸ್ ಅಂಬೇಡ್ಕರರ ಕನಸುಗಳನ್ನು ಈಡೇರಿಸಲಿದೆ ಎಂದು ದೇಶ ಅಂದುಕೊಂಡಿತ್ತೋ ಕ್ರಮೇಣ ಅಂಬೇಡ್ಕರರ ಆಶಯಗಳನ್ನೆಲ್ಲಾ ಅದು ಮಣ್ಣುಪಾಲು ಮಾಡುತ್ತಾ ಬಂತು. ಅಂಬೇಡ್ಕರರ ಆದರ್ಶಗಳು ಕಾಂಗ್ರೆಸ್ ಕಾಲದಲ್ಲಿ ಅನುಕೂಲಕ್ಕೆ ತಕ್ಕಂತೆಯೇ ಬಳಕೆಯಾದವು, ಮತವನ್ನೂ ಖರೀದಿಸಬಹುದು ಎಂಬುದನ್ನು ಕೆಲವೇ ವರ್ಷಗಳಲ್ಲಿ ಕಾಂಗ್ರೆಸ್ ತೋರಿಸಿಕೊಟ್ಟಿತು. ಚುನಾವಣೆಗಳಿಂದ ಚುನಾವಣೆಗಳಿಗೆ ಅಂಬೇಡ್ಕರರು ಹೇಳಿದ ಮತದಾನ ಪ್ರಕ್ರಿಯೆ ಕುಲಗೆಡುತ್ತಾ ಸಾಗಿತು. ಕೆಲವೇ ವರ್ಷಗಳಲ್ಲಿ ಕಾಂಗ್ರೆಸ್ ಮತದಾನ ಪ್ರಕ್ರಿಯೆಗಳಲ್ಲಿ ಎಲ್ಲಾ ರೂಕ್ಷ ಮತ್ತು ಲಂಡತನಗಳನ್ನು ಪ್ರಯೋಗಕ್ಕಿಟ್ಟಿತು. ಅದರ ಪರಿಣಾಮ ಇತರ ಪಕ್ಷಗಳಿಗೆ ಮುಟ್ಟಲು ಹೆಚ್ಚು ಸಮಯ ಬೇಕಿರಲಿಲ್ಲ.

ಪಂ. ದಿನದಯಾಳ ಉಪಾಧ್ಯಾಯರು ಮತದಾನದಲ್ಲಿ ಜಾತಿ ವಿಷಯವನ್ನು ಪ್ರಸ್ತಾಪಿಸಿದ್ದು ಮತ್ತು ಜನರನ್ನು ಪ್ರಜಾಪ್ರಭುತ್ವದ ವಾಸ್ತುಶಿಲ್ಪಗಳು ಎಂದಿದ್ದು ಇದೇ ಸಂದರ್ಭದಲ್ಲಿ, ದೀನದಯಾಳರು ಹಾಗಂದ ಸಮಯದಲ್ಲೇ ಖ್ಯಾತ ಸಮಾಜವಾದಿ ನಾಯಕ ರಾಮಮನೋಹರ ಲೋಹಿಯಾ ಬಿಹಾರದಲ್ಲಿ ಸ್ಪರ್ಧಿಸಬೇಕಾಗಿದ್ದ ಕ್ಷೇತ್ರವೊಂದರಿಂದ ಕೊನೆ ಕ್ಷಣದಲ್ಲಿ ಹಿಂದೆ ಸರಿದಿದ್ದರು. ಅದಕ್ಕಿದ್ದ ಕಾರಣ ಲೋಹಿಯಾ ಅವರ ಜಾತಿಯ ಮತದಾರರು ಆ ಕ್ಷೇತ್ರದಲ್ಲಿ ನಿರ್ಣಾಯಕರಾಗಿಲ್ಲದೆ ಇರುವುದು, ಅದೇ ಹೊತ್ತಿನಲ್ಲಿ ಕಾಂಗ್ರೆಸ್ ಕಲ್ಕತ್ತಾದ ಕೆಲವು ವಾಣಿಜ್ಯ ಉದ್ಯಮಿಗಳನ್ನು ಲೋಕಸಭೆಗೆ ಟಿಕೇಟು ನೀಡುವ ಭರವಸೆಯನ್ನು ನೀಡಿ ವಿಧಾನಸಭೆ ಚುನಾವಣೆಗೆ ದೇಣಿಗೆಯನ್ನು ಸಂಗ್ರಹಿಸಿತ್ತು! ಸ್ವತಃ ಕಾಂಗ್ರೆಸ್ ಹಾಗೆ ಮಾಡಿದ್ದರಿಂದ ಸ್ವತಂತ್ರ ಪಕ್ಷ ಕೂಡ ಅದೇ ಮಾರ್ಗವನ್ನು ಹಿಡಿದು 'ದಲಾಲ್ ಸ್ಟ್ರೀಟ್' ಪಕ್ಷವೆಂದೇ ಹೆಸರಾಯಿತು.

ಈ ಚುನಾವಣೆಯಲ್ಲಿ ಸಿದ್ಧಾಂತದ ಗುಂಗಲ್ಲಿದ್ದ ಆಚಾರ್ಯ ಕೃಪಲಾನಿ ಮತ್ತು ಆಚಾರ್ಯ ನರೇಂದ್ರ, ದೇವರಂಥ ಮಹಾನ್ ನಾಯಕರು ಹೀನಾಯವಾಗಿ ಸೋಲುವ ಮೂಲಕ ತೂಕದ ವ್ಯಕ್ತಿಗಳು ಮತಗಳ ಲೆಕ್ಕದಲ್ಲಿ ಸೋಲುವರೆಂಬುದನ್ನು ದೇಶ ಮೊಟ್ಟ ಮೊದಲ ಬಾರಿಗೆ ನೋಡಿತು. ಇವೆಲ್ಲವೂ ಅಂದು ದೊಡ್ಡ ಚರ್ಚೆಯ ಸಂಗತಿಗಳಾಗಿದ್ದವು, ಅಂಬೇಡ್ಕರರ ಆಶಯ ಎಲ್ಲಿಗೆ ಮುಟ್ಟಿದೆ ಎಂದು ದಾರ್ಶನಿಕರು ಆತಂಕ ವ್ಯಕ್ತಪಡಿಸಿದ್ದರು.

ಆದರೆ ಈ ಪ್ರಕ್ರಿಯೆಗಳು ಇಂದು ಚುನಾವಣಾ ರಾಜಕೀಯದಲ್ಲಿ ಅತ್ಯಂತ ಸಹಜ ವಿದ್ಯಮಾನಗಳು! 50ರ ದಶಕದಲ್ಲಿ ಆರಂಭವಾದ ಈ ಬೆಳವಣಿಗೆಗಳು ಪ್ರತೀ ಚುನಾವಣೆಗಳಲ್ಲೂ ಮುಂದುವರೆದು ಪರಿಸ್ಥಿತಿ ಈ ಹಂತವನ್ನು ಮುಟ್ಟಿದೆ. ಕಳೆದ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋತಿದೆ. ಆದರ ಪ್ರಜಾಪ್ರಭುತ್ವವನ್ನು ಗೆಲ್ಲಿಸಿದ ಪಕ್ಷಗಳು ಯಾವುವು ಎಂಬುದನ್ನು ಲೆಕ್ಕಹಾಕಿದರೆ ಬಟಾಬಯಲೊಂದೇ ಕಾಣಿಸುತ್ತದೆ. ಅಂದರೆ ಮತದಾನ ಪ್ರಕ್ರಿಯೆಗಳು ಆರಂಭವಾದ ಕಾಲದಿಂದಲೂ ಮೌಲ್ಯಗಳು ಕುಲಗೆಡುತ್ತಾ ಬಂದಿವೆ, ಹಣ, ಜಾತಿಗಳ ಲೆಕ್ಕವಿಲ್ಲದೆ ಇಂದು ಯಾವ ಚುನಾವಣೆಯೂ ನಡೆಯುತ್ತಿಲ್ಲ ಎಂಬ ಸತ್ಯವನ್ನು ಒಪ್ಪಿಕೊಂಡವರೆಲ್ಲರೂ ಪ್ರಜಾಪ್ರಭುತ್ವದ ಆಶಯಗಳು ಮಣ್ಣುಪಾಲಾಗುತ್ತಿವೆ ಎಂಬುದನ್ನೂ, ಇವೆಲ್ಲವನ್ನೂ ಆರಂಭಿಸಿದವರು ಕಾಂಗ್ರೆಸಿಗರು ಎಂಬುದನ್ನೂ ಒಪ್ಪಿಕೊಳ್ಳಲೇಬೇಕು.

ಅಂದು ಹೇಗೆ ಕಾಂಗ್ರೆಸಿನ ವಿರುದ್ಧ ಗೆಲ್ಲಲು ಸ್ವತಂತ್ರ ಪಕ್ಷ ಹಾದಿತಪ್ಪಿತ್ತೋ ಇಂದು ಎಲ್ಲಾ ಪಕ್ಷಗಳೂ ಹಾಗೆ ಹಾದಿತಪ್ಪಿದೆ, ಕಾಂಗ್ರೆಸಿನೊಳಗೆ ಏನೇನು ಹುಳುಕುಗಳಿದ್ದವೋ ಅವೆಲ್ಲವೂ ಇಂದು ಎಲ್ಲಾ ಪಕ್ಷಗಳಿಗೂ ಹರಡಿವೆ. ಸಮಾಜಕ್ಕೆ ಧರ್ಮವು ಹೇಗೋ ಪಕ್ಷಕ್ಕೆ ಶಿಸ್ತು ಹಾಗೆ ಎನ್ನುವ ಹಳೆಯ ರಾಜಕೀಯ ಪಂಡಿತರ ಹೇಳಿಕೆಗಳು ಇಂದು ಪಕ್ಷಗಳ ವಕ್ತಾರರ ಹೇಳಿಕೆಗಳಲ್ಲಿಯೋ, ಶಿಸ್ತು ಸಮಿತಿ ಎಂಬ ಉತ್ಸವ ಮೂರ್ತಿಗಳಂತಿರುವ ಸಮಿತಿಗಳಲ್ಲಿಯೋ ನಮಗೆ ಕೇಳಿಸಬಹುದೇ ಹೊರತು ಕಾರ್ಯವೈಖರಿಗಳಲ್ಲಿಲ್ಲ. ಏಕೆಂದರೆ ಯಾವ ಪಕ್ಷಗಳಲ್ಲಿಯೂ ಇಂದು ಶ್ರದ್ಧೆ, ಭಕ್ತಿಗಳಿಲ್ಲ, ಅವಿಲ್ಲದ ಕಾರಣ

ಭಿನ್ನಾಭಿಪ್ರಾಯಗಳು ರಾಜಕೀಯದಲ್ಲಿ ಸಾಮಾನ್ಯ ಎಂಬಂತಾಗಿವೆ. ಭಿನ್ನಾಭಿಪ್ರಾಯಗಳಿದ್ದಲ್ಲಿ ಸ್ವಹಿತಾಸಕ್ತಿ, ಗುಂಪುಗಾರಿಕೆಗಳು ಸಹಜವಾಗಿ ಹುಟ್ಟುತ್ತವೆ. ಗುಂಪುಗಾರಿಕೆಯಿಂದ ಪೀಡಿತರಾಗಿರುವ ಪಕ್ಷ ಮತ್ತು ಈ ಕ್ಷೇತ್ರಗಳಲ್ಲಿ ಪ್ರಭಾವಶೂನ್ಯತೆ ಮನೆಮಾಡುತ್ತದೆ. ಅವು ತಮ್ಮ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ಕಳೆದ ಚುನಾವಣೆಗಳಲ್ಲಿ ಇವು ಅನೇಕ ಕ್ಷೇತ್ರಗಳಲ್ಲಿ ಕಂಡುಬಂದಿವೆ.

ಚುನಾವಣೆಯ ನಂತರದ ಅವಲೋಕನ ಸಾಮಾನ್ಯವಾಗಿ ಪಕ್ಷಾಧಾರಿತವಾಗಿ ನಡೆಯುತ್ತದೆ. ಆದರೆ ಅದಕ್ಕೂ ಮೀರಿದ ಅವಲೋಕನವೊಂದನ್ನು ಸಾಮಾನ್ಯವಾಗಿ ಯಾವ ಪಕ್ಷಗಳೂ ಮಾಡುತ್ತಿಲ್ಲ, ಹಾಗಾಗಿ ಇಂದಿನ ವಿಶ್ಲೇಷಣೆ, ವಿಮರ್ಶೆ, ಅವಲೋಕನಗಳಲ್ಲಿ ಮುಂದಿನ ರಾಜಕೀಯದ ಪರಿಸ್ಥಿತಿಯೇನು ಎಂಬುದು ಯಾರ ಗಣನೆಗೂ ಬರುತ್ತಿಲ್ಲ. ಅದು ಗಣನೆಗೆ ಬಾರದ ಪ್ರಜಾಪ್ರಭುತ್ವದ ಆಶಯಗಳು ಈಡೇರುವುದೂ ಇಲ್ಲ.

ಮೌಲ್ಯಾಧಾರಿತ ರಾಜಕಾರಣದ ಮಹತ್ವವನ್ನಂತೂ ಈ ಚುನಾವಣೆ ತೋರಿಸಿದೆ. ಕೆಲವರ ಸೋಲು ಮತ್ತು ಗೆಲುವುಗಳನ್ನು ಮೇಲುನೋಟಕ್ಕೆ 'ಅಚ್ಚರಿ' ಎಂಬಂತೆ ಬಿಂಬಿಸಿದ್ದರೂ ಅವೆಲ್ಲದರ ಅಂತರ್ಯದಲ್ಲಿ ಉತ್ತಮ ಪಕ್ಷ ಮತ್ತು ಉತ್ತಮ ಅಭ್ಯರ್ಥಿ ಎಂಬ ತತ್ವ ಅಡಗಿದ್ದಂತೂ ಸುಳ್ಳಲ್ಲ. ಹಾಗಾದರೆ ಉತ್ತಮ ಪಕ್ಷ ಯಾವುದು? ಕಾಂಗ್ರೆಸಿನಂಥಾ ಪಕ್ಷವೇ ಅಧಿಕಾರಕ್ಕೆ ಬಂತಲ್ಲಾ ಎಂಬ ವಿಶ್ಲೇಷಣೆಗಳು ಇಲ್ಲಿ ಮುಖ್ಯವಾಗುವುದಿಲ್ಲ. ಈ ಚುನಾವಣೆ ಉತ್ತಮ ಪಕ್ಷ ಎಂಬ ಹಣೆಪಟ್ಟಿ ಹೊತ್ತವರಿಗೆ ಪಾಠ ಕಲಿಸಿದೆ ಎನ್ನುವುದೇ ಹೆಚ್ಚು ಸೂಕ್ತ.

ಏಕೆಂದರೆ ಕಳೆದ ಮೂರು ದಶಕಗಳಿಂದ ಇಡೀ ದೇಶದಲ್ಲಿ ಉತ್ತಮ ಪಕ್ಷ ಯಾವುದು, ಪ್ರಜಾಪ್ರಭುತ್ವದ ಆಶಯಗಳನ್ನು ಈಡೇರಿಸಬಲ್ಲ ಸಾಮರ್ಥ್ಯ ಯಾರಿಗಿದೆ ಎಂಬುದನ್ನು ನೋಡಿದಾಗ ಕಾಣುವುದು ಬಿಜೆಪಿಯಂಥ ಗಟ್ಟಿ ಸಿದ್ಧಾಂತದ ಪಕ್ಷವೇ, ಆದರೆ ಯಾವಾಗ ಬಿಜೆಪಿಯೂ ತನ್ನಂತೆಯೇ ಎಂಬುದನ್ನು ಕಾಂಗ್ರೆಸ್ ಸಮರ್ಥವಾಗಿ ಮಂಡಿಸತೊಡಗಿತೋ ಆಗ ಬಿಜೆಪಿಯೂ ಸೋಲುವ ಪಕ್ಷವಾಯಿತು.

ಸ್ವಾತಂತ್ರಾನಂತರ ಜನಸಂಘ ಮತ್ತು ಕಮ್ಯುನಿಸ್ಟ್ ಪಕ್ಷಗಳೆರಡು ಬಹುಕಾಲದವರೆಗೂ ಜನರ ಕಣ್ಣಿಗೆ ಉತ್ತಮ ಪಕ್ಷಗಳೇ ಆಗಿದ್ದವು. ಕಮ್ಯುನಿಸ್ಟರಂತೂ ಸಾಕಷ್ಟು ಪ್ರಭಾವಶಾಲಿಗಳೂ ಆಗಿದ್ದರು. ಆದರೆ ಬಣ್ಣದ ಬೇಗಡೆ ಅಂಟಿಸಿಕೊಂಡಿದ್ದ ಕಮ್ಯುನಿಸಂನ ನಿಜಸ್ವರೂಪ ಬಯಲಾಯಿತೋ ಆಗ ಕಮ್ಯುನಿಸಂ ಪತನವಾಗತೊಡಗಿತು. ಇನ್ನು ದೇಶದಲ್ಲಿ ಜನರ ಭರವಸೆಯಾಗಿ ಉಳಿದಿದ್ದು ಜನಸಂಘ ಮಾತ್ರ, ಎಂಬತ್ತರ ದಶಕದ ನಂತರ ಜನಸಂಘ ಬಿಜೆಪಿಯಾಗಿ ಜಾತಿಯ ಹಂಗಿಲ್ಲದೆ, ರಾಷ್ಟ್ರೀಯತೆಯ ತಳಹದಿಯಲ್ಲಿ ಭರವಸೆಯ ಪಕ್ಷವಾಯಿತು, ಅದರ ವೈಚಾರಿಕ ಸ್ಪಷ್ಟತೆ, ಹೋರಾಟದ ಮನೋಭಾವ, ತಾತ್ವಿಕತೆಗಳೇ ಅದಕ್ಕೆ ಉಳಿದವುಗಳಿಗಿಂತ ಪ್ರತ್ಯೇಕ ಎಂಬ ಇಮೇಜನ್ನು ಕಟ್ಟಿಕೊಟ್ಟವು, ಬಹುವರ್ಷಗಳ ಆಡಳಿತದ ಜಡತ್ವವನ್ನು ತೊಲಗಿಸುವ ಹಾದಿಯಲ್ಲಿ ನಡೆಯುತ್ತಿದ್ದ ಬಿಜೆಪಿ ಈಗ ಕರ್ನಾಟಕದಲ್ಲಿ ಹೀನಾಯವಾಗಿ ಸೋತಿದೆ. ಈ ಸೋಲು ಯಾವ ಪ್ರಮಾಣದಲ್ಲಿ ಜನರನ್ನು ತಟ್ಟಿದೆಯೆಂದರೆ ಎಲ್ಲವನ್ನೂ ಮತ್ತೆ ಹೊಸದಾಗಿ ಪ್ರಾರಂಭಿಸಬೇಕು ಎಂಬ ಹಂತಕ್ಕೆ ಮುಟ್ಟಿದೆ.

ಉತ್ತಮ ಸಿದ್ಧಾಂತ, ಉತ್ತಮ ಸಂಘಟನಾ ಜಾಲ ಇದ್ದರೂ ರಾಜ್ಯದಲ್ಲಿ ಬಿಜೆಪಿ ಹೇಗೆ ಸೋತಿತು ಎಂಬ ಪಂಚನಾಮೆಯನ್ನು ಹಲವರು ನಡೆಸುತ್ತಿದ್ದಾರೆ. ಸೋಲಿನ ಕಾರಣಗಳನ್ನು ರಾಜ್ಯ ನಾಯಕರಿಗೆ ಕಟ್ಟಲಾಗುತ್ತಿದೆ. ಆದರೆ ಭಾರತೀಯ ಜನತಾ ಪಕ್ಷದ ಸಿದ್ಧಾಂತದಲ್ಲಿ ಯಾವತ್ತೂ ನಾಯಕ ಕೂಡ ಓರ್ವ ಕಾರ್ಯಕರ್ತನೆ, ಕಾರ್ಯಕರ್ತನೇ ಪಕ್ಷದ ಆಧಾರಸ್ತಂಭ, ಹಾಗಾದರೆ ಒಂದು ಉತ್ತಮ ಪಕ್ಷದ ಸೋಲಿಗೆ ಕೇವಲ ನಾಯಕ ಮಾತ್ರ ಹೊಣೆ ಹೇಗಾಗುತ್ತಾನೆ?

ಕಾಲದ ನಡೆಯಲ್ಲಿ ಬಿಜೆಪಿಯಂಥ, ಪಕ್ಷವೂ ತನ್ನ ಹಳೆಯ ಖದರನ್ನು ಕಳೆದುಕೊಳ್ಳುತ್ತದೆ ಎನ್ನುವುದಕ್ಕೂ ಈ ಸೋಲು ಒಂದು ಉದಾಹರಣೆ. ಈ ಚುನಾವಣೆಯಲ್ಲಿ ಬಿಜೆಪಿ ಕೂಡ ಎಲ್ಲಾ ಪಕ್ಷಗಳಂತೆ ಜಾತಿ ಆಧಾರದಲ್ಲೇ ಅಭ್ಯರ್ಥಿಗಳನ್ನು ಘೋಷಣೆ ಮಾಡಿತು. ಎಲ್ಲರಂತೆಯೇ ಮೂಲ ಸಿದ್ಧಾಂತ ಮತ್ತು ದೀನದಯಾಳರಂಥ ಮೌಲ್ಯಗಳಿಗೆ ತಿಲಾಂಜಲಿ ಇಟ್ಟು ಚುನಾವಣಾ ರಾಜಕೀಯವೆಂದರೆ ಬೇರೆಯದ್ದೇ ಎನ್ನುವ ನಿಲುವಿಗೆ ಇಳಿಯಿತು. ಎಲ್ಲರಂತೆಯೇ ಹಣವನ್ನೂ ಚೆಲ್ಲಿತು, ಅದು ಎಷ್ಟೆಂದರೆ ಚುನಾವಣೆಯ ಹಿಂದಿನ ದಿನದವರೆಗೂ ಕಾರ್ಯಕರ್ತರೆನಿಸಿಕೊಂಡವರೇ ಹಣದ ಆಟವಾಡಿದರು. ಈ ಹಿಂದೆ ಕಾರ್ಯಕರ್ತರು ಮಾಡುತ್ತಿದ್ದ ಕೆಲಸವನ್ನು ಈ ಬಾರಿ ಹಣ ಮಾಡಿತು ಹಾಗಾದರೆ ಕಾರ್ಯಕರ್ತ ಎಂದರೆ ಏನು ಕಾಂಗ್ರೆಸನ್ನು ಸೋಲಿಸಬೇಕೆಂದರೆ ಕಾಂಗ್ರೆಸಿನಂತೆಯೇ ಯೋಚಿಸಬೇಕೆನ್ನುವ ಅತಿ ಬುದ್ಧಿವಂತಿಕೆ ಕೊನೆಗೆ ಫಲ ಕೊಟ್ಟಿತೆ ಎಂದರೆ ಅದೂ ಇಲ್ಲ, ಅಂದರೆ ಜನ ಬಿಜೆಪಿಯನ್ನು ಅದು ಇರುವಂತೆ ನೋಡಲು ಬಯಸುತ್ತಾರೆಯೇ ಹೊರತು ಕಾಂಗ್ರೆಸಿನ ಪಡಿಯಚ್ಚಿನಂತಲ್ಲ. ಇನ್ನು ಪಕ್ಷದಲ್ಲಿ ಯಾವುದು ಒಳಜಗಳಕ್ಕೆ ಕಾರಣವಾಗುತ್ತದೆ ಎಂದು ದೀನದಯಾಳರು ಹೇಳಿದ್ದರೋ, ಅವೆಲ್ಲವೂ ಈ ಚುನಾವಣೆಯಲ್ಲಿ ಢಾಳಾಗಿ ಗೋಚರಿಸಿದವು. ಹಲವು ಟಿಕೆಟ್ ವಂಚಿತರು, ಪದಾಧಿಕಾರಿಗಳು ಒಳೇಟು ನೀಡಿದ್ದರು.

ಗುಂಪುಗಾರಿಕೆ ಪಕ್ಷದ ಪ್ರಭಾವವನ್ನು ಎಷ್ಟು ಪಾತಾಳಕ್ಕೆ ತಳ್ಳಿತೆಂದರೆ ವೀರಾಜಪೇಟೆ ಕ್ಷೇತ್ರದಂಥ ಜಾಗದಲ್ಲೂ ಕೆಲವರ ಗುಂಪುಗಾರಿಕೆಯಿಂದ ಮತದಾರನಿಗೆ ಟಿಪ್ಪು ಸುಲ್ತಾನನ ಕ್ರೌರ್ಯಗಳೆಲ್ಲವೂ ಮರೆತುಹೋದವು. ಅಷ್ಟೇ ಏಕೆ? ಕಳೆದ ಐದು

ವರ್ಷಗಳಿಂದ ಬಿಜೆಪಿಯ ಕೆಲವು ಕಾರ್ಯಕರ್ತರು, ಅದರಲ್ಲೂ ಕೆಲವು ಪ್ರಮುಖ ಪದಾಧಿಕಾರಿಗಳು ತಮ್ಮ ಸಿದ್ಧಾಂತವನ್ನೇ ಮರೆತರು, ಕೆಲ ಧಿಮಾಕಿನ ಮುಖಗಳನ್ನು ನೋಡಿಯೇ ಆತ ಈಗಷ್ಟೇ ಜಗನ್ನಾಥ ಭವನದ ಮೆಟ್ಟಿಲಿಳಿದು ಬಂದವ ಎಂದು ಗುರುತಿಸಬಹುದಾಗಿತ್ತು! ಅನೇಕ ಅಪಾತ್ರರು ಅನನ್ಯ ಜಾಗಗಳಲ್ಲಿ ಕುಳಿತರು. ನಾಯಕರನ್ನು ಮೆಚ್ಚಿಸುವುದು ಮತ್ತು ಗಮನ ಸೆಳೆಯುವುದೇ ಕಾರ್ಯಕರ್ತನ ಗುಣ ಎಂಬಂತಾದರು. ಇವೆಲ್ಲವು ಕೂಡ ಈ ಫಲಿತಾಂಶಕ್ಕೆ ಕಾರಣ. ಆದರೆ ಬಯ್ಗುಳಗಳು ಮಾತ್ರ ನಾಯಕರಿಗೆ ಬೀಳುತ್ತಿವೆ! ಕಾರ್ಯಕರ್ತ ಕಾರ್ಯಕರ್ತನಂತಿದ್ದರೆ ನಾಯಕನೂ ಸಿದ್ಧಾಂತಕ್ಕೆ ಬದ್ಧನಾಗಿ ನಡೆದುಕೊಳ್ಳುತ್ತಾನೆ ಅಲ್ಲವೇ?

ಈ ಮೇಲಿನ ಎಲ್ಲಾ ಸಂಗತಿಗಳು ಎಲ್ಲಾ ಪಕ್ಷಗಳಿಗೆ ಸಂಬಂಧಿಸಿದ್ದಾದರೂ ಕಾರ್ಯಕರ್ತತನವನ್ನು ಸುದೀರ್ಘವಾಗಿ ಕಾಪಿಟ್ಟುಕೊಂಡಿದ್ದವನು ಬಿಜೆಪಿಯವನಾಗಿದ್ದ. ಕೊನೆ ಕೊನೆಗೆ ಆತನೂ ಕಾಂಗ್ರೆಸಿನಂತಾದಾಗ ಜನರಿಗೆ ಬಿಜೆಪಿಯೂ ಎಲ್ಲರಂಥ ಪಕ್ಷ ಎನಿಸತೊಡಗಿತು.

ಇಂಥ ಹಲವು ಕಾರಣಗಳಿಂದ ಇದು ಕೇವಲ ಅಧಿಕಾರ ಕಳೆದುಕೊಂಡ ಸೋಲು ಮಾತ್ರವಾಗಿ ಉಳಿಯುವುದಿಲ್ಲ. ಹಾಗೆಯೇ ಈ ಸೋಲು ಕೇವಲ ಲೆಕ್ಕದಲ್ಲಿ ಮಾತ್ರ ಸೋತ ಸೋಲೂ ಅಲ್ಲ,

## ‘ಮಾಸದ ಮಾಧುರ್ಯ’ದ 73ನೇ ಕಾರ್ಯಕ್ರಮದಲ್ಲಿ

# ಭಾವಸಂಜೆ



ಜಗನ್ನಾಥ ಬಳಗದ 73ನೇ ಕಾರ್ಯಕ್ರಮದಲ್ಲಿ ಇಂಚರ ಪ್ರವೀಣಕುಮಾರ್ ಮ್ಯೂಸಿಕಲ್ ತಂಡದವರಿಂದ ‘ಭಾವಸಂಜೆ’ಯು ನೆನಪು ನೆನಪಿನಂಗಳದಲ್ಲಿ ಮಾಸದೆ ಇರಲು ಕಾರಣರಾದವರು ಕನ್ನಡ ನಾಡಿನ ಪ್ರಸಿದ್ಧ ಗಾಯಕಿ ಶ್ರೀಮತಿ ಮಂಗಳಾ ರವಿ ಅವರು ಹಾಗೂ ಅವರೊಂದಿಗೆ ತಾನು ಕಡಿಮೆಯಿಲ್ಲ ಎಂಬುದನ್ನು ಸಾಬೀತುಪಡಿಸಿದರು ಶ್ರೀ ಪ್ರವೀಣ್ ಕುಮಾರ್ ಅವರು.

ಆರು ವರ್ಷ ಮುಗಿಸಿ ಏಳನೇ ವರ್ಷದ ಪಾದಾರ್ಪಣೆಯ ಮೊದಲ ಕಾರ್ಯಕ್ರಮಕ್ಕೆ ತಲುಪಿದ ‘ಮಾಸದ ಮಾಧುರ್ಯ’ ತನ್ನ ಅಸ್ಮಿತೆಯನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದೆ ಎಂದು ತಿಳಿಸಲು ಹೆಮ್ಮೆಯಾಗುತ್ತದೆ. ಸುಮಾರು 18 ತಿಂಗಳ ಕಾಲ ಕೊರೋನಾ ಮಹಾಮಾರಿಯ ಕಾರಣದಿಂದಾಗಿ ಸ್ಥಗಿತಗೊಳ್ಳದಿದ್ದರೆ ‘ಮಾಸದ ಮಾಧುರ್ಯ’ ಕಾರ್ಯಕ್ರಮದ ಸಂಖ್ಯೆ 94ಕ್ಕೆ ತಲುಪುತ್ತಿತ್ತು. ವಿಧಾನಸಭಾ ಚುನಾವಣೆಯ ಸಮಯ ಹಾಗೂ ನೀತಿ ಸಂಹಿತೆ ಜಾರಿಯಲ್ಲಿದ್ದಾಗಲೂ ಅದಕ್ಕೆ ಯಾವುದೇ ರೀತಿಯಲ್ಲಿ ಕಾನೂನಾತ್ಮಕ ತೊಂದರೆ ಆಗದಂತೆ ಕಾರ್ಯಕ್ರಮವನ್ನು ಆಯೋಜಿಸಿ ಯಶಸ್ವಿಗೊಳಿಸಿದ್ದೇವೆ. ಆರಂಭದಿಂದಲೂ ಪಕ್ಷದ ಹಿರಿಯರು ಪ್ರತಿ ತಿಂಗಳ ಮೊದಲ ಭಾನುವಾರ ಜರುಗುವ ಈ ಕಾರ್ಯಕ್ರಮಕ್ಕೆ ಎಲ್ಲ ರೀತಿಯ ಸಹಾಯ - ಸಹಕಾರವನ್ನು ನೀಡುತ್ತಿದ್ದಾರೆ. ಸಹಕರಿಸಿದ ಅವರೆಲ್ಲರಿಗೂ ಅಭಿನಂದನೆ ಸಲ್ಲಿಸದಿದ್ದರೆ ತಪ್ಪಾದೀತು.

ವಿಧಾನಸಭಾ ಕಾರ್ಯಾಲಯದ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ಸುರೇಶ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯಾಲಯ ಕಾರ್ಯದರ್ಶಿಗಳಿಂದ ಎಲ್ಲ ಕಲಾವಿದರಿಗೂ ‘ಅಭಿನಂದನಾ ಪತ್ರ’ ನೀಡಿ ಸನ್ಮಾನಿಸಲಾಯಿತು. ಶ್ರೀ ದತ್ತಗುರು ಹೆಗಡೆಯವರು ಕಾರ್ಯಕ್ರಮವನ್ನು ನಿರೂಪಿಸಿದರು.

# ವಿಸ್ತಾರಕರಿಂದ ಸಂಘಟನೆಯ ವಿಸ್ತಾರ








**ನೀವು ಯಾವುದೇ ಕೆಲಸವನ್ನು ಮಾಡಿದರೂ, ಅದನ್ನು ಗಂಭೀರವಾಗಿ ಮತ್ತು ಸಂಪೂರ್ಣವಾಗಿ ಮಾಡಿ; ಎಂದಿಗೂ ಅರೆಮನಸ್ಸಿನಿಂದ ಮಾಡಬೇಡಿ, ನೀವು ನಿಮ್ಮ ಸಾಮರ್ಥ್ಯಕ್ಕನುಗುಣವಾಗಿ ಅತ್ಯುತ್ತಮವಾದದ್ದನ್ನು ನೀಡುವವರೆಗೆ ನಿಮ್ಮನ್ನು ತೃಪ್ತಿಪಡಿಸಬೇಡಿ.**




ರತನ್ ರಮೇಶ್ ಪೂಜಾರಿ
ರಾಜ್ಯ ಮಾಧ್ಯಮ ಸಮಿತಿ ಸದಸ್ಯರು,
ಬಿಜೆಪಿ ಕರ್ನಾಟಕ


**1951**ರಲ್ಲಿ ಭಾರತೀಯ ಜನತಾ ಪಕ್ಷದ ಮೂಲ ಪಕ್ಷವಾದ ಭಾರತೀಯ ಜನತಾ ಸಂಘವನ್ನು ಸ್ಥಾಪಿಸಿದ ಡಾ. ಶಾಮ ಪ್ರಸಾದ್ ಮುಖರ್ಜಿಯವರು ಹೇಳಿದ ವಾಕ್ಯವಿದು. ಅತಿ ವಿಷಮ ಸಮಯದಲ್ಲಿ ಪಕ್ಷವನ್ನು ಸ್ಥಾಪಿಸಿ ಮುಂದುವರಿಸಿಕೊಂಡು ಹೋಗಿದ್ದು, ನಂತರ 1980ರಲ್ಲಿ ಭಾರತೀಯ ಜನತಾ ಪಕ್ಷವಾಗಿ ರೂಪುಗೊಂಡು ಇಂದು ಕೇಂದ್ರದಲ್ಲಿ ಸತತ 9 ವರ್ಷದಿಂದ ಅಧಿಕಾರ ನಡೆಸಲು ಹಾಗೂ ಹಲವಾರು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿಯನ್ನು ಹಿಡಿಯಲು ತೆಗೆದುಕೊಂಡ ಸಮಯ ಬರೋಬ್ಬರಿ 72 ವರ್ಷಗಳು. ಈ ಸುದೀರ್ಘ ಸಮಯದಲ್ಲಿ ಕೋಟ್ಯಾಂತರ ಕಾರ್ಯಕರ್ತರು ಪಕ್ಷಕ್ಕಾಗಿ ದುಡಿದಿದ್ದಾರೆ, ದುಡಿಯುತ್ತಿದ್ದಾರೆ. ಹಲವರು ತ್ಯಾಗ, ಬಲಿದಾನ ಪಕ್ಷವನ್ನು ಈ ಹಂತಕ್ಕೆ ತಂದು ನಿಲ್ಲಿಸಿದೆ. ಪಕ್ಷದ ಧ್ವಜ ಕಟ್ಟುವವರಿಂದ ಹಿಡಿದು ರಾಷ್ಟ್ರೀಯ ಅಧ್ಯಕ್ಷರವರೆಗೆ ಹಲವರ ಪರಿಶ್ರಮ, ಬೆವರು ಅಡಗಿದೆ. ಹಾಗೆಯೇ ಪಕ್ಷದ ಸಂಘಟನೆಯನ್ನು ಆಳ ಹಾಗೂ ವಿಸ್ತಾರವಾಗಿ ಬೆಳೆಸಲು ಪ್ರಮುಖ ಕಾರ್ಯ ಪಾತ್ರವಹಿಸುವ ಮತ್ತೊಂದು ಕಾರ್ಯಕರ್ತರ ವಿಶೇಷ ಪಡೆಯೇ ವಿಸ್ತಾರಕರು.

ಭಾರತೀಯ ಜನತಾ ಪಕ್ಷವು ಸಂಘ ಪರಿವಾರದ ಸಂಘಟನೆಗಳಲ್ಲಿ ಒಂದು. ಸಂಘಟನೆಯಲ್ಲಿ ವಿಶೇಷವಾದ ಸನ್ನಿವೇಶಗಳಲ್ಲಿ ಅಲ್ಪಕಾಲೀನ ವಿಸ್ತಾರಕರ ನಿಯೋಜನೆ ಮಾಡಿ ಸಮಾಜದ ಮಧ್ಯೆ ಸಂಘಟನೆಯ ಜಾಲವನ್ನು ವಿಸ್ತಾರ ಮಾಡುವುದು ರೂಢಿಯಲ್ಲಿದ್ದೆ.ಬಿಜೆಪಿಯಲ್ಲೂ ಸಹ ಈ ಪದ್ಧತಿಯನ್ನು ರೂಢಿಸಿಕೊಂಡು ವಿಸ್ತಾರ ಮಾಡಲಾಗಿದೆ. ನಮ್ಮ ಮೂಲ ಸಂಘಟನೆಯಾದ ಭಾರತೀಯ ಜನಸಂಘದ ಪ್ರಾರಂಭದಿಂದ ಭದ್ರ ಬುನಾದಿ ಹಾಕಿ ಪಕ್ಷಕ್ಕೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಕೋನವನ್ನು ಕೊಟ್ಟವರು ಮಾನನೀಯ ಪಂ. ದೀನದಯಾಳ ಉಪಾಧ್ಯಾಯರವರು. ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ 2016ರಲ್ಲಿ ಪಕ್ಷದ ಸಂಘಟನಾ ಚಟುವಟಿಕೆಗಳಿಗೆ ವೇಗ ನೀಡಲು ಒಂದು ವರ್ಷದ ಅವಧಿಗೆ ಶತಾಬ್ದಿ ವಿಸ್ತಾರಕರ ನಿಯೋಜನೆ ಮಾಡಲಾಗಿತ್ತು. 2018ರ ವಿಧಾನಸಭಾ ಹಾಗೂ 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲೂ ವಿಸ್ತಾರಕರು ಕರ್ತವ್ಯ ನಿರ್ವಹಿಸಿದ್ದರು. 2023ರ ವಿಧಾನಸಭಾ

ಚುನಾವಣೆಯಲ್ಲಿ 179 ವಿಧಾನಸಭಾ ಕ್ಷೇತ್ರಗಳಲ್ಲಿ 186 ಜನ ವಿಸ್ತಾರಕರು 4 ತಿಂಗಳಿಗೂ ಹೆಚ್ಚು ಕಾಲ ಕೆಲಸ ಮಾಡಿದ್ದಾರೆ. ವಿಸ್ತಾರಕರು ರಾಜಕೀಯ ವೇದಿಕೆಗಳಿಗೆ ಹೋಗಬಾರದು, ಹಣಕಾಸು ವ್ಯವಹಾರಗಳಲ್ಲಿ ಭಾಗವಹಿಸಬಾರದು, ಮಾಧ್ಯಮಗಳ ಮುಂದೆ ಬರಬಾರದು, ಎಲ್ಲಾ ಚಟುವಟಿಕೆಗಳ ಹಿಂದೆ ನಿಂತು ವೇಗವರ್ಧಕರಾಗಿ ಕೆಲಸ ಮಾಡಬೇಕು ಎಂಬ ಸಂಗತಿಗಳನ್ನು ಅಳವಡಿಸಿಕೊಂಡಿರುತ್ತಾರೆ. ಬಿಜೆಪಿಯು ಒಂದು ರಾಜಕೀಯ ಸಂಘಟನೆಯಾಗಿದ್ದರೂ, ಚುನಾವಣೆಯ ಸಮಯದಲ್ಲಿ ಕೆಲಸ ಮಾಡುತ್ತಿದ್ದರೂ ಸಹ ಅವರಿಗೆ ವೈಯಕ್ತಿಕವಾಗಿ ಕೆಲವು ನಿಷೇಧವನ್ನು ಸಂಘಟನೆಯ ಸೂತ್ರದೊಳಗಿನ ಹಿರಿಯರ ಪ್ರೇರಣೆಯಿಂದ ಅಳವಡಿಸಿಕೊಂಡಿರುತ್ತಾರೆ. ಒಟ್ಟಿನಲ್ಲಿ ಭಾರತೀಯ ಜನತಾ ಪಕ್ಷದ ಸಂಘಟನೆಯ ವಿಸ್ತಾರದಲ್ಲಿ ವಿಸ್ತಾರಕರು ಎಂಬ ಕಲ್ಪನೆ ಹಾಗೂ ಅವರ ಪಾತ್ರ ಅತಿ ಪ್ರಮುಖವಾದದ್ದು.

## ವಿಸ್ತಾರಕರ ಅನಿಸಿಕೆಗಳು...

ರಾಜಕೀಯದಲ್ಲಿ ಕಲಿತಷ್ಟು ಅನುಭವ, ಎಷ್ಟು ಅನುಭವಿಸಿದರೂ ತೀರದ ದಾಹ. ವಿಸ್ತಾರಕರು ಅಂದರೆ ಜವಾಬ್ದಾರಿ ಎನ್ನುವುದಕ್ಕಿಂತ ಒಂದು ಕಲಿಯುವ ಅನುಭವ ಎನ್ನಬಹುದು. ABVPಯಲ್ಲಿ ಸಂಘಟನೆಯ ಅನುಭವ ಇದ್ದ ನನಗೆ ರಾಜಕೀಯದ ಸಂಘಟನೆಯಲ್ಲಿ ಹಲವಾರು ವಿಷಯ ತಿಳಿದು ಸತತ ಮೂರು ತಿಂಗಳು ಸಂಘಟನೆಯನ್ನು ಮಾಡಿದೆ. ನಮ್ಮ ಹಿರಿಯರು ಟಿಕೆಟ್ ಘೋಷಣೆ ಮಾಡಿದ ಮೇಲೆ ಅಭ್ಯರ್ಥಿಗಳ ನಡುವೆ ಆದ ಮುನಿಸುಗಳನ್ನು ಸರಿ ಮಾಡುತ್ತಾ ಒಂದು ಬಹುದೊಡ್ಡ ಮನ್ನಿಸುವ ದಾರಿಯನ್ನು ಕಂಡೆನು.

**- ಜೆ ಸಿ ಪ್ರವೀಣ್, ಬ್ಯಾಟರಾಯನಪುರ**

ವಿಧಾನಸಭಾ ಕ್ಷೇತ್ರದ ಎಲ್ಲಾ ಹಳ್ಳಿಯ ಪ್ರತಿ ಬೂತ್‌ನಲ್ಲಿ ಹರ್ಷದ ಅಲೆದಾಟ, ಬಿಡುವಿದ್ದಾಗ ಯುವಕರೊಂದಿಗೆ ಚೆಂಡು, ದಾಂಡು ಆಟ, ವಾರಕೊಮ್ಮೆ ಮಧ್ಯಾಹ್ನ ಬೇಸಿಗೆಯ ತಣಿಸಲು ಅಲ್ಲಿಯ ಯುವಕರೊಂದಿಗೆ ಷರತ್ತು ಬದ್ಧ ಈಜಾಟದೊಂದಿಗೆ ಹಿರಿಯರಿಂದ ಸಂಘಟನೆಯ ಜವಾಬ್ದಾರಿ ಹಾಗೂ ಕ್ಷೇತ್ರದ ಅಭ್ಯರ್ಥಿಯ ಗೆಲುವಿಗಾಗಿ ಶ್ರಮಿಸಿದ ಅನುಭವ ನನ್ನ ಜೀವನಕ್ಕೆ ಸ್ಪೂರ್ತಿ.

**-ಜಗದೀಶ ಎಲ್ ಓಲೇಕಾರ, ಬಬಲೇಶ್ವರ**

ಹಿರಿಯ ಕಾರ್ಯಕರ್ತರ ಅನುಭವ, ಸಂಘದ ಹಿರಿಯರ ಸಲಹೆಯೊಂದಿಗೆ ಮತ್ತು ಗುಜರಾತ್ ರಾಜ್ಯದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರದೀಪ್ ಸಿಂಗ್ ವಾಗೆಲ ಅವರ ತಂಡದ ಜೊತೆ ಮಾಡಿದ ಕೆಲಸ ಜೀವನದಲ್ಲಿ ಮರೆಯಲಾಗದು. 19 ವರ್ಷ ವಯಸ್ಸಿನಲ್ಲಿ ವಿಸ್ತಾರಕನಾಗಿ ಕಾರ್ಯ ಆರಂಭಿಸಿದ ನನಗೆ ಒಂದು ಧ್ಯೇಯೋದ್ದೇಶಕ್ಕಾಗಿ ತನ್ನದೆಲ್ಲವನ್ನು ತ್ಯಾಗ ಮಾಡಿ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡ ಹಿರಿಯ ಪ್ರಚಾರಕರ ಬಗೆಗೆ ಪೂಜ್ಯ ಭಾವನೆ ಉಂಟಾಯಿತು. **ಧ್ಯೇಯಪಥವನ್ನು ಓದಿದಾಗ ಪಕ್ಷ ಸಂಘಟನೆಗಾಗಿ ನಮ್ಮ ಹಿರಿಯರು ಪಟ್ಟ ಕಷ್ಟವನ್ನು ತಿಳಿದು ಎಲ್ಲಾ ಅನಾನುಕೂಲತೆಗಳು, ಅಸಹಕಾರ, ಸಮಸ್ಯೆಗಳ ನಡುವೆಯೂ ನಮ್ಮ ಕಾರ್ಯಕ್ಷೇತ್ರದಲ್ಲಿ ದುಡಿಯಬೇಕೆಂಬ ಛಲ ಉಂಟಾಯಿತು.** ಪಕ್ಷ ಎಲ್ಲವನ್ನು ನೀಡಿದರೂ ಪಕ್ಷವನ್ನು ತೊರೆದವರ ನಡುವೆ, ಯಾವ ಅಪೇಕ್ಷೆಯೂ ಇಲ್ಲದೆ ಹಲವು ವರ್ಷಗಳಿಂದ ಪಕ್ಷಕ್ಕಾಗಿ ಶ್ರಮಿಸುತ್ತಿರುವ ಕಾರ್ಯಕರ್ತರನ್ನು ಕಂಡು ಪಕ್ಷನಿಷ್ಠೆ ಹೆಚ್ಚಾಯಿತು.

**- ಧನುಷ್, ದಾವಣಗೆರೆ**

ವಿಜಯ ಸಂಕಲ್ಪ ಅಭಿಯಾನದ ಅಂಗವಾಗಿ ಮನೆ ಮನೆ ಭೇಟಿ ನೀಡುವ ಸಂದರ್ಭದಲ್ಲಿ ಹಳಿಯಾಳ ಪಟ್ಟಣದ ಸಣ್ಣದಾದ, ಹಳೆಯ ಮನೆಗೆ ಭೇಟಿ ನೀಡಿದೆವು. ಆ ಸಂದರ್ಭದಲ್ಲಿ ಆ ಮನೆಯಲ್ಲಿ ವಯಸ್ಸಾದ ಮಹಿಳೆ ಹಾಗೂ ಇನ್ನಿತರರು ಇದ್ದರು. ಆ ಮನೆ ಬಿಜೆಪಿಯ ಯಾರಿಗೂ ಪರಿಚಯವಿಲ್ಲ. ಕಾರಣ ಸಾಂಸ್ಥಿಕ ವ್ಯವಸ್ಥೆ ಇಲ್ಲ. ಆದರೇ ಆ ಮನೆ ಜನಸಂಘದ ಮನೆ. ಆ ಮನೆಗೆ ಶ್ರೀ ಯಾದವರಾವ್ ಜೋಷಿ, ಶ್ರೀ ಭಾವುರಾವ್ ದೇಶಪಾಂಡೆ ಅಂತಹ ಮಹಾನುಭಾವರು ಭೇಟಿ ನೀಡಿದ್ದರು ಎಂದು ಆ ತಾಯಿ ತಿಳಿಸಿದರು. ಆ ತಾಯಿಯ ಪಾದಕ್ಕೆ ನಮಸ್ಕರಿಸಿ ಬಂದೆವು. ಧನ್ಯೋಸ್ಮಿ...

**-ಷಣ್ಮುಖ ಎಸ್. , ಹಳಿಯಾಳ**

ವಿಸ್ತಾರಕ್ ಜವಾಬ್ದಾರಿಯನ್ನು ನಿರ್ವಹಿಸುವುದರ ಜೊತೆ ಜೊತೆಗೆ ನನ್ನ ವ್ಯಕ್ತಿತ್ವ ವಿಕಾಸನ ಮತ್ತು ನಾಯಕತ್ವದ ಗುಣ ವೃದ್ಧಿಯಾಗಿದೆ. ಕಣಕಣದಲ್ಲೂ ಭಾರತೀಯತೆ, ರಾಷ್ಟ್ರೀಯತೆ, ಹಿಂದುತ್ವದ ವಿಚಾರಗಳನ್ನು ನನ್ನ ಮುಖ್ಯ ಧ್ಯೇಯವನ್ನಾಗಿಸಿಕೊಂಡಿದ್ದೇನೆ.

**-ಯೋಗೇಶ್‌ರಾವ್, ಕುಂದಾಪುರ**

ನಾನು ಅಲ್ಪಾವಧಿ ವಿಸ್ತಾರಕರಾಗಿ ವಿಧಾನಸಭಾ ಕ್ಷೇತ್ರಕ್ಕೆ ಹೋಗಿ ಅಲ್ಲಿ ಭೌಗೋಳಿಕವಾಗಿ ಒಗ್ಗಿಕೊಂಡು, ಕಾರ್ಯಕರ್ತರ ಜೊತೆಯಲ್ಲಿ ಕೆಲಸ ಆರಂಭಿಸಿದ ಅನುಭವ ವಿಶೇಷವಾಗಿತ್ತು. ಪ್ರಮುಖರ ಜೊತೆ ಪ್ರೀತಿ ವಿಶ್ವಾಸ, ಗೆಲುವಿನ ಗುರಿಯೊಂದಿಗೆ ಚುನಾವಣೆಯಲ್ಲಿ ಕೆಲಸ ಮಾಡಿದ ರೀತಿ ನನಗೆ ಮುಂದಿನ ಜೀವನಕ್ಕೆ ಇದು ಒಂದು ದೊಡ್ಡ ಅನುಭವ.

**-ಮೌನೇಶ ನಾಯಕ, ಹರಿಹರ**

ರಾಜಕೀಯ ಪ್ರಾದೇಶಿಕವಾಗಿ ವಿಭಿನ್ನವಾಗಿರುತ್ತದೆ. ಇಂತಹ ವಿಭಿನ್ನತೆಯನ್ನು ಅಧ್ಯಯನ ಮಾಡಲು ವಿಸ್ತಾರಕ ಯೋಜನೆ ಬಹಳ ಸಹಾಯವಾಯಿತು.ಕರಾವಳಿ ಭಾಗದಲ್ಲಿ ಬಿಜೆಪಿಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸುತ್ತಾರೆ. ಇಂತಹ ಪ್ರಯೋಗಗಳು ಹೇಗೆ ಫಲ ನೀಡುತ್ತವೆ ಎನ್ನುವುದರ ಬಗ್ಗೆ ತಿಳಿಯಲು ಅವಕಾಶ ಮಾಡಿಕೊಟ್ಟಿದ್ದು ವಿಸ್ತಾರಕ ವ್ಯವಸ್ಥೆ. ಕೆಲಸ ಮಾಡಿದ ಕ್ಷೇತ್ರಗಳ ಮಣ್ಣಿನ ಸಂಸ್ಕೃತಿಯ ಬಗ್ಗೆ ನನಗೆ ತಿಳಿಯಿತು.

**- ಶಶಿ ಆಲ್ದೂರ್, ಬೈಂದೂರು**




# ಚುನಾವಣಾ ನಿರ್ವಹಣಾ ಕಾರ್ಯದ ಒಂದು ಅವಲೋಕನ

ಬಿಜೆಪಿಯ ಚುನಾವಣೆಯ ನಿರ್ವಹಣಾ ಮಾಡುವ ರೀತಿಯೇ ಅದ್ಬುತ. ಈ ಭಾರಿ ರಾಜ್ಯದಲ್ಲಿ ಒಂದೇ ಹಂತದಲ್ಲಿ ಮತದಾನ ನಡೆದ ಕಾರಣ ಪ್ರಚಾರದ ಕಾರ್ಯವನ್ನೂ ಏಕ ಕಾಲಕ್ಕೆ ಎಲ್ಲಾ ವಿಧಾನಸಭಾ ವ್ಯಾಪ್ತಿಯಲ್ಲಿ ನಡೆಸಬೇಕಾದ ಒತ್ತಡ ಚುನಾವಣೆ ನಿರ್ವಹಣಾ ತಂಡಕ್ಕೆ ಇತ್ತು. ಪ್ರಚಾರಕರ ನಿಯೋಜನೆ ಅದಕ್ಕೆ ಬೇಕಾದ ತಯಾರಿಗಳು, ಪ್ರಚಾರ ಸಮಾಗ್ರಿಗಳ ಪೂರೈಕೆ , ಮಾಧ್ಯಮ ನಿರ್ವಹಣೆ, ಸಾಮಾಜಿಕ ಜಾಲಾತಾಣಗಳ ಕೆಲಸ, ಕಛೇರಿ ನಿರ್ವಹಣೆ ಇಂತಹ ಅನೇಕ ಕೆಲಸಗಳನ್ನು ನಿಭಾಯಿಸಿ ಬಹಳ ದೊಡ್ಡದಾದ ಕಾರ್ಯದ ದೃಷ್ಟಿಯಿಂದ ರಾಜ್ಯದಲ್ಲಿ ಚುನಾವಣಾ ನಿರ್ವಹಣಾ ಸಮಿತಿಯ ರಚನೆಯಾಯಿತು. ರಾಜ್ಯದಲ್ಲಿ ಚುನಾವಣಾ ನಿರ್ವಹಣಾ ಸಮಿತಿಯ ಅಡಿಯಲ್ಲಿ 32 ಭಾಗಗಳನ್ನು ಮಾಡಿ ಅಷ್ಟೂ ವಿಭಾಗಗಳಿಗೆ ಅನುಭವಿ ಹಿರಿಯ ಕಾರ್ಯಕರ್ತರನ್ನು ಜವಾಬ್ದಾರಿಯುತ ಜಾಗಗಳಿಗೆ ನಿಯುಕ್ತಿಸಿದರೆ, ಹೊಸ ತಲೆಮಾರಿನ ಉತ್ಸಾಹಿ ಕಾರ್ಯಕರ್ತರನ್ನು ಅವರ ಜೊತೆಗೆ ಜೊಡಿಸುವ ಕೆಲಸವಾಯಿತು. ಆ 32 ವಿಭಾಗಗಳು ವಿವರ ಹೀಗಿದೆ.

**ಚುನಾವಣಾ ಕಾರ್ಯಾಲಯ :** ಬಿಜೆಪಿಯಲ್ಲಿ ಚುನಾವಣೆಯನ್ನು ಸಂಪೂರ್ಣವಾಗಿ ನಿರ್ವಹಿಸಲೆಂದೇ ಒಂದು ವಿಶಿಷ್ಟವಾದ ಚುನಾವಣಾ ಸಮಿತಿಯನ್ನು ರಚಿಸಲಾಗುತ್ತದೆ. ಅದರಂತೆಯೇ ನಾಯಕರ ಪ್ರವಾಸಗಳನ್ನು ಆಯೋಜಿಸಿ ಚುನಾವಣಾ ಪ್ರಚಾರ ಸಮಿತಿಯನ್ನು ಸ್ಥಾಪಿಸಲಾಗುತ್ತದೆ. ಈ ಎರಡೂ ಸಮಿತಿಗಳು ಚುನಾವಣೆಗಳನ್ನು ಗೆಲ್ಲಿಸುವಲ್ಲಿ ಮತ್ತು ನಿಭಾಯಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ.

ಮಾರ್ಚ್ 23, 2023 ರಿಂದ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಕಾರ್ಯಾಲಯದ ಚಟುವಟಿಕೆಗಳು ಹಂತ ಹಂತವಾಗಿ ಪ್ರಾರಂಭಗೊಂಡು ಏಪ್ರಿಲ್ 2, 2023ರ ವೇಳೆಗೆ ಸಂಪೂರ್ಣವಾಗಿ ಅಧಿಕೃತವಾಗಿ ಪ್ರಾರಂಭವಾಯಿತು. ಏಪ್ರಿಲ್3, 2023ರಂದು ರಾಜ್ಯ ಚುನಾವಣಾ ನಿರ್ವಹಣಾ ಸಮಿತಿಯ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಅತ್ಯಂತ ಯಶಸ್ವಿಯಾಗಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿತ್ತು.

ನಂತರದಲ್ಲಿ ರಾಜ್ಯ ಕಾರ್ಯಾಲಯದಲ್ಲಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿಯ ಮೊದಲ ಬೈಠಕ್ ನಡೆಯಿತು. 32 ವಿಭಾಗಗಳಿಂದ 114 ಜನ ಪದಾಧಿಕಾರಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ರಾಜ್ಯ ಚುನಾವಣಾ ನಿರ್ವಹಣಾ ಸಮಿತಿತಯ ಸಂಚಾಲಕರ ಅಧ್ಯಕ್ಷತೆಯಲ್ಲಿ ರಾಜ್ಯ ಚುನಾವಣಾ ಉಸ್ತುವಾರಿಗಳಾದ ಶ್ರೀ ಧರ್ಮೇಂದ್ರ ಪ್ರಧಾನ್ ಅವರ ಸಮ್ಮುಖದಲ್ಲಿ ಜರುಗಿತು.

ಏಪ್ರಿಲ್ 22, 2023 ರಂದು ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಶಾ ಅವರ ಸಭೆಯ ಹಿನ್ನೆಲೆಯಲ್ಲಿ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತರಾಗಿದ್ದ 224 ಜನ ಪ್ರವಾಸಿ ಪ್ರಭಾರಿಗಳ ವಿಶಿಷ್ಟ ಸಭೆಯು ಬೆಂಗಳೂರಿನ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಜರುಗಿತು.

ಮತದಾನದ ಪೋಲಿಂಗ್ ಏಜೆಂಟ್ ಪೂರ್ವದಲ್ಲಿಯೇ ರಾಜ್ಯದ 58,282 ಬೂತ್‌ಗಳಿಂದ ಪೋಲಿಂಗ್ ಏಜೆಂಟ್‌ಗಳ ಪಟ್ಟಿಯನ್ನು ಎಲ್ಲಾ 224 ವಿಧಾನಸಭಾ ಕ್ಷೇತ್ರಗಳ ಮೂಲಕ ಪಡೆದುಕೊಳ್ಳಲಾಯಿತು. ಪೋಲಿಂಗ್ ಏಜೆಂಟ್‌ಗಳಿಗೆ ವಿಧಾನಸಭಾ ಕ್ಷೇತ್ರ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಕಾರ್ಯಾಗಾರಗಳನ್ನು ಮೇ 7,8,9ರಂದು ಹಮ್ಮಿಕೊಳ್ಳಲಾಗಿತ್ತು. ರಾಜ್ಯ ಚುನಾವಣಾ ನಿರ್ವಹಣೆಯ ಸಮಗ್ರ ಜವಾಬ್ದಾರಿಯೂ ಇಲ್ಲಿಂದಲೇ ಆಗುತ್ತಿತ್ತು. ನಿರ್ವಹಣಾ ಸಮಿತಿಯ ಉಪವಿಭಾಗಗಳ ಜೊತೆಗೆ ಸಮನ್ವಯ ಸಾಧನೆಯೇ ಇದರ ಆದ್ಯತೆಯ



ಕೆಲಸವಾಗಿತ್ತು. ಅದರಲ್ಲಿ ವಿಶೇಷವಾಗಿ ಇಲ್ಲಿಂದಲೇ ಅಭ್ಯರ್ಥಿಗಳಿಗೆ ನಾಮಪತ್ರ ಸಲ್ಲಿಕೆ ವಿಚಾರದಿಂದ ಹಿಡಿದು, ಚುನಾವಣಾ ಆಯೋಗದ ಸೂಚನೆಗಳನ್ನು ಪಾಲಿಸುವ ನಿಟ್ಟಿನಲ್ಲಿ ಅಲ್ಲಿಂದ ಬರುವ ಯಾವುದೇ ಮಾಹಿತಿಗಳ ವಿನಿಮಯ ಅಥವಾ ಅದರ ಪೂರೈಕೆಯ ಕೆಲಸಗಳನ್ನು ಇಲ್ಲಿಂದಲೇ ನಿಭಾಯಿಸಲಾಗುತ್ತಿತ್ತು. ಅಭ್ಯರ್ಥಿಗಳ ಚುನಾವಣಾ ಲೆಕ್ಕಾಚಾರ, ಪ್ರತೀ ಜಿಲ್ಲಾ ಚುನಾವಣಾ ನಿರ್ವಹಣಾ ಸಮಿತಿಗಳ ಜೊತೆಗೆ ಸಮನ್ವಯ. ಇಂತಹ ಅನೇಕ ಕೆಲಸಗಳು ಪ್ರತಿ ನಿತ್ಯ ನಡೆಯುತ್ತಿದ್ದವು.

**ಕಾರ್ಯಾಲಯ ವ್ಯವಸ್ಥೆ:** ಚುನಾವಣಾ ಸಂದರ್ಭದಲ್ಲಿ ಕಾರ್ಯಾಲಯದ ವ್ಯವಸ್ಥೆ ನಿಭಾಯಿಸುವುದು ನಿಜಕ್ಕೂ ಅತ್ಯಂತ ಸವಾಲಿನ ಸಂಗತಿಯೇ ಆಗಿರುತ್ತದೆ. ಚುನಾವಣೆ ಸಮಯದಲ್ಲಿ ರಾಜ್ಯ ಕಾರ್ಯಾಲಯ ಅತ್ಯಂತ ಹೆಚ್ಚು ಜನದಟ್ಟಣೆಯಿಂದ ಕೂಡಿರುವ ಜಾಗವಾಗಿರುತ್ತದೆ. ಕಾರ್ಯಕರ್ತರು ನಾಯಕರು, ಪಕ್ಷ ಸೇರ್ಪಡೆ ಜೊತೆಗೆ ಕಛೇರಿಯ ಭದ್ರತೆಗೆ ನಿಯೋಜನೆಗೊಂಡ ಪೊಲೀಸರು. ಚುನಾವಣಾ ಸಾಮಗ್ರಿಗಳ ವಿಲೇವಾರಿ ಅದಕ್ಕೆ ಸಂಬಂಧಿಸಿದಂತೆ ಕೆಲಸ ಮಾಡುವರ ಜೊತೆ ಸುಮಾರು ಒಂದು ತಿಂಗಳಿಗೂ ಅಧಿಕ ಸಮಯ ನಿರಂತರವಾದ ಊಟೋಪಚಾರದ ವ್ಯವಸ್ಥೆಯನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡಲಾಗಿತ್ತು.

**ಅಥಿತಿ ಸತ್ಕಾರ :** ಚುನಾವಣಾ ಪ್ರಚಾರಕ್ಕೆ ಮತ್ತು ವಿಶೇಷ ಸಭೆ ಸಮಾರಂಭಗಳಿಗೆ ಹೊರ ರಾಜ್ಯಗಳಿಂದ ಆಗಮಿಸಿದ ನಾಯಕರು ಮತ್ತು ಕಾರ್ಯಕರ್ತರನ್ನು ರೈಲ್ವೇ ನಿಲ್ದಾಣ, ವಿಮಾನ ನಿಲ್ದಾಣಗಳಲ್ಲಿ ಸ್ವಾಗತಿಸಿ, ಅವರು ಉಳಿದುಕೊಳ್ಳಲು ವಸತಿಗೃಹಗಳ ವ್ಯವಸ್ಥೆಗಳನ್ನು ಮಾಡುವುದು ಈ ಸಂದರ್ಭದಲ್ಲಿ ಆಗಮಿಸುತ್ತಿದ್ದ ಪಾರ್ಟಿಯ ರಾಷ್ಟ್ರೀಯ ಪದಾಧಿಕಾರಿಗಳು ಮತ್ತು ಕೇಂದ್ರ ಸಚಿವರನ್ನು ಬರಮಾಡಿಕೊಳ್ಳುವ ಸಂದರ್ಭದಲ್ಲಿ ಅವರನ್ನು ಸ್ವಾಗತಿಸಲು ಪಾರ್ಟಿಯ ಕಾರ್ಯಕರ್ತರಿಗೂ ಅವಕಾಶ ಮಾಡಿಕೊಟ್ಟಿದ್ದು ವಿಶೇಷ. ಹೀಗೆ ಸುಮಾರು 176 ವಿಶೇಷ ನಾಯಕರನ್ನು ಸ್ವಾಗತಿಸಿ ಅವರಿಗೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಟ್ಟಿದ್ದು ಈ ತಂಡದ ವಿಶೇಷ.

**ರ್‍ಯಾಲಿ/ಸಮಾವೇಶ:** ಚುನಾವಣೆ ವಾತಾವರಣ ಕಳೆಗಟ್ಟುವುದೇ ರ್‍ಯಾಲಿಗಳಿಂದ ಹಾಗಾಗಿ ರಾಜ್ಯದಲ್ಲಿ ಒಟ್ಟು 18 ರ್‍ಯಾಲಿಗಳನ್ನು ಮತ್ತು 5 ರೋಡ್ ಶೋಗಳನ್ನು ಯೋಜಿಸಲಾಗಿತ್ತು. ಈ ರ್‍ಯಾಲಿಗಳನ್ನು ಕಲ್ಯಾಣ ಕರ್ನಾಟದಿಂದ ಕಿತ್ತೂರು ಕರ್ನಾಟಕದಿಂದ, ಮಧ್ಯ ಕರ್ನಾಟಕದಿಂದ ಹಾಗೆಯೇ ನಮ್ಮ ದಕ್ಷಿಣದ ಹಳೇ ಮೈಸೂರು ಭಾಗವನ್ನು ಒಳಗೊಂಡಂತೆ ನಮ್ಮ ಎಲ್ಲಾ ಪ್ರಮುಖವಾದಂತಹ ನಗರಗಳನ್ನು ಸೇರಿಸಿದಂತೆ ಎಲ್ಲಾ 224 ಕ್ಷೇತ್ರಗಳನ್ನೊಳಗೊಂಡಂತೆ ನಾವು ಕಾರ್ಯಯೋಜನೆ ಸಿದ್ದಗೊಂಡಿದ್ದವು. ಇದರಲ್ಲಿ ಪ್ರಮುಖವಾದುದು ಪ್ರಧಾನಿ ಮೋದಿಯವರ ಸಮಾವೇಶಗಳು ಮತ್ತು ರೋಡ್ ಶೋ, ರಾಷ್ಟ್ರೀಯ ಅಧ್ಯಕ್ಷರ ರೋಡ್ ಶೊ, ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರ ಸಭೆ ಮತ್ತು ರೋಡ್ ಶೋ. ಇನ್ನುಳಿಂದತೆ ಕೇಂದ್ರ ಸಚಿವರು, ಬಿಜೆಪಿ ಇತರ ರಾಜ್ಯದ ಮುಖ್ಯಮಂತ್ರಿಗಳ ಕಾರ್ಯಕ್ರಮವೂ ಇತ್ತು. ಇವುಗಳಲ್ಲಿ ಪ್ರಮುಖವಾಗಿ ಪ್ರಧಾನಿ ಮೋದಿಯವರ ರೋಡ್ ಶೋ ಮತ್ತು ಸಭೆಗಳನ್ನು ನಡೆಸುವುದು ಅತ್ಯಂತ ಸವಾಲಿನ ಕೆಲಸವೇ ಆಗಿತ್ತು. ಅವರಿಗಿರುವ ಭದ್ರತಾ ಸಾವಾಲುಗಳನ್ನು ಪರಿಗಣಿಸಿ ಸಾರ್ವಜನಿಕರಿಗೆ ತೊಂದರೆ ಆಗದಂತೆ, ಕಾರ್ಯಕರ್ತರಿಗೆ ಬೇಸರ ಆಗದಂತೆ ಅಚ್ಚುಕಟ್ಟಾಗಿ ಮಾಡಬೇಕಿತ್ತು. ಬೆಂಗಳೂರಿನಲ್ಲಿ ಜೆಪಿ ನಗರದಿಂದ ಮಲ್ಲೇಶ್ವರದ ತನಕ 26 ಕಿ.ಮೀ ಉದ್ದದ ರೋಡ್ ಶೊ ರಾಜ್ಯದ ಇತಿಹಾದಲ್ಲೇ ನಡೆದ ಅತ್ಯಂತ ದೊಡ್ಡ ರೋಡ್ ಶೊ ಆಗಿತ್ತು. ಇದಕ್ಕೆ ಲಕ್ಷಾಂತರ ಮಂದಿ ನಾಗರೀಕರು ಸ್ವಯಂಪ್ರೇರಣೆಯಿಂದ ಭಾಗವಹಿಸಿದ್ದರು. ಒಟ್ಟಾರೆ ಇಡೀ ರಾಜ್ಯದಲ್ಲಿ ಒಟ್ಟು 100 ಕೇಂದ್ರ ನಾಯಕರ ಸಭೆಗಳನ್ನು, 60 ರೋಡ್ ಶೋಗಳನ್ನು, 206 ಕ್ಕೂ ಹೆಚ್ಚು ರಾಜ್ಯ ನಾಯಕರ ಸಭೆಗಳನ್ನು ಯೋಜಿಸಲಾಗಿತ್ತು. 26 ಕ್ಕೂ ಹೆಚ್ಚು ರೋಡ್ ಶೋಗಳನ್ನು

ನಡೆಸಲಾಯಿತು. ಕಾರ್ನರ್ ಸಭೆಗಳು, ರೋಡ್ ಶೋಗಳು, ಕಲಾವಿದರ, ಪ್ರಭಾವಿಗಳ ಸಭೆಗಳು ಸೇರಿದಂತೆ ಬಿಜೆಪಿಯ ತಾರಾ ಪ್ರಚಾರಕರಲ್ಲದ ಪ್ರಚಾರಕರ ಪ್ರವಾಸಗಳು ಇತ್ಯಾದಿ ಸೇರಿದರೆ ಸಾವಿರಕ್ಕೂ ಮೀರಿ ಸಭೆಗಳನ್ನು ನಡೆಸಲಾಯಿತು.

**ಮಾಧ್ಯಮ ವಿಭಾಗ :** ಚುನಾವಣಾ ನಿರ್ವಹಣೆಯಲ್ಲಿ ಮಾಧ್ಯಮ ವಿಭಾಗಕ್ಕೆ ತನ್ನದೇ ಮಹತ್ವವಿದೆ. ಚುನಾವಾಣ ನಿರ್ವವಣಾ ದೃಷ್ಟಿಯಿಂದ ರಾಜ್ಯದಲ್ಲಿ ತಾತ್ಕಾಲಿಕವಾಗಿ ಪ್ರತ್ಯೇಕವಾದ ಕಛೇರಿಯುನ್ನು ತರೆಯುಲಾಯಿತು. ಇದನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿರವರು ಉದ್ಘಾಟಿಸಿದರು.



ಅಲ್ಲಿಂದ ಮೊದಲ್ಗೊಂಡು ಚುನಾವಣೆ ಪ್ರಕ್ರಿಯೆ ಸಂಪೂರ್ಣ ಮುಗಿಯುವ ತನಕ ಈ ವಿಭಾಗ ರಾಜ್ಯಾದ್ಯಂತ ಅತ್ಯಂತ ವ್ಯವಸ್ಥಿತವಾಗಿ ಮಾಧ್ಯಮ ನಿರ್ವಹಣೆ ಮಾಡಿದರೆ, ರಾಜ್ಯದಲ್ಲಿ ಕೇಂದ್ರ ಕಾರ್ಯಾಲಯದ ಜೊತೆಗೆ ಹುಬ್ಬಳ್ಳಿ, ಮಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿಯಲ್ಲಿ ವಿಭಾಗ ಕಾರ್ಯಾಲಯಗಳನ್ನು ತೆರೆಯಲಾಗಿತ್ತು.

ರಾಜ್ಯದಲ್ಲಿ 30 ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ರಾಜ್ಯ ನಾಯಕರ 69 ಕ್ಕೂ ಹೆಚ್ಚು ಸಂದರ್ಶನವನ್ನು ಬೇರೆ ಬೇರ ಸುದ್ದಿವಾಹಿನಿಗಳಿಗೆ ನೀಡಿದರು. ಒಟ್ಟು 64 ಕ್ಕೂ ಹೆಚ್ಚು ರಾಜ್ಯ ನಾಯಕರು ಸುದ್ದಿಗೋಷ್ಟಿಗಳನ್ನು ಮಾಡಿದರೆ, 220ಕ್ಕೂ ಹೆಚ್ಚು ಬೈಟ್‌ಗಳನ್ನು ನೀಡಲಾಗಿದೆ. ಚುನಾವಣೆಯ ಉದ್ದಕ್ಕೂ ರಾಜ್ಯದಲ್ಲಿ ಸುಮಾರು 500ಕ್ಕೂ ಹೆಚ್ಚು ಕಾರ್ಯಕರ್ತರು ಪದಾಧಿಕಾರಿಗಳು ಮಾಧ್ಯಮ ವಿಭಾಗದಲ್ಲಿ ಹಗಲು ರಾತ್ರಿ ಕೆಲಸ ಮಾಡಿದ್ದಾರೆ.

**ಕಾನೂನು ವಿಭಾಗ :** ಕಾನೂನು ವಿಭಾಗದ ಕೆಲಸ ಚುನಾವಣಾ ಸಮಯದಲ್ಲಿ ವಿಶೇಷವಾಗಿರುತ್ತದೆ. 29/03/2023 ರಿಂದ ಕಾನೂನು ವಿಭಾಗ ತನ್ನ ಚುನಾವಣೆಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಅತ್ಯಂತ ಕ್ರಿಯಾಶೀಲವಾಗಿ ನಡೆಸಲಾರಂಭಿಸಿತು. ಸುಮಾರು 50 ಕ್ಕೂ



ಹೆಚ್ಚು ವಕೀಲರು ಚುನಾವಣೆ ಮುಗಿಯುವವರೆಗೂ ಪೂರ್ಣಾವಧಿಯಾಗಿ ಕೆಲಸ ನಿರ್ವಸಿದರು. ರಾಜ್ಯದಿಂದ ರಚಿಸಲಾದ ಕಾನೂನು ತಂಡದೊಂದಿಗೆ ರಾಜ್ಯದಲ್ಲಿಯೇ ಉಪ ಸಮಿತಿಗಳನ್ನು ರಚಿಸಿ, ಅಲ್ಲದೆ ಜಿಲ್ಲಾ ಉಸ್ತುವಾರಿ ತಂಡಗಳನ್ನು ರಚನೆ ಮಾಡಿ ಅತ್ಯಂತ ಅಚ್ಚುಕಟ್ಟಾಗಿ ತನ್ನ ಜವಾಬ್ಧಾರಿಯನ್ನು ಕಾನೂನು ವಿಭಾಗ ನಿರ್ವಹಿಸಿದೆ.

ದೂರು ಸಲ್ಲಿಕೆ ತಂಡ, ಸಂಶೋಧನಾ ತಂಡ, ಕಛೇರಿ ನಿರ್ವಹಣಾ ತಂಡ, ಅನುಮತಿ ತಂಡ, ನಾಮಪತ್ರ ತಂಡ, ಚುನಾವಣಾ ಅಧಿಕಾರಿಗಳ ಸಂಪರ್ಕಕ್ಕಾಗಿ ಸಮನ್ವಯ ತಂಡ ಸೇರಿದಂತೆ ಏಳು ಉಪ ಸಮಿತಿಗಳನ್ನು ರಚಿಸಲಾಗಿತ್ತು. ಅಲ್ಲದೆ ಪ್ರತಿ ಜಿಲ್ಲೆಯ ಉಸ್ತುವಾರಿಗಳನ್ನು ನೋಡಿಕೊಳ್ಳಲು ಒಂದೊಂದು ತಂಡವನ್ನು ರಚಿಸಲಾಗಿತ್ತು.

ಚುನಾವಣೆ ಪ್ರಾರಂಭವಾದಾಗಿನಿಂದ ವಾಹನಗಳ, ರಾಜ್ಯ, ರಾಷ್ಟ್ರೀಯ ನಾಯಕರ ರ್‍ಯಾಲಿ, ಸಮಾವೇಶಗಳಿಗೆ ಬೇಕಾದ ಅನುಮತಿಗಳನ್ನು ಪಡೆಯುದರಿಂದ ಹಿಡಿದು, ಮನವಿ ಸಲ್ಲಿಸುವುದು, ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸುವುದು, ವಿವಿಧ ಜಿಲ್ಲೆಗಳಿಂದ ಬಂದ ಚುನಾವಣೆಗೆ ಸಂಬಂಧಿಸಿದ ದೂರುಗಳನ್ನು ತತ್‌ತಕ್ಷಣ ಸಂಬಂಧಪಟ್ಟವರ ಬಳಿ ಮಾತನಾಡಿ ಬಗೆಹರಿಸುವಲ್ಲಿ ಸದಾ ಸಕ್ರಿಯವಾಗಿ ಕೆಲಸ ನಿರ್ವಹಿಸಿದೆ. ರಾಜ್ಯದ ಕಾನೂನು ತಂಡ 300 ಕ್ಕೂ ಹೆಚ್ಚು ದೂರು ಸಲ್ಲಿಸಿದ್ದು, 150 ಕ್ಕೂ ಹೆಚ್ಚು ಮನವಿಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗಿದೆ. ಇದಲ್ಲದೆ ವಿವಿಧ ಜಿಲ್ಲೆಗಳಿಂದ 200 ಕ್ಕೂ ಹೆಚ್ಚು ದೂರುಗಳನ್ನು, 250 ಕ್ಕೂ ಹೆಚ್ಚು ಮನವಿಗಳನ್ನು ಸಲ್ಲಿಸಲಾಗಿದೆ.

ಕಾನೂನು ವಿಭಾಗದಿಂದ ಅತೀ ಮುಖ್ಯವಾಗಿ ಆದ ಕೆಲಸವೆಂದರೆ ಅಭ್ಯರ್ಥಿಗಳ ಘೋಷಣೆಯಾದಾಗಿನಿಂದ ಅವರಿಗೆ ಬಿ-ಫಾರಂ ನೀಡಿ ಪ್ರಚಾರ ಮುಗಿಯುವವರೆಗೂ ಅವರ ಜೊತೆಗೆ ಕಾನೂನಾತ್ಮಕವಾಗಿ ಬಲವಾಗಿ ನಿಂತಿರುವುದು. ಪಕ್ಷದ ಅಭ್ಯರ್ಥಿಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಬಿ-ಫಾರಂ ನೀಡಿ, ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಎದುರಾದ ಎಲ್ಲಾ ಕಾನೂನು ತೊಂದರೆಗಳನ್ನೆಲ್ಲ

ಬಗೆಹರಿಸಿ, ರಾಜ್ಯ ತಂಡದಿಂದ ಮೇಲ್ವಿಚಾರಣೆ ಮೂಲಕ ಸಾರಾಗವಾಗಿ ನಾಮಪತ್ರ ಸಲ್ಲಿಸಲು ಮಹತ್ವದ ಜವಾಬ್ದಾರಿ ವಹಿಸಿದ್ದರು. 25 ನಾಮಪತ್ರಗಳನ್ನು ನೇರವಾಗಿ ರಾಜ್ಯ ಕಛೇರಿಯಿಂದ ಪರಿಶೀಲಿಸಿ ಸಿದ್ದಪಡಿಸಿ ನೀಡಲಾಯಿತು. ಅಲ್ಲದೆ ನಾಮಪತ್ರ ಸಲ್ಲಿಕೆ ನಂತರ ಎಲ್ಲರ ನಾಮಪತ್ರಗನ್ನು ಚುನಾವಣಾ ಆಯೋಗದ ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಪರೀಶೀಲಿಸಿ, ತಪ್ಪಿದ್ದಲ್ಲಿ ಅದನ್ನು ಸರಿಪಡಿಸಿ ಎರಡನೇ ಪ್ರತಿಯನ್ನು ಸಲ್ಲಿಸುವ ಕಾರ್ಯವೂ ಸಹ ಅಚ್ಚುಕಟ್ಟಾಗಿ ನಿರ್ವಹಿಸಲಾಯಿತು.

ಇದೆಲ್ಲವು ಸುಸೂತ್ರವಾಗಿ ನಡೆಯುವ ಸಲುವಾಗಿ ಎರಡು ಮೂರು ದಿನಗಳಿಗೊಮ್ಮೆ ಜಿಲ್ಲಾ ತಂಡದೊಂದಿಗೆ ರಾಜ್ಯದ ಕಾನೂನು ವಿಭಾಗದ ಪ್ರಮುಖರು ವರ್ಚೂವಲ್ ಸಭೆಗಳನ್ನು ನಡೆಸಿ ಮಾಹಿತಿ ನೀಡುತ್ತಿದ್ದರು. ಅಲ್ಲದೆ ಮತದಾನದ ನಂತರ ಎಣಿಕೆ ದಿನ ಭಾಗಿಯಾಗುವ ಕೌಂಟಿಂಗ್ ಏಜೆಂಟರಿಗೆ ಸಹ ಪ್ರತಿ ಜಿಲ್ಲೆಯಲ್ಲಿ ಕಾರ್ಯಾಗಾರವನ್ನು ಏರ್ಪಡಿಸಿ, ಏಣಿಕೆ ದಿನ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿವರ ನೀಡಿಲಾಯಿತು.

ಬಹುತೇಕ ಚುನಾವಣೆಯ ನಂತರ ಎಲ್ಲಾ ವಿಭಾಗಗಳ ಕಾರ್ಯ ಮುಗಿದಿರುತ್ತದೆ. ಆದರೆ ಕಾನೂನು ವಿಭಾಗ ಒಂದು ಹೆಜ್ಜೆ ಮುಂದೆ ಹೋಗಿ ಚುನಾವಣಾ ಸಮಯದಲ್ಲಿ ಕಾರ್ಯಕರ್ತರ ಮೇಲೆ ಯಾವುದಾದರೂ ಪ್ರಕರಣಗಳು ದಾಖಲಾಗಿದ್ದರೆ ಅದಕ್ಕೆ ಸಂಬಂಧಿಸಿದ ಕಾನೂನು ಸಲಹೆ, ಸಹಕಾರವನ್ನು ನೀಡಲಾಗುವುದು ಎಂದು ರಾಜ್ಯ ಕಾನೂನು ಘಟಕ ಅಭಿಯಾನವನ್ನು ಆರಂಭಿಸಿ ಇಲ್ಲಿಯ ವರೆಗೆ 26 ಕ್ಕೂ ಹೆಚ್ಚು ಪ್ರಕರಣಗಳನ್ನು ಬಗೆಹರಿಸಲಾಗಿದ್ದು ಈ ಕಾರ್ಯ ಇನ್ನೂ ನಡೆಯುತ್ತಿದೆ.

**ಏಕ ಕಾಲದಲ್ಲಿ ಪ್ರಚಾರದ ಯೋಜನೆ :** ಕೇವಲ ಚುನಾವಣೆಯ ಕಾರ್ಯ ಮಾತ್ರವಲ್ಲದೆ ಚುನಾವಣಾ ಪ್ರಚಾರದಲ್ಲೂ ಕಾನೂನು ತಂಡ ಸಕ್ರಿಯವಾಗಿ ಭಾಗವಹಿಸಿದೆ. ಪ್ರಚಾರದ ಭಾಗವಾಗಿ ರಾಜ್ಯದ ಎಲ್ಲಾ ಜಿಲ್ಲಾ ನ್ಯಾಯಾಲಯಗಳಲ್ಲಿ ಒಂದೇ ದಿನ ಏಕಕಾಲದಲ್ಲಿ ಪಕ್ಷದ ಪರವಾಗಿ ಪ್ರಚಾರ ಕಾರ್ಯ ಕೈಗೊಳ್ಳಲಾಗಿತ್ತು. ಪ್ರತಿ ಜಿಲ್ಲೆಗೆ ರಾಜ್ಯದಿಂದ 2-3 ಜನರ ವಕೀಲರ ತಂಡ ಸಹ ಭಾಗಿಯಾಗಿ ಪ್ರಚಾರ ಕಾರ್ಯಕ್ಕೆ ಹುಮ್ಮಸ್ಸು ನೀಡಿದ್ದು ವಿಶೇಷವಾಗಿತ್ತು.

**ಸಾಹಿತ್ಯ ನಿರ್ಮಾಣ :** ಚುನಾವಣಾ ಸಮಯದಲ್ಲಿ ಬಿಜೆಪಿಯ ಸಾಧನೆಗಳ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆ ಹಾಗೂ ವಿರೋಧಿಗಳ ತಪ್ಪುಗಳ ಬಗ್ಗೆ, ಪಕ್ಷದ ವಿಶೇಷತೆಗಳ ಬಗ್ಗೆ ಸಾಹಿತ್ಯ ಕರಪತ್ರಗಳ ಮೂಲಕ ಜನರನ್ನು ತಲುಪುವುದು ಅತ್ಯಂತ ಪ್ರಮುಖವಾಗಿದೆ. ಅದಕ್ಕೊಸ್ಕರ ಸಾಹಿತ್ಯ ನಿರ್ಮಾಣ ತಂಡ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿದೆ.

ಚುನಾವಣೆ ಘೋಷಣೆಯಾದ ನಂತರ ಸುಮಾರು 6 ಕ್ಕೂ ಹೆಚ್ಚು ಪುಸ್ತಕಗಳನ್ನು, ಸಮಗ್ರವಾದ ಮತ್ತು ವಲಯವಾರು 12 ಕ್ಕೂ ಹೆಚ್ಚು ಕರಪತ್ರಗಳನ್ನು ಮಾಡಲಾಯಿತು. ರಾಜ್ಯ ಸರ್ಕಾರದ ಸಾಧನೆಗಳ ಕಿರು ಹೊತ್ತಿಗೆ, ವಿರೋಧಪಕ್ಷಗಳ ಹಗರಣಗಳ ಪುಸ್ತಕ, ರಾಜಕೀಯೇತರ ವ್ಯಕ್ತಿಗಳ ಸಂಪರ್ಕಗಳಿಗೆ ಪಕ್ಷದ ಸಿದ್ದಾಂತ, ಆದರ್ಶಗಳನ್ನೊಳಗೊಂಡ ಇದುವೇ ಕಮಲಪಥ ಸೇರಿದಂತೆ 6 ಪುಸ್ತಕಗಳನ್ನು ಹೊರತಂದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳು ಮತ್ತು ಯೋಜನೆಗಳು, ಯುವ, ಮಹಿಳೆ, ರೈತ, ಶಿಕ್ಷಣ ಸೇರಿದಂತೆ ಇನ್ನೂ ಅನೇಕ ವಿಭಾಗಗಳ 12 ಕ್ಕೂ ಹೆಚ್ಚು ಕರಪತ್ರಗಳನ್ನು ತಯಾರಿಸಿ ಬೂತ್ ಮಟ್ಟದವರೆಗೂ ತಲುಪಿಸಲಾಗಿದೆ.

ಇದಲ್ಲದೆ ಚುನಾವಣೆ ಘೋಷಣೆಗೂ ಮುನ್ನ ಯಾತ್ರೆಗಳಿಗೆ, ಸಮಾವೇಶಗಳಿಗೆ 4 ರಿಂದ 5 ಮಾದರಿಯ ಕರಪತ್ರಗಳನ್ನು ಸಿದ್ದಪಡಿಸಲಾಯಿತು. ಇನ್ನೊಂದೆಡೆ ಪಕ್ಷದ ಮಾಸ ಪತ್ರಿಕೆ ಕಮಲಪಥವನ್ನು ಚುನಾವಣೆಗೊಸ್ಕರ 15 ದಿನಕ್ಕೆ ಒಂದರಂತೆ ತಿಂಗಳಿಗೆ ಎರಡು ಸಂಚಿಕೆಗಳನ್ನು ಹೊರತರಲಾಯಿತು.

ಅಲ್ಲದೆ ಕಾಲ ಕಾಲಕ್ಕೆ ವಕ್ತಾರರಿಗೆ, ವಿವಿಧ ಭಾಗದವರಿಗೆ, ವಿವಿಧ ಕ್ಷೇತ್ರದ ಅಭ್ಯರ್ಥಿಗಳಿಗೆ ಬೇಕಾದ ಮಾಹಿತಿ, ಅಂಕಿಅಂಶ, ಭಾಷಣಗಳನ್ನು ಸಾಹಿತ್ಯಗಳನ್ನು ತಂಡ ನಿಖರವಾಗಿ ಒದಗಿಸಿದೆ. ಸಮಾವೇಶ, ಯಾತ್ರೆಗಳ ಮೂಲಕ ಚುನಾವಣೆ ಪ್ರಚಾರ ಒಂದೆಡೆಯಾದರೆ, ಸಾಹಿತ್ಯಗಳ ಮೂಲಕ ಚುನಾವಣಾ ಪ್ರಚಾರವನ್ನು ಅತ್ಯಂತ ಯಶಸ್ವಿಯಾಗಿ ಸಾಹಿತ್ಯ ನಿರ್ಮಾಣ ತಂಡ ನಿರ್ವಹಿಸಿದೆ.

**ಪ್ರಗತಿ ರಥ:** ರಾಜ್ಯಸರಕಾರದ ಸಾಧನೆಗಳನ್ನು ಜನರ ಮುಂದೆ ಪರಿಣಾಮಕಾರಿಯಾಗಿ ಪ್ರಚುರಪಡಿಸಲು ಪ್ರಗತಿ ರಥ ಹೆಸರಿನಲ್ಲಿ ಡಿಜಿಟಲ್ ವ್ಯಾನುಗಳನ್ನು ಪ್ರತೀ ವಿಧಾನಸಭಾ ಕ್ಷೇತ್ರಗಳಿಗೆ ಒಂದರಂತೆ ಸಂಚಾರ ಮಾಡಿತು.



ಇದು ಆಯಾ ವಿಧಾನಸಭಾ ಕ್ಷೇತ್ರಗಳ ಪ್ರತಿಯೊಂದು ಬೂತ್‌ಗಳಿಗೂ ಹೋಗಿ ಅಲ್ಲಿನ ಸಾರ್ವಜನಿಕ ಪ್ರದೇಶಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಾಧನೆಗಳ ವಿಡಿಯೋಗಳನ್ನು ಪ್ರಸಾರ ಮಾಡುವ ಮೂಲಕ ಜನರನ್ನು ತಲುಪಾಯಿತು.





**ಸಾಂಸ್ಕೃತಿಕ ಪ್ರಚಾರ:** ಚುನಾವಣೆಯಲ್ಲಿ ಸಭೆ, ಮನೆ ಮನೆ, ರ್‍ಯಾಲಿ ಮುಂತಾದ ಪ್ರಚಾರಗಳ ಜೊತೆಗೆ ಬೀದಿ ನಾಟಕ, ಹಾಡು ಮುಂತಾದ ಸಾಂಸ್ಕೃತಿಕ ಪ್ರಚಾರಗಳು ಆಕರ್ಷಣೆಯಾಗಿರುತ್ತದೆ.

ಚುನಾವಣಾ ಭಾಗವಾಗಿ ರಾಜ್ಯದ ಎಲ್ಲೆಡೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆ ಹಾಗೂ ಯೋಜನೆಗಳನ್ನು ಸಾರುವ ಬೀದಿ ನಾಟಕಗಳ ಪ್ರದರ್ಶನವನ್ನು ಸಾಂಸ್ಕೃತಿಕ ಪ್ರಚಾರ ಸಮಿತಿ ಕಾರ್ಯಯೋಜನೆ ಸಿದ್ದಪಡಿಸಿ ನಿರ್ವಹಿಸಿದೆ.

ಮೊದಲು ಪ್ರದರ್ಶನವನ್ನು ರಾಜ್ಯ ಬಿಜೆಪಿ ಕೇಂದ್ರ ಕಛೇರಿ ಜಗನ್ನಾಥ ಭವನದಲ್ಲಿ ಆರಂಭವಾಗಿ ರಾಜ್ಯದ ಪ್ರತೀ ವಿಧಾನಸಭಾ ಕ್ಷೇತ್ರಗಳಲ್ಲೂ ಅತ್ಯಂತ ಯಶಸ್ವಿಯಾಗಿ ಬೀದಿ ನಾಟಕಗಳನ್ನು ಪ್ರದರ್ಶನ ಮಾಡಲಾಯಿತು. 224 ಕ್ಷೇತ್ರಗಳಲ್ಲಿ 40 ತಂಡಗಳಲ್ಲಿ 400 ಕ್ಕೂ ಹೆಚ್ಚು ಕಲಾವಿದರು 2,000 ಕ್ಕೂ ಅಧಿಕ ಯಶಸ್ವಿ ಪ್ರದರ್ಶನವನ್ನು ನಡೆಸಿದರು.

ಇದೆಲ್ಲವೂ ಕೆಲವು ವಿಭಾಗಗಳ ಉದಾಹರಣೆಗಳಷ್ಟೆ. ಕೇವಲ 9 ವಿಭಾಗ ಮಾತ್ರವಲ್ಲ ಒಟ್ಟು 32 ತಂಡಗಳು ವಿವಿಧ ವಿಭಾಗಗಳಲ್ಲಿ ವಿಶೇಷವಾಗಿ ಸುಮಾರು 60 ದಿನಗಳ ಕಾಲ ತಮ್ಮೆಲ್ಲ ವೈಯುಕ್ತಿಕ ಕೆಲಸ ಕಾರ್ಯಗಳೆನ್ನೆಲ್ಲ ಬದಿಗಿಟ್ಟು, ಸಮಯದ ಮಿತಿ ಇಲ್ಲದೆ ರಾತ್ರಿ ಹಗಲು ಕಾರ್ಯನಿರ್ವಹಿಸಿದ ದೊಡ್ಡ ಕಾರ್ಯಕರ್ತರ ಪಡೆ ತನ್ನ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದೆ.

ಚುನಾವಣೆ ಅಂದರೆ ಸೋಲು-ಗೆಲುವುಗಳ ಒಂದು ಸಹಜ ಪ್ರಕ್ರಿಯೆ. ಆದರೆ ಸೋತಾಗ ಕುಗ್ಗದೆ, ಗೆದ್ದಾಗ ಬೀಗದೆ ಈ ಎಲ್ಲಾ ಕಾರ್ಯಕರ್ತರು ಭಾಂದವ್ಯದಲ್ಲಿ, ಸಿದ್ಧಾಂತಕ್ಕಾಗಿ ಕಾರ್ಯನಿರ್ವಹಿಸಿ, ಈಗ ಪಕ್ಷ ಸಂಖ್ಯೆಯಲ್ಲಿ ಹಿನ್ನಡೆ ಅನುಭವಿಸಿ ಅಧಿಕಾರ ಕಳೆದುಕೊಂಡ ಬೇಸರವಿದ್ದರು, ಅದನ್ನು ಸಾವರಸಿಕೊಂಡು ಮತ್ತೆ ಮುಂದೆ ಬರಬಹುದಾದ ಚುನಾವಣಾ ಕಾರ್ಯಕ್ಕೆ ಸನ್ನದ್ದವಾಗಿ ನಿಂತಿದ್ದಾನೆ.

## ರಾಜ್ಯ ಬಿಜೆಪಿ ರೈತ ಮೋರ್ಚಾ ವತಿಯಿಂದ ಅವಲೋಕನಾ ಸಭೆ



ರಾಜ್ಯ ಬಿಜೆಪಿ ಕರ್ನಾಟಕ ರೈತ ಮೋರ್ಚಾ ವತಿಯಿಂದ ಅವಲೋಕನ ಸಭೆಯನ್ನು ಬೆಂಗಳೂರಿನ ಹಿಡನ್ ಪಾರ್ಕ್ ಹೋಟೆಲ್‌ನಲ್ಲಿ ರೈತ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಈರಣ್ಣ ಕಡಾರಿ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ರಾಜ್ಯದೆಲ್ಲೆಡೆ ಕಳೆದ ಮೂರು ವರ್ಷ ಅವಧಿಯಲ್ಲಿ ರಾಜ್ಯ ರೈತ ಮೋರ್ಚಾ ವತಿಯಿಂದ ಆಯೋಜಿಸಲಾಗಿದ್ದ ವಿವಿಧ ಕಾರ್ಯಕ್ರಮಗಳು ಹಾಗೂ ಉಲ್ಲೇಖನಿಯ ಸಂಘಟನಾತ್ಮಕ ಕಾರ್ಯಕ್ರಮಗಳ ವರದಿಯನ್ನು ಹಾಗೂ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯ ಕುರಿತು ಅವಲೋಕನ ಸಭೆ ನಡೆಸಲಾಯಿತು.

ಈ ಬಾರಿಯ ವಿಧಾನಸಭಾ ಚುನಾವಣಾ ಫಲಿತಾಂಶ ಕುರಿತು ಹಾಗೂ ಹಿನ್ನೆಡೆ ಸಂಭವಿಸಿರುವ ಕುರಿತು ರಾಜ್ಯ ಪದಾಧಿಕಾರಿಗಳಿಂದ ವಿಭಾಗವಾರು ವರದಿಯನ್ನು ಪಡೆದುಕೊಂಡು ಸದ್ಯಕ್ಕೆ ಆಗಿರುವ ಲೋಪಗಳನ್ನು ಸರಿಪಡಿಸಿಕೊಂಡು ಮುಂಬರುವ ಲೋಕಸಭಾ ಚುನಾವಣೆಗೆ ಪಕ್ಷವನ್ನು ಗಟ್ಟಿಗೊಳಿಸಲು ವಿವಿಧ ಕಾರ್ಯ ಯೋಜನೆಗಳ ಕುರಿತು ಚರ್ಚಿಸಲಾಯಿತು.

ಕೇಂದ್ರ ಸರ್ಕಾರದ ಯಶಸ್ವಿ 9 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಮೇ 30 ರಿಂದ ಜೂನ್ 30ರವರೆಗೆ ಫಲಾನುಭವಿಗಳ ಸಭೆಯನ್ನು ನಡೆಸುವ ಮೂಲಕ ಕೇಂದ್ರ ಸರ್ಕಾರದ ಯೋಜನೆಗಳ ಕುರಿತು ಜಾಗೃತಿ ಮೂಡಿಸಬೇಕೆಂದು ಸಭೆಯಲ್ಲಿ ನಿರ್ಧರಿಸಲಾಯಿತು.



# ಆಸ್ಟ್ರೇಲಿಯದ ಸಿಡ್ನಿ ಕ್ರೀಡಾಂಗಣದಲ್ಲಿ ಪ್ರಧಾನಿ ಮೋದಿ ಮಿಂಚು

ವಿಶ್ವದ ಯಾವುದೇ ದೇಶಕ್ಕೆ ಹೋದರೂ ಅಲ್ಲಿ ಭಾರತೀಯರು ತಮ್ಮದೇ ಆದ ಛಾಪು ಮೂಡಿಸಿರುತ್ತಾರೆ ಎಂದು ಪ್ರಶಂಸಿದ ಪ್ರಧಾನಿ ನರೇಂದ್ರ ಮೋದಿ, ವಿಶ್ವದ ವಿವಿಧೆಡೆ ಭಾರತದ ಟ್ಯಾಲೆಂಟ್ ಫ್ಯಾಕ್ಟರಿಯೇ ಚಾಲನೆಯಲ್ಲಿದೆ. ಜಗತ್ತಿನಾದ್ಯಂತ ಭಾರತದ ಪ್ರತಿಭೆಗಳೇ ಮಿನುಗುತ್ತಿವೆ ಎಂದು ಅನಿವಾಸಿ ಭಾರತೀಯರ ಕೊಡುಗೆಯನ್ನು ಕೊಂಡಾಡಿದರು.

ಆಸ್ಟ್ರೇಲಿಯದ ಸಿಡ್ನಿಯ ಬೃಹತ್ ಒಳಾಂಗಣ ಸಭಾಂಗಣದಲ್ಲಿ ಮಂಗಳವಾರ ನಡೆದ ಭಾರತೀಯ ಮೂಲದವರು ಮತ್ತು ಆಸ್ಟೇಲಿಯ ಜನಸಮುದಾಯದ ಸಮಾರಂಭದಲ್ಲಿ ಪ್ರಧಾನಿ ಮೋದಿ ಭಾವೋದ್ವೇಗದಿಂದಲೇ ಮಾತನಾಡಿದರು. ಅಪಾರ ಸಂಖ್ಯೆಯಲ್ಲಿದ್ದ ಅನಿವಾಸಿ ಭಾರತೀಯರು ಮಂತ್ರ ಜಪಿಸುವಂತೆ 'ಮೋದಿ ಮೋದಿ' ಎಂದು ಸತತವಾಗಿ ಕೂಗುತ್ತಿದ್ದುದು ಮೋದಿ ಅವರನ್ನು ಉತ್ತೇಜಿಸಿತು, ತುಸು ಭಾವುಕವಾಗಿಸಿತು.

ಭಾರತೀಯರು ಎಲ್ಲೇ ಹೋದರೂ ಅಲ್ಲಿಗೆ ಒಗ್ಗಿಕೊಳ್ಳುತ್ತಾರೆ, ಹೊಂದಿಕೊಳ್ಳುತ್ತಾರೆ, ತಾವಿರುವ ದೇಶವನ್ನು ಪ್ರೀತಿಸುತ್ತಾರೆ, ಅಲ್ಲಿನ ಸಮಾಜಕ್ಕೆ ಗಮನಾರ್ಹ ಕೊಡುಗೆ ನೀಡುತ್ತಾರೆ, ಭಾರತದ ಸಮೀರ್ ಎಂಬವರು ಇಲ್ಲಿ ಮೇಯರ್ ಆಗಿದ್ದಾರೆ ಎಂದ ಮೋದಿ, ಉಭಯ ದೇಶಗಳ ನಡುವಿನ ಬಾಂಧವ್ಯಕ್ಕೆ ನೀಡಿದ ಕೊಡುಗೆಗಾಗಿ ಅವರು ಭಾರತೀಯ ಮೂಲದವರನ್ನು ಬಹಳವಾಗಿ ಕೊಂಡಾಡಿದರು. ಅನಿವಾಸಿ ಭಾರತೀಯರಿಂದಾಗಿಯೆ ಭಾರತ-ಆಸ್ಟ್ರೇಲಿಯ ಸಂಬಂಧ ಇನ್ನಷ್ಟು ಗಟ್ಟಿಯಾಗಿದೆ ಎಂದರು.

ಮೂರು ದಿನಗಳ ಆಸ್ಟ್ರೇಲಿಯ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಅವರ ಮಾತುಗಳನ್ನು ಆಲಿಸಲು 20ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಅನಿವಾಸಿ ಭಾರತೀಯರು ಕ್ರೀಡಾಂಗಣದಲ್ಲಿ ಹಾಜರಿದ್ದರು.ಇಲ್ಲಿರುವ ಭಾರತೀಯರನ್ನು ಕಂಡು ಬಹಳ ಸಂತೋಷವಾಗುತ್ತಿದೆ. ಪ್ರಸ್ತುತ ಇಡೀ ಜಗತ್ತು ಭಾರತದತ್ತ ತಿರುಗಿ ನೋಡುತ್ತಿದೆ. ಆರ್ಥಿಕತೆಯಲ್ಲಿ ಭಾರತ ವೇಗವಾಗಿ ಪ್ರಗತಿಯತ್ತ ಸಾಗುತ್ತಿದೆ. ಭಾರತದಲ್ಲಿ ಯಾವುದಕ್ಕೂ ಕೊರತೆ ಇಲ್ಲ. ಮೊಬೈಲ್ ತಯಾರಿಕೆಯ 2ನೇ ಅತಿ ದೊಡ್ಡ ರಾಷ್ಟ್ರವೆನಿಸಿದೆ. ವಾಹನೋದ್ಯಮದಲ್ಲಿ ಭಾರತ ವಿಶ್ವದಲ್ಲೇ 3ನೇ ದೊಡ್ಡ ರಾಷ್ಟ್ರವಾಗಿದೆ. ಬೃಹತ್ ಕೋವಿಡ್ ಲಸಿಕೆ ಕಾರ್ಯಕ್ರಮ ಆರಂಭಿಸಿದ ಭಾರತದಲ್ಲಿ ಡಿಜಿಟಲ್ ಕ್ರಾಂತಿಯೂ ಆಗಿದೆ ಎಂದು ಮೋದಿ ಹೇಳಿದರು.

**ಬೇಡಿಕೆ ಈಡೇರಿಕೆ :** ಬ್ರಿಸ್ಬೇನ್‌ನಲ್ಲಿ ರಾಯಭಾರಿ ಕಚೇರಿ ತೆರೆಯಬೇಕು ಎಂಬುದು ಅನಿವಾಸಿ ಭಾರತೀಯರ ಬಹುದಿನಗಳ ಬೇಡಿಕೆ. ಈ ಸಂದರ್ಭ ಆ ವಿಚಾರ ಪ್ರಸ್ತಾಪಿಸಿದ ಪ್ರಧಾನಿ ಮೋದಿ, ಬ್ರಿಸ್ಬೇನ್‌ನಲ್ಲಿ ಶೀಘ್ರದಲ್ಲೆ ಭಾರತದ ದೂತಾವಾಸ ಕಚೇರಿಯನ್ನು ಆರಂಭಿಸುವುದಾಗಿ ಘೋಷಿಸಿದರು. ಅದಕ್ಕೆ ಪ್ರತಿಯಾಗಿ ಸಭಾಂಗಣದಲ್ಲಿ ಮತ್ತೊಮ್ಮೆ ಖುಷಿಯ ಅಲೆಯೆದ್ದಿತು.



# ನುಡಿನಮನ...

## ಸಂಘದ ಹಿರಿಯ ಪ್ರಚಾರಕ ಹರಿಭಾವು ವಝೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕರಾಗಿದ್ದ ಶ್ರೀ ಹರಿಭಾವು ವಝೆ (92) ಅವರು 13-05-2023ರಂದು ಬೆಳಗಾವಿಯಲ್ಲಿ ನಿಧನರಾದರು.

ಕುರುಂದವಾಡದ ರಾಜ ಬಾವುಸಾಹೇಬ ಪಟವರ್ಧನರಲ್ಲಿ ಹಿರಿಯ ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಚಿಂತಾಮಣರಾವ್ ವಝೆ ಹಾಗೂ ರಾಧಾಬಾಯಿ ದಂಪತಿಗಳಿಗೆ 1932 ಅಕ್ಟೋಬರ್ 4ರಂದು ಹರಿಭಾವು ಅವರು ಜನಿಸಿದರು. ಹರಿಭಾವು ಅವರೂ ಸೇರಿ 3 ಜನ ಸಹೋದರರು, 3 ಸಹೋದರಿಯರ ತುಂಬು ಕುಟುಂಬ ಅವರದ್ದು. ತಮ್ಮ 4ನೇ ತರಗತಿಯಲ್ಲಿದ್ದಾಗ ನಾರಬಾ ಪಾಟೀಲ ಅವರ ಮೂಲಕ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಭಾಜಿ ಶಾಖೆಯ ಸ್ವಯಂಸೇವಕರಾದರು. ಕ್ರಮೇಣ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿ, ಶಾಖೆಯ ಶಿಕ್ಷಕ, ಮುಖ್ಯ ಶಿಕ್ಷಕ, ಕಾರ್ಯವಾಹ, ಬೆಳಗಾವಿ ನಗರ ಕಾರ್ಯವಾಹಕ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು.

ತಮ್ಮ ಎಂ.ಎಸ್ಸಿ ಪದವಿ ನಂತರ ಸಂಘದ ಪ್ರಚಾರಕರಾಗಿ ಹೊರಟರು. ಶ್ರೀ ಮಾಧವರಾವ ಜೋಷಿ ಅವರ ಮಾರ್ಗದರ್ಶನ ಹಾಗೂ ನಿಕಟತೆ ಹರಿಭಾವು ಅವರಿಗೆ ನಿರಂತರವಾಗಿತ್ತು. ಮಂಗಳೂರು ನಗರ ಪ್ರಚಾರಕ, ಶಿವಮೊಗ್ಗ ಜಿಲ್ಲಾ ಪ್ರಚಾರಕ ನಂತರ ಮೈಸೂರು ವಿಭಾಗದ ಪ್ರಚಾರಕರಾಗಿ ಕಾರ್ಯ ನಿರ್ವಹಿಸಿದ್ದರು. 1982ರಲ್ಲಿ ಅಖಿಲ ಭಾರತೀಯ ಇತಿಹಾಸ ಸಂಕಲನ ಸಮಿತಿಯ ಪ್ರಮುಖರಾಗಿದ್ದರು. ಗುಪ್ತಗಾಮಿನಿಯಾದ ಸರಸ್ವತಿ ನದಿಯ ಶೋಧ ಕಾರ್ಯದಲ್ಲಿ ಇವರ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು, ಈ ಕುರಿತು 14 ಭಾಷೆಗಳಲ್ಲಿ 3 ರೀತಿಯ ಪುಸ್ತಕಗಳನ್ನೂ ಸಹ ಪ್ರಕಟಿಸಿದ್ದರು. ಅನಾರೋಗ್ಯದಿಂದ ಬಳಲುತ್ತಿದ್ದ ಹರಿಭಾವು ವಝೆ ಅವರು 13-05-2023ರ ಶನಿವಾರದಂದು ಇಹಲೋಕ ತ್ಯಜಿಸಿದರು.

ಹರಿಭಾವು ವಝೆ ಅವರು ಸಂಘದ ಪ್ರಚಾರಕರಾಗಿ ಜೀವಮಾನವನ್ನು ಶ್ರೀಗಂಧದಂತೆ ಸವೆಸಿದ್ದರು. ಅತ್ಯಂತ ಸವಾಲಿರುವ ಕ್ಷೇತ್ರಗಳಲ್ಲಿ 'ಸ್ವಯಮೇವ ಮೃಗೇಂದ್ರತಾ' ಎಂಬಂತೆ ಕಾರ್ಯ ನಿರ್ವಹಿಸಿ ಸಂಘವನ್ನು ಬೆಳೆಸಿದ್ದರು. ಬಹಳ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರೂ ಎಂದೂ ವ್ಯಥೆ ಪಡೆದ ಭೀಷ್ಮ ಶರಶ್ಯೆಯಲ್ಲಿ ಪ್ರಾಣ ಬಿಟ್ಟಹಾಗೆ ಹರಿಭಾವು ಅವರು ನಮ್ಮನ್ನು ಅಗಲಿದ್ದಾರೆ.

**- ಸು. ರಾಮಣ್ಣ,**
**ಹಿರಿಯ ಪ್ರಚಾರಕರು, ರಾಷ್ಟ್ರೀಯ ಸ್ವಯಂಸೇವಕ ಸಂಘ**

ಹರಿಭಾವು ವಝೆ ಅವರು ಬಾಲ್ಯ ಕಾಲದಿಂದ ನಮಗೆಲ್ಲ ಸಂಸ್ಕಾರ ನೀಡಿ ಬೆಳೆಸಿದವರು. ಇತಿಹಾಸ ಸಮಿತಿಯಲ್ಲಿ ಅವರ ಪಾತ್ರ ಬಹಳ ಮಹತ್ವದ್ದಾಗಿತ್ತು. ಅವರು ಅನೇಕ ಕಾರ್ಯಕರ್ತರನ್ನು ಬೆಳೆಸಿದ್ದರು. ವ್ಯಕ್ತಿತ್ವದಿಂದ ಅವರು ಸದಾ ಆಶಾವಾದಿಯಾಗಿದ್ದರು. ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರೂ ಎಲ್ಲರೊಂದಿಗೆ ಲವಲವಿಕೆ, ಉತ್ಸಾಹದಿಂದ ಮಾತನಾಡಿಸುತ್ತಿದ್ದರು. ಅವರ ನಿಧನದಿಂದ ಸಂಘ ಹಾಗೂ ಕಾರ್ಯಕರ್ತರಿಗೆ ಅತೀವ ದುಃಖವಾಗಿದೆ.

**-ಅರವಿಂದರಾವ್ ದೇಶಪಾಂಡೆ**
**ಕರ್ನಾಟಕ ಉತ್ತರ ಪ್ರಾಂತ ಸಹ ಸಂಘಚಾಲಕರು**

ಹಿರಿಯ ಕಾರ್ಯಕರ್ತರ

19 **ಪರಿಚಯಮಾಲೆ**

## ಸಂಘಟನೆಯ ಕಾರ್ಯಕರ್ತರ ಸ್ಫೂರ್ತಿ

# ಹಿರಿಯೂರು ಕೃಷ್ಣಮೂರ್ತಿ



**ಸಂಘಟನೆಯ ಕಷ್ಟ ಕಾಲದಲ್ಲಿ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿ ಅನೇಕ ಸಲ ವಿಧಾನಪರಿಷತ್, ವಿಧಾನಸಭೆಯ ಸದಸ್ಯನಾಗುವ ಅವಕಾಶಗಳು ಸಿಕ್ಕಾಗಲೂ ಅದನ್ನು ನಯವಾಗಿಯೇ ತಿರಸ್ಕರಿಸಿ ಅಸಮಾನ್ಯ ಕಾರ್ಯಗಳನ್ನು ಸಾಧಿಸಿಯೂ ಸಾಮಾನ್ಯ ಕಾರ್ಯಕರ್ತನಂತೆ ಜೀವನ ನಡೆಸಿದವರು ಶ್ರೀ ಹಿರಿಯೂರು ಕೃಷ್ಣಮೂರ್ತಿಗಳು**

1960 ದಶಕದಲ್ಲಿ ಭಾರತೀಯ ಜನಸಂಘ ಕರ್ನಾಟಕದಲ್ಲೂ ಚಿಗುರೊಡೆಯಲು ಆರಂಭವಾಗಿತ್ತು. ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲೂ ಬೇರೆಲ್ಲಾ ಜಿಲ್ಲೆಗಳಿಗಿಂತ ಹೆಚ್ಚಿನ ಚಟುವಟಿಕೆಗಳಿಂದ ಕಾರ್ಯ ವಿಸ್ತಾರವಾಗುತ್ತಿದ್ದ ಸಮಯ. ಆ ಸಮಯದಲ್ಲಿ ಜನಸಂಘದ ಕಾರ್ಯಕರ್ತರೆಲ್ಲ ಸಂಘದ ಕಾರ್ಯಕರ್ತರೇ ಆಗಿರುತ್ತಿದ್ದರು. ಆಗ ಶಿವಮೊಗ್ಗ ಜಿಲ್ಲಾ ಕಾರ್ಯವಾಹರಾಗಿದ್ದವರು ಭ.ಮ. ಶ್ರೀಕಂಠಯ್ಯನವರು, ನಗರ ಕಾರ್ಯವಾಹರಾಗಿದ್ದವರು ದಾ.ಹ ಸುಬ್ಬಣ್ಣನವರು, ಸಹ ಕಾರ್ಯವಾಹರಾಗಿದ್ದವರು ಶ್ರೀ ಪಿ.ವಿ. ಕೃಷ್ಣಭಟ್ಟರು ಮತ್ತು ಶ್ರೀ ಹಿರಿಯೂರು ಕೃಷ್ಣಮೂರ್ತಿ ಅವರು.

ಆದರೆ ಹಿರಿಯೂರು ಕೃಷ್ಣಮೂರ್ತಿಯವರು ಸಂಘದ ಜವಾಬ್ದಾರಿಯ ಜೊತೆಗೆ ಜನಸಂಘದ ಚಟುವಟಿಕೆಗಳನ್ನೂ ಗಮನಿಸುತ್ತಿದ್ದರು. ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಹ ಜನಸಂಘದ ಕೆಲಸಗಳಲ್ಲಿ ಸಕ್ರೀಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು, ಜೊತೆಗೆ ಶಿವಮೊಗ್ಗದ ಪುರಸಭೆಯ ಸದಸ್ಯರೂ ಕೂಡ ಆಗಿದ್ದರು. ಆ ಭಾಗದ ಕಾಂಗ್ರೆಸ್ ಶಾಸಕರಾಗಿದ್ದ ಶ್ರೀ ಎಂ.ವಿ. ವೆಂಕಟಪ್ಪನವರಿಗೆ ಶ್ರೀ ಯಡಿಯೂರಪ್ಪನವರ ಮೇಲೆ ಬದ್ದ ವೈರತ್ವವಿತ್ತು.

ಶಾಸಕರ ಬೆಂಬಲಿಗರು ಶ್ರೀ ಯಡಿಯೂರಪ್ಪನವರ ಮೇಲೆ ಕಬ್ಬಿಣದ ಸಲಾಖೆಗಳಿಂದ ಮಾರಣಾಂತಿಕ ದಾಳಿ ನಡೆಸಿದರು. ತೀವ್ರವಾಗಿ ಗಾಯಗೊಂಡ ಶ್ರೀ ಯಡಿಯೂರಪ್ಪನವರನ್ನು ಶಿವಮೊಗ್ಗದ ಆಸ್ಪತ್ರೆಗೆ ಸೇರಿಸಲಾಯಿತು. ಅವರು ಗುಣಮುಖರಾದ ನಂತರ ಶಿವಮೊಗ್ಗದಿಂದ 5–6 ಕಾರುಗಳಲ್ಲಿ ಒಂದು ರೀತಿಯಲ್ಲಿ ಮೆರವಣಿಗೆಯ ಮೂಲಕ ಶಿಕಾರಿಪುರಕ್ಕೆ ಕರೆದೊಯ್ದದವರು ಶ್ರೀ ಹಿರಿಯೂರು ಕೃಷ್ಣಮೂರ್ತಿಯವರು. ಇದು ಆ ಕಾಲದಲ್ಲಿ ಒಂದು ರೀತಿಯಲ್ಲಿ ಕಾಂಗ್ರೆಸ್ ಗೂಂಡಾಗಿರಿಯ ವಿರುದ್ಧ ಮತ್ತು ಸಂಘದ ಶಕ್ತಿಯ ಪ್ರದರ್ಶನ ಕೂಡ ಆಗಿತ್ತು. ಆ ಮಟ್ಟಿಗೆ ಶ್ರೀ ಹಿರಿಯೂರು ಕೃಷ್ಣಮೂರ್ತಿಗಳು ಸಂಘಟನೆಯ ಕಾರ್ಯರ್ತರ ನೈತಿಕಮಟ್ಟ ಹೆಚ್ಚಿಸಿ ಅವರಲ್ಲಿ ಧೈರ್ಯ, ಸ್ಥೈರ್ಯ ತುಂಬುವ ಕೆಲಸ ಮಾಡಿದ್ದರು.

ಶಿವಮೊಗ್ಗದಲ್ಲಿ ನಡೆದ ಜನಸಂಘದ ಎಲ್ಲಾ ಕಾರ್ಯಕ್ರಮದ ಯೋಜನೆಯಲ್ಲಿ ಕಾರ್ಯಕರ್ತರಿಗೆ ಅವರು 1969 ರಿಂದ 2004ರ ವರೆಗೂ ಜನಸಂಘದಿಂದ ಬಿಜೆಪಿಯವರೆಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದರು. ವಿಶೇಷವಾಗಿ ತುರ್ತು ಪರಿಸ್ಥಿತಿ ಸಮಯದಲ್ಲಿ ಜನಸಂಘದ ಕಾರ್ಯಕರ್ತರ ಎಲ್ಲಾ ಚಟುವಟಿಕೆಗಳಲ್ಲಿ ಶ್ರೀ ಹಿರಿಯೂರು ಕೃಷ್ಣಮೂರ್ತಿಯವರು ಆಧಾರ ಸ್ತಂಭವಾಗಿ ನಿಂತಿದ್ದರು. ಜನ ಸಂಘದ ಬಹುತೇಕ ಕಾರ್ಯಕ್ರಮಗಳನ್ನು ನಿರ್ವಹಣೆ ಮಾಡುತ್ತಿದ್ದ



**ಉಷಾ ಉತ್ತಪ್ಪ**
ಸದಸ್ಯರು, ಪ್ರಕಾಶನ ಪ್ರಕೋಷ್ಠ,
ಶಿವಮೊಗ್ಗ

ಶ್ರೀ ಹಿರಿಯೂರು ಕೃಷ್ಣಮೂರ್ತಿಯವರು 1970–71 ರಲ್ಲಿ ಶ್ರೀ ವಾಜಪೇಯಿ ಅವರ ಶಿವಮೊಗ್ಗ ಭೇಟಿಯ ಸಂದರ್ಭದಲ್ಲಿ ಅವರು ಪ್ರವಾಸದ ಎಲ್ಲ ಕೆಲಸಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದರು. ಆ ಸಂದರ್ಭದಲ್ಲಿ ತೆರೆದ ಜೀಪ್‌ನಲ್ಲಿ ಶ್ರೀ ವಾಜಪೇಯಿ ಅವರ ಮೆರವಣಿಗೆಯೂ ನಡೆದಿತ್ತು. ತುರ್ತು ಪರಿಸ್ಥಿಯ ಸಂದರ್ಭದಲ್ಲಿ ಶಿವಮೊಗ್ಗದ ಅನೇಕ ಕಾರ್ಯಕರ್ತರು ಶ್ರೀಮತಿ ಇಂದಿರಾ ಗಾಂಧಿ ನೇತೃತ್ವದ ಸರ್ಕಾರದ ಮೀಸಾ ಕಾಯ್ದೆಯಡಿ ಬಂಧಿಯಾಗಿದ್ದರು ಹಾಗೂ ಹಲವರು ಭೂಗತವಾಗಿ ಕೆಲಸ ಮಾಡುತ್ತಾ ತಿಂಗಳುಗಟ್ಟಲೆ ತಮ್ಮ ಮನೆಗಳಿಂದ ದೂರವಾಗಿದ್ದರು. ಇಂತಹ ಸ್ವಯಂಸೇವಕರ ಹಾಗೂ ಕಾರ್ಯಕರ್ತರ ಮನೆಗಳನ್ನು ಸ್ಥಳೀಯ ಸ್ವಯಂಸೇವಕರ ಸಹಾಯದಿಂದ ಗುರುತಿಸಿ ಅವರ ಮನೆಗಳಿಗೆ ತೀರ ಅಗತ್ಯವಿದ್ದವರಿಗೆ ಆರ್ಥಿಕ ಸಹಾಯ ಮಾಡುವುದರ ಜೊತೆಗೆ ಅವರ ಮನೆಗೆ ದಿನಸಿ ವಸ್ತುಗಳನ್ನು ಪೂರೈಸುತ್ತಿದ್ದರು.

ಶಿವಮೊಗ್ಗದ ಕಸ್ತೂರಬಾ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ಶ್ರೀ ಹಿರಿಯೂರು ಕೃಷ್ಣಮೂರ್ತಿಯವರು ಅಲ್ಲಿನ ಹೆಣ್ಣು ಮಕ್ಕಳನ್ನು ಕೂಡ ಸಂಘಟಿಸಿ ಅವರಿಂದಲೂ ಪ್ರತಿಭಟನೆಯನ್ನು ಮಾಡಿಸಿದ ನಿದರ್ಶನವಿದೆ. ನಗರದ ನಾಲ್ಕು ದಿಕ್ಕುಗಳಿಂದಲೂ ಪ್ರತಿಭಟನೆಯ ಮೆರವಣಿಗೆಗಳನ್ನು ಸಂಘಟಿಸಿ ಅಲ್ಲಿಂದ ಎಲ್ಲರನ್ನೂ ಒಂದು ಜಾಗಕ್ಕೆ ಬಂದು ಸೇರುವಂತೆ ಯೋಜನೆ ರೂಪಿಸುತ್ತಿದ್ದರು. ನಗರದ ಸ್ವಯಂಸೇವಕರಿಂದ ತುರ್ತು ಪರಿಸ್ಥಿತಿಯ ವಿರುದ್ಧದ ಲೇಖನಗಳಿರುವ ಭೂಗತ ಪತ್ರಿಕೆ '**ಕಹಳೆ**'ಯನ್ನು ಮನೆಮನೆಗೆ ಹಂಚಲಾಗುತ್ತಿತ್ತು. ಇದರ ಮುದ್ರಣವನ್ನು ಬಿಂಬ ಮಂಜುನಾಥ್ ಕುದುವಳ್ಳಿ ಇವರ ಮನೆಯ ಮೇಲೆ ಮಾಡಲಾಗುತ್ತಿತ್ತು. ಒಮ್ಮೆ ಇದರ ಮಾಹಿತಿ ಸಿಕ್ಕ ಪೊಲೀಸರು ಮಂಜುನಾಥ್‌ರವರನ್ನು ಮೀಸಾ ಕಾಯ್ದೆಯಡಿ ಬಂಧಿಸಿ ಅವರ ತಾಯಿಯವರ ಎದುರು ಅವರನ್ನು ಥಳಿಸಿ ಬಳ್ಳಾರಿ ಜೈಲಿಗೆ ಕಳುಹಿದರು. ಇದರಿಂದ ಆತಂಕಗೊಂಡಿದ್ದ ಅವರ ತಾಯಿಯನ್ನು ಹಿರಿಯೂರು ಕೃಷ್ಣಮೂರ್ತಿಯವರು ಕಾರಿನಲ್ಲಿ ಬಳ್ಳಾರಿಗೆ ಕರೆದುಕೊಂಡು ಹೋಗಿ ಅವರ ಮಗನನ್ನು ತೋರಿಸಿಕೊಂಡು ಬಂದರು. ಮಗನನ್ನು ಕಂಡ ಅವರ ತಾಯಿ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು.


ತುರ್ತು ಪರಿಸ್ಥಿತಿಯ ಸಮಯದಲ್ಲಿ ಇಷ್ಟೆಲ್ಲಾ ಕೆಲಸಗಳನ್ನು ಮಾಡುತ್ತಿದ್ದ ಪೊಲೀಸರಿಗೆ ಶ್ರೀ ಹಿರಿಯೂರು ಕೃಷ್ಣಮೂರ್ತಿಯವರ ಬಗ್ಗೆ ಬಹಳಷ್ಟು ಅನುಮಾನಗಳಿದ್ದವು. ಈತ ಖಂಡಿತಾ ಸರ್ಕಾರದ ವಿರುದ್ದ ಕೆಲಸವನ್ನು ಮಾಡುತ್ತಿದ್ದಾನೆ ಎಂಬ ಗುಮಾನಿ ಇತ್ತು. ಹೀಗೆ ಕೃಷ್ಣಮೂರ್ತಿಗಳ ಬಗ್ಗೆ ಅನುಮಾನ ಬಂದಾಗ ಒಮ್ಮೆ ಪೊಲೀಸರು ಅವರ ಮನೆಯ ಬಳಿ ಹುಡುಕಿಕೊಂಡು ಬಂದಿದ್ದರು. ಆಗ ಕೃಷ್ಣಮೂರ್ತಿಗಳ ಪತ್ನಿ ತಮ್ಮ ಪತಿ ಮನೆಯೊಳಗಿಲ್ಲ ಎಂದು ಸುಳ್ಳು ಹೇಳಿ ಕಳುಹಿಸಿಕೊಡುತ್ತಿದ್ದರು. ಎಷ್ಟೋ ಬಾರಿ ಅವರ ಮನೆಯ ಬಾಗಿಲಿನಲ್ಲಿ ಪೊಲೀಸರು ಕಾದು ಕುಳಿತಿದ್ದೂ ಉಂಟು. ಅವರು ಸಿಕ್ಕಾಗಲೂ ಕೂಡ ಅವರ ಬಗ್ಗೆ ಯಾವುದೇ ಸಾಕ್ಷ್ಯ ಇಲ್ಲದ ಕಾರಣ ಅವರನ್ನು ಅರೆಸ್ಟ್ ಮಾಡಲು ಸಾಧ್ಯವಾಗಿರಲಿಲ್ಲ.

ಶಿವಮೊಗ್ಗದಲ್ಲಿ ತುರ್ತುಪರಿಸ್ಥಿಯ ವಿರುದ್ಧ ನಡೆಯುತ್ತಿದ್ದ ಚಟುವಟಿಕೆಗಳಿಗೆ ಕೇಂದ್ರ ಬಿಂದುವಾಗಿದ್ದ ಶ್ರೀ ಹಿರಿಯೂರು ಕೃಷ್ಣಮೂರ್ತಿಯವರನ್ನು ಹುಡುಕಲು ರಾಜ್ಯ ಪೊಲೀಸರಿಂದ ಸಾಧ್ಯವಾಗದ ಕಾರಣ ದೆಹಲಿಯಿಂದ ದಕ್ಷಿಣಾಮೂರ್ತಿ ಎಂಬ ಆಫೀಸರ್ ಒಬ್ಬರನ್ನು ನೇಮಕ ಮಾಡಲಾಯಿತು. ಅವರು ಕೂಡ ಸಾಕಷ್ಟು ಬಾರಿ ಹಿರಿಯೂರು ಕೃಷ್ಣಮೂರ್ತಿಯವರ ಮನೆಗೆ ಬಂದು ಇವರನ್ನು ಹುಡುಕುವ ಕೆಲಸ ಮಾಡಿದರು. ಆದರೆ ಅವರ ಕೈಗೆ ಹಿರಿಯೂರು ಕೃಷ್ಣಮೂರ್ತಿಗಳು ಸಿಗಲಿಲ್ಲ. ಅಷ್ಟೊಂದು ಚಾಕಾಚಕ್ಯತೆಯಲ್ಲಿ ಅವರು ತುರ್ತು ಪರಿಸ್ಥಿಯ ವಿರುದ್ಧ ಹೋರಾಟಗಳ ಕೆಲಸ ಮಾಡುತ್ತಿದ್ದರು.

ಸಂಘಟನೆಯ ಎಲ್ಲಾ ಹಿರಿಯ ನಾಯಕರು ಮೀಸಾ ಕಾಯ್ದೆಯಡಿ ಬಂಧನವಾಗಿ ಬಳ್ಳಾರಿ ಜೈಲಿನಲ್ಲಿದ್ದಾಗ ಶಿವಮೊಗ್ಗ ನಗರದಲ್ಲಿ ಪ್ರತಿಭಟನೆಗಳನ್ನು ಅದ್ಭುತವಾಗಿ ಆಯೋಜನೆ ಮಾಡುತ್ತಿದ್ದರು ಜೊತೆಗೆ ಪೊಲೀಸರ ಕೈಗೆ ಕೂಡ ಸಿಕ್ಕಿಹಾಕಿಕೊಳ್ಳದಂತೆ ಕಾರ್ಯ ನಡೆಸುತ್ತಿದ್ದರು. ಆಗ '**ಕಹಳೆ**' ಪತ್ರಿಕೆಯನ್ನು ಸ್ವಯಂಸೇವಕರ ಕೈಯಲ್ಲಿ ಹಂಚಿಸುವ, ಕೆಲಸ ಸಾಂಗವಾಗಿ ನಡೆಯುತ್ತಿತ್ತು. ಚಟುವಟಿಕೆಗಳನ್ನು ಮಾಡುವಾಗ ಹೆಸರು ಹಿಡಿದು ಮಾತನಾಡಿದರೆ ವ್ಯಕ್ತಿ ಯಾರೆಂದು ತಿಳಿಯುತ್ತದೆ ಎಂಬ ಕಾರಣಕ್ಕಾಗಿ ಹಿರಿಯೂರು ಕೃಷ್ಣಮೂರ್ತಿಗಳನ್ನು ಹಾಗೂ ಪಿ.ವಿ. ಕೃಷ್ಣಭಟ್ಟರನ್ನು ಎಲ್ಲ ಸ್ವಯಂಸೇವಕರು '**ಮೇಷ್ಟ್ರು**' ಎಂದು ಕರೆಯುತ್ತಿದ್ದರು.

ತುರ್ತು ಪರಿಸ್ಥಿಯ ಸಮಯದಲ್ಲಿ ಒಮ್ಮೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಬೈಠಕ್ ತೆಗೆದುಕೊಂಡಿದ್ದರು. ಇವರನ್ನು ಹುಡುಕಿಕೊಂಡು ಮುಂಬಾಗಿಲಿನಿಂದ ಪೊಲೀಸರು ಬರುವುದನ್ನು ಅರಿತು ಹಿಂಬಾಗಿಲಿನಿಂದ ಅದೃಶ್ಯರಾಗಿ ಕಾಲೇಜಿನಲ್ಲಿ ಪಾಠ ಮಾಡುತ್ತಿರುವಂತೆ ಕಾಣಿಸಿಕೊಂಡರು. ಪೊಲೀಸರಿಗೆ ಹೀಗಾಗಿ ಅವರ ಮೇಲೆ ಅನುಮಾನವಿದ್ದರೂ ಸಹ ಅವರನ್ನು ಬಂಧಿಸಲು ಸಾಧ್ಯವಾಗಿರಲಿಲ್ಲ.

ಹೀಗೆ ಸಂಘಟನೆಯ ಕಷ್ಟ ಕಾಲದಲ್ಲಿ ಹೆಗಲಿಗೆ ಹೆಗಲು ಕೊಟ್ಟು ನಿಷ್ಠೆಯಿಂದ ಕಾರ್ಯನಿರ್ವಹಿಸಿದ ಹಿರಿಯೂರು ಕೃಷ್ಣಮೂರ್ತಿಗಳಿಗೆ ನಂತರದ ದಿನಗಳಲ್ಲಿ ಅನೇಕ ಸಲ ವಿಧಾನಪರಿಷತ್ ಹಾಗೂ ವಿಧಾನಸಭೆಯ ಸದಸ್ಯರಾಗುವ ಅವಕಾಶಗಳು ದೊರೆತಾಗಲೂ ಅದನ್ನು ಅವರು ನಯವಾಗಿಯೇ ತಿರಸ್ಕರಿಸಿದ್ದರು. ಹೀಗೆ ಅಸಮಾನ್ಯ ಕಾರ್ಯಗಳನ್ನು ಸಾಧಿಸಿಯೂ ಸಾಮಾನ್ಯ ಕಾರ್ಯಕರ್ತರಂತೆ ಜೀವನ ನಡೆಸಿದ ಶ್ರೀ ಹಿರಿಯೂರು ಕೃಷ್ಣಮೂರ್ತಿಗಳು ತಮ್ಮ 60ನೇ ವಯಸ್ಸಿಗೆ 22 ಜುಲೈ 2004 ರಂದು ದೈವಾಧೀನರಾದರು.




# ನವ ಭಾರತದತ್ತ ಸಾಗೋಣ...

ಒಗ್ಗಟ್ಟಿನಿಂದ ಇದ್ದು ದೇಶದ ಅಭಿವೃದ್ಧಿ ಸಾಧಿಸೋಣ ಮತ್ತು ನವಭಾರತ ನಿರ್ಮಾಣದೆಡೆಗೆ ಸಾಗೋಣ ಎಂಬುದಾಗಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು, ತಮ್ಮ 'ಮನ್ ಕಿ ಬಾತ್' ಬಾನುಲಿ ಕಾರ್ಯಕ್ರಮದ 100ನೇ ಆವೃತ್ತಿ ಸಂದರ್ಭದಲ್ಲಿ ದೇಶದ ಜನತೆಗೆ ಕರೆ ನೀಡಿದ್ದಾರೆ.

ಮೋದಿಯವರ 100ನೇ 'ಮನ್ ಕಿ ಬಾತ್' ಕಾರ್ಯಕ್ರಮ ನ್ಯೂಯಾರ್ಕ್‌ನ ವಿಶ್ವಸಂಸ್ಥೆ ಕೇಂದ್ರ ಕಚೇರಿಯಲ್ಲೂ ಏಕಕಾಲದಲ್ಲಿ ಪ್ರಸಾರಗೊಂಡು ಇತಿಹಾಸವನ್ನು ನಿರ್ಮಿಸಿತು. ಯಾವುದೇ ಋಣಾತ್ಮಕ ವಿಚಾರಗಳನ್ನು ಚರ್ಚಿಸದೆ ರಾಷ್ಟ್ರ ನಿರ್ಮಾಣಕ್ಕೆ ಪೂರಕವಾದ ಧನಾತ್ಮಕ ವಿಚಾರಗಳನ್ನು ಮಾತ್ರವೇ ಚರ್ಚಿಸುವ ಈ ಕಾರ್ಯಕ್ರಮವನ್ನು ಕೋಟ್ಯಂತರ ಜನರು ಆಲಿಸಿದರು. ಇದಕ್ಕಾಗಿ ದೇಶದ ಜನತೆಗೆ ಪ್ರಧಾನಿ ಶ್ರೀ ಮೋದಿಯವರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ.

**ಸಕಾರಾತ್ಮಕ ಭಾವನೆಗಳ ಮೂರ್ತರೂಪ:** 'ಮನ್ ಕಿ ಬಾತ್' ನಮ್ಮ ದೇಶದ ಕೋಟ್ಯಂತರ ಜನತೆಯ ಮನದಾಳದ ಸಕಾರಾತ್ಮಕ ಭಾವನೆಗಳ ಮೂರ್ತರೂಪದ ಅಭಿವ್ಯಕ್ತಿಯಾಗಿದೆ. ಜನತೆ ದೇವರ ಬಳಿ ಹೋಗಿ, ಬರುವಾಗ ಜತೆಗೆ ಪ್ರಸಾದದ ತಟ್ಟೆ ತರುತ್ತಾರೆ. 'ಮನ್ ಕಿ ಬಾತ್' ನನ್ನ ಪಾಲಿಗೆ ಜನತಾ ಜನಾರ್ದನರ ಪಾದದಲ್ಲಿರುವ ಪ್ರಸಾದದ ತಟ್ಟೆ, ನನಗೆ ಇದೊಂದು ಆಧ್ಯಾತ್ಮಿಕ ಪಯಣ. ಈ ಕಾರಣದಿಂದ ಇದು ನನಗೆ ಒಂದು ವ್ರತ, ಪೂಜೆ ಆಗಿದೆ, ಈಶ್ವರ ರೂಪಿ ಜನತೆಯೊಂದಿಗೆ ಮಾತನಾಡಲು ಇದರಿಂದ ಸಾಧ್ಯವಾಗಿದೆ. ಇದು ವ್ಯಕ್ತಿಯಿಂದ ಸಮಷ್ಠಿಯೆಡೆಗೆ ಮತ್ತು ಸ್ವಂತದಿಂದ ಸಮಾಜದೆಡೆಗಿನ ಪಯಣ, ಈ ಸಂಸ್ಕಾರ ಸಾಧನದ ರೂವಾರಿಗಳು ನೀವು ಎಂಬುದಾಗಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಜನತೆಯನ್ನುದ್ದೇಶಿಸಿ ನುಡಿದರು. ಇಂದು ನಾವು 100ನೇ ಪ್ರಸಾರಕ್ಕೆ ತಲುಪಿದ್ದೇವೆ, 'ಮನ್ ಕಿ ಬಾತ್'ನಲ್ಲಿ ನಾನು ಮಾತನಾಡುವಾಗ ಅನೇಕ ಬಾರಿ ಭಾವುಕನಾಗಿದ್ದೇನೆ. ಸಾಮಾಜದ ಅನೇಕ ನೈಜ ಸಾಧಕರನ್ನು ಗುರುತಿಸಿ ನೆನೆಯಲು ಇದೊಂದು ಉತ್ತಮ ವೇದಿಕೆ ಒದಗಿಸಿದೆ, ಜನತೆಯ ಸಾವಿರಾರು ಪತ್ರಗಳು ಮತ್ತು ಲಕ್ಷಾಂತರ ಸಂದೇಶಗಳನ್ನು ನೋಡಿ ನಾನು ಭಾವುಕನಾಗಿರುವೆ, ಜನತೆಯೊಂದಿಗೆ ನಿಕಟ ಸಂವಹನ ನಡೆಸಲು ಇದರಿಂದ ಸಾಧ್ಯವಾಗಿದೆ ಎಂದು ಅವರು ತಿಳಿಸಿದರು.

**ಯಾಕಾಗಿ ಮನ್ ಕಿ ಬಾತ್?:** ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ನಾನು ಸಾರ್ವಜನಿಕ ಭೇಟಿ ನಡೆಸುತ್ತಿದ್ದೆ.ಆದರೆ 2014ರಲ್ಲಿ ದೆಹಲಿಗೆ ಬಂದ ಬಳಿಕ ನನ್ನ ಜವಾಬ್ದಾರಿಯ ಸ್ವರೂಪ, ಭದ್ರತಾ ವಿಚಾರ ಇತ್ಯಾದಿಗಳಿಂದಾಗಿ ಕಾರ್ಯ ಚಟುವಟಿಕೆಗಳು ಆಗಾಧವಾಗಿ ಬದಲಾಯಿತು. ಆದರೆ ಸಾಮಾನ್ಯ ಜನರಿಂದ ಬೇರೆಯಾಗಿರಲು ನನ್ನಿಂದ ಅಸಾಧ್ಯದ ಸಂಗತಿ. ಇಂತಹ ಸವಾಲಿನ ಸಂದರ್ಭದಲ್ಲಿ 'ಮನ್ ಕೀ ಬಾತ್' ರೂಪುಗೊಂಡಿದ್ದು, ಇತರರ ಸಾಧನೆಯನ್ನು ಸಂಭ್ರಮಿಸಲು ಮತ್ತು ಇತರರಿಂದ ಕಲಿಯಲು ದಾರಿ ಮಾಡಿಕೊಟ್ಟು, ಜನಸಾಮಾನ್ಯರೊಡನೆ ಬೆರೆಯಲು, ಭಾವನೆಗಳನ್ನು ಹಂಚಿಕೊಳ್ಳಲು 'ಮನ್ ಕಿ ಬಾತ್' ಮೂಲಕ ಸಾಧ್ಯವಾಗಿದೆ ಎಂದು ಅವರು ಒತ್ತಿ ಹೇಳಿದರು. ಕಳೆದ 9 ವರ್ಷಗಳಲ್ಲಿ ಪ್ರಧಾನಿಯವರು. ಒಮ್ಮೆಯೂ ತಪ್ಪಿಸದೆ ಈ ಕಾರ್ಯಕ್ರಮವನ್ನು ನೀಡಿರುವುದು ವಿಶೇಷವಾಗಿದೆ. ಈ ಮೂಲಕ ದೇಶದ ತೆರೆಮರೆಯಲ್ಲಿದ್ದು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿರುವ ಸಾವಿರಾರು ಮಂದಿ ಸಾಧಕರನ್ನು ಪ್ರಧಾನಿ ಶ್ರೀ ಮೋದಿಯವರು ದೇಶದ ಜನತೆಗೆ ಪರಿಚಯಿಸಿದ್ದಾರೆ. ಈ ಪೈಕಿ ಅನೇಕ ಸಾಧಕರ ಸಾಧನೆ ಅವರ ಊರಿನವರಿಗೇ, ರಾಜ್ಯದವರಿಗೆ ಗೊತ್ತಿರಲಿಲ್ಲ ಎಂಬುದು ಗಮನಾರ್ಹ ಸಂಗತಿ.

ಅದೆಷ್ಟು ಸತ್ಪರಿಣಾಮಗಳು! 'ಮನ್‌ಕಿ ಬಾತ್' ಮೂಲಕ 'ಬೇಟಿ ಬಚಾವೋ – ಬೇಟಿ ಪಡಾವೋ' ಕಾರ್ಯಕ್ರಮಕ್ಕೆ ಉತ್ತೇಜನ ನೀಡಲಾಯಿತು. ಇದರಿಂದ ನಾರಿ ಶಕ್ತಿಯ ಅನಾವರಣವಾಯಿತು. ಹರಿಯಾಣದ ಶ್ರೀ ಸನಿಲ್ ಅವರ 'ಸೆಲ್ಫಿವಿತ್ ಬೇಟಿ' ಅಭಿಯಾನವನ್ನು ಈ ಸಂದರ್ಭ ನೆನಪಿಸಿಕೊಳ್ಳಬೇಕಿದೆ. ಇವರ ಈ ಅಭಿಯಾನಕ್ಕೆ ದೇಶದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು. ಈ ಕಾರ್ಯಕ್ರಮದ ಮೂಲಕ ಸ್ವಸಹಾಯ ಮಹಿಳಾ ಸಂಘಗಳು, ಯುವ ಉದ್ಯಮಿಗಳ ಜತೆ ಸಂವಾದ ನಡೆಸಲಾಯಿತು. 'ಆತ್ಮನಿರ್ಭರ' ಯೋಜನೆ ಬಗ್ಗೆ ದೇಶದ ಯುವಶಕ್ತಿಗೆ ಮಾಹಿತಿ ನೀಡಲಾಯಿತು. ಶಿಕ್ಷಣ, ವೈದ್ಯಕೀಯ ಸೌಲಭ್ಯ, ಜಲ ಸಂರಕ್ಷಣೆ, ಸರ್ಕಾರಿ ಯೋಜನೆಗಳ ಬಗ್ಗೆ ಅರಿವು ಮೂಡಿಸಲಾಯಿತು. ಸ್ಥಳೀಯ ಉದ್ಯಮಿಗಳಿಗೆ ಉತ್ತೇಜನ ನೀಡಲಾಯಿತು. ಗೊಂಬೆಗಳ ತಯಾರಿಕೆ ಮತ್ತು ಆತ್ಮನಿರ್ಭರ ಭಾರತಕ್ಕೆ ಸಾಕಷ್ಟು ಪ್ರಚಾರ ದೊರೆಯಿತು. ಸ್ವಚ್ಛಭಾರತಕ್ಕೆ ಮೈಲಿಗಲ್ಲು ದೊರೆಯಿತು ಎಂಬುದರತ್ತ ಪ್ರಧಾನಿ ಅವರು ಗಮನ ಸೆಳೆದಿದ್ದಾರೆ.

ಪ್ರವಾಸೋದ್ಯಮ ಕೂಡ ಸಾಕಷ್ಟು ಅಭಿವೃದ್ಧಿಯಾಯಿತು. ಹರಿಯಾಣದಲ್ಲಿ ಲಿಂಗಾನುಪಾತ ಪ್ರಮಾಣವೀಗ ಗಣನೀಯವಾಗಿ ಸುಧಾರಣೆ ಕಂಡಿದೆ. 'ಮನ್ ಕಿ ಬಾತ್' ಕಾರ್ಯಕ್ರಮವು ಸಮಾಜಕ್ಕೆ ರಚನಾತ್ಮಕ ಪ್ರೇರಣೆ ನೀಡಿದೆ. 'ವೋಕಲ್ ಫಾರ್ ಲೋಕಲ್' ದೃಷ್ಟಿ ಮತ್ತಷ್ಟು ಗಟ್ಟಿಯಾಗಿದೆ ಎಂದು ಹೇಳಿದರು. ವಿಶ್ವಸಂಸ್ಥೆಯ ಶಿಕ್ಷಣ, ವಿಜ್ಞಾನ, ಸಾಂಸ್ಕೃತಿಕ ಸಂಘಟನೆ ಯುನೆಸ್ಕೋದ ಮಹಾನಿರ್ದೇಶಕರು 'ಮನ್ ಕಿ ಬಾತ್' ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಭಾರತದ ಶಿಕ್ಷಣ ಮತ್ತು ಸಂಸ್ಕೃತಿ ಬಗ್ಗೆ ಪ್ರಸ್ತಾಪಿಸಿದರು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಮೃತ ಕಾಲದಲ್ಲಿ, ಜಿ20 ಅಧ್ಯಕ್ಷತೆವಹಿಸಿದ ಸುಸಂದರ್ಭದಲ್ಲಿ ನಾವೆಲ್ಲ ಒಟ್ಟಾಗಿ ದೇಶದ ಅಭಿವೃದ್ಧಿ ಮತ್ತು ನವಭಾರತ ನಿರ್ಮಾಣದ ಗುರಿಯತ್ತ ಸಾಗೋಣ ಎಂಬುದಾಗಿ ಅವರು ಕರೆ ಕೊಟ್ಟಿದ್ದರು. ಈ ಸಂದರ್ಭ 'ಮನ್ ಕಿ ಬಾತ್ 'ಕಾರ್ಯಕ್ರಮದ ತೆರೆ ಹಿಂದೆ ಕಾರ್ಯ ನಿರ್ವಹಿಸಿದ ಪ್ರಸಾರ ಭಾರತಿ ತಂತ್ರಜ್ಞ ತಂಡಕ್ಕೆ ಮತ್ತು ಬೇರೆ ಬೇರೆ ಭಾಷೆಗಳಿಗೆ ಅನುವಾದ ಮಾಡಿದ ಅನುವಾದಕರಿಗೆ ಮತ್ತು ಶ್ರೋತೃಗಳಿಗೆ ಪ್ರಧಾನಿಯವರು ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಪ್ರಧಾನಿಯಂತಹ ಅತ್ಯಂತ ಘನ ಜವಾಬ್ದಾರಿಯುತ ಸ್ಥಾನ, ಪಕ್ಷದ ಕಾರ್ಯ, ಪ್ರವಾಸಗಳು, ಸಭೆ-ಸಮಾವೇಶಗಳು, ಯೋಜನೆಗಳಿಗೆ ರೂಪುರೇಷೆ ಇತ್ಯಾದಿಗಳ ನಡುವೆಯೂ ಸರಕಾರದ ಜನೋಪಯೋಗಿ ಯೋಜನೆಗಳನ್ನು ಜನತೆಗೆ ತಲುಪಿಸುವಲ್ಲಿ ಮಹತ್ವದ ಪಾತ್ರವಹಿಸಿರುವ ಈ ಕಾರ್ಯದ ಮೂಲಕ ಈ ಸಂವಹನವನ್ನು ನಿರಂತರವಾಗಿ ಮುಂದುವರಿಸಿಕೊಂಡು ಬಂದಿರುವುದಾಗಿ ಪ್ರಧಾನಿ ಶ್ರೀ ಮೋದಿಯವರು ತಿಳಿಸಿದರು.

# ವಿಜಯೋತ್ಸವ ಸಂಭ್ರಮ



ಶ್ರೀ ವಿ. ಸುನೀಲ್ ಕುಮಾರ್ – ಕಾರ್ಕಳ ವಿಧಾನಸಭಾ ಕ್ಷೇತ್ರ



ಶ್ರೀ ಹೆಚ್.ಕೆ. ಸುರೇಶ್ – ಬೇಲೂರು ವಿಧಾನಸಭಾ ಕ್ಷೇತ್ರ



ಶ್ರೀ ಸಿದ್ದು ಸವದಿ – ತೇರದಾಳ ವಿಧಾನಸಭಾ ಕ್ಷೇತ್ರ



ಶ್ರೀ ಶರಣು ಸಲಗಾರ್ – ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ



ಶ್ರೀ ಮಾನಪ್ಪ ಡಿ. ವಜ್ಜಲ್ – ಲಿಂಗಸೂಗೂರು (ಎಸ್‌ಸಿ) ವಿಧಾನಸಭಾ ಕ್ಷೇತ್ರ



ಶ್ರೀ ಅರವಿಂದ್ ಬೆಲ್ಲದ್ – ಹು-ಧಾ. ಪಶ್ಚಿಮ ವಿಧಾನಸಭಾ ಕ್ಷೇತ್ರ



ಶ್ರೀ ದೊಡ್ಡನಗೌಡ ಪಾಟೀಲ್ – ಕುಷ್ಟಗಿ ವಿಧಾನಸಭಾ ಕ್ಷೇತ್ರ



ಶ್ರೀ ಕೃಷ್ಣ ನಾಯ್ಕ್ – ಹಡಗಲಿ (ಎಸ್‌ಸಿ) ವಿಧಾನಸಭಾ ಕ್ಷೇತ್ರ

*ಕಾಲೇ ವರ್ಷಂತು ಪರ್ಜನ್ಯಃ*



# ಧರ್ಮ ಸ್ಥಾಪನೆಯೇ ಸಮಷ್ಟಿ ಧರ್ಮ

ದೀನದಯಾಳಜೀಯವರ ಸಮಗ್ರ ಬರಹದಲ್ಲಿ ಪಂಡಿತ್‌ಜೀ ಶ್ರೀ ಕೃಷ್ಣನ ಕುರಿತು ಹೇಳಿದ್ದಾರೆ. ಸ್ವಾರ್ಥ ಹಾಗೂ ಕಾಮ ವಾಸನೆಯಿಂದ ಕೂಡಿದ್ದ ಹಾಗೂ ಭಿನ್ನ ಭಿನ್ನವಾಗಿದ್ದ ನಾಡನ್ನು ಒಂದು ಸೂತ್ರದಲ್ಲಿ ಹೆಣೆದು, ದೈವಿಸಂಪತ್ತಿನಿಂದ ಅದು ತುಂಬಿಕೊಂಡಿರುವಂತೆ, ಮಾಡುವ ಏಕೈಕ ಆಕಾಂಕ್ಷೆ ಶ್ರೀಕೃಷ್ಣನ ಮುಂದಿತ್ತು. ಭಾರತದಲ್ಲಿ ಒಂದು ಚತುರ್‌ಸಾಗರ ಪರ್ಯಂಥವಿರುವಂಥ ಸಾಮ್ರಾಜ್ಯವನ್ನು ಸ್ಥಾಪಿಸುವ ಧ್ಯೇಯ ಆತನಿಗೆ ಇತ್ತು. ತನ್ನ ಸಂಪೂರ್ಣ ಶಕ್ತಿಯನ್ನು ಅದಕ್ಕಾಗಿ ವಿನಿಯೋಗಿಸಿದ, ತನ್ನನ್ನು ಸಮರ್ಪಿಸಿಕೊಂಡ, ಸಮರ್ಪಿಸಿಕೊಂಡ ನಂತರ ಹೆಜ್ಜೆ ಹೆಜ್ಜೆಗೂ ನೀತಿ–ಅನೀತಿ, ಸತ್ಯ–ಅಸತ್ಯ ಎಂದು ಯೋಚಿಸುತ್ತಾ ಕುಳಿತುಕೊಳ್ಳುವುದು ಅಗತ್ಯವಾಗಿರುವುದಿಲ್ಲ. ಧ್ಯೇಯ ಸಾಧನೆಗೆ ಯಾವುದು ನೆರವಾಗುತ್ತದೆಯೋ ಅದೇ 'ನೀತಿ'ಯಾಗುತ್ತದೆ. ಯಾವುದು ಧ್ಯೇಯದ ಸತ್ಯ ಸ್ಥಾಪನೆಯಲ್ಲಿ ಕೊನೆಗೊಳ್ಳುವುದೋ ಅದೇ 'ಸತ್ಯ'ವೆನಿಸಿಕೊಳ್ಳುತ್ತದೆ. ಧರ್ಮದ ಸ್ಥಾಪನೆಯಲ್ಲಿ ಶ್ರೀಕೃಷ್ಣನ ಬಾಳುವೆಯಲ್ಲಿ ಈ ಸಿದ್ಧಾಂತ ಸ್ಪಷ್ಟವಾಗಿ ಕಾಣುತ್ತದೆ. ಇಂದಿಗೂ ಇದು ಪ್ರಸ್ತುತ.

ಮಹಾಭಾರತದ ಕಾಲದಲ್ಲಿ ಧರ್ಮ ಸ್ಥಾಪನೆ ಸುಲಭ ಮಾರ್ಗವಾಗಿರಲಿಲ್ಲ. ಜರಾಸಂಧ, ನರಕಾಸುರ, ಕೌರವರು, ಪಾಂಡವರು ಅಂದಿನ ಕಾಲದ ರಾಜ ಮಹಾರಾಜರ ವಂಶಗಳಾಗಿದ್ದವು. ಸಾವಿರಾರು ರಾಜರ ಪಕ್ಷಗಳು ಸ್ವಾರ್ಥ ಸಾಧನೆಗಾಗಿ, ರಕ್ಷಣೆಗಾಗಿ, ತಮ್ಮ ಸುಖ ವೈಭವ ವಿಲಾಸಿ ಜೀವನಕ್ಕೆ ಅಂದಿನ ಪ್ರಬಲ ರಾಜವಂಶಗಳ ಹಿಂದೆ ಕುಳಿತು, ತಮ್ಮ ಸ್ವಾರ್ಥ ಸಾಧನೆಗಾಗಿ ಅವಕಾಶಕ್ಕಾಗಿ ಕಾಯುತ್ತಿತ್ತು. ಆ ಅವಕಾಶ ಕುರುಕ್ಷೇತ್ರದ ಯುದ್ಧ. ಕೃಷ್ಣ ಪಾಂಡವರನ್ನು ಅಂದಿನ ಪರಿಸ್ಥಿತಿಯಲ್ಲಿ ಧರ್ಮ ರಕ್ಷಣೆಯ ಪಕ್ಷವನ್ನಾಗಿ ಗುರುತಿಸಿ, ತನ್ನ ಸಂಪೂರ್ಣ ಶಕ್ತಿ–ಯುಕ್ತಿಯನ್ನು ಸುರಿದು ಭಾರತದ ಸಮಷ್ಟಿ ಧರ್ಮವನ್ನು ಕಾಪಾಡಿದ ಆರ್ಷ ವಾಕ್ಯವಾದ 'ಯತೋ ಧರ್ಮಃ ತತೋಜಯಃ', ಧರ್ಮವಿದ್ದರೆ ಜಯ ನಿಶ್ಚಯ ಎಂಬ ಈ ಮಣ್ಣಿನ ಜನರ ನಂಬಿಕೆ ಯುಗ ಯುಗಗಳಿಂದ ಧರ್ಮಕ್ಕೆ ಜಯ ಅಂತಿಮವಾಗಿ ಎನ್ನುವ ನಂಬಿಕೆ. ಭಾರತದ ಸಮಾಜದ ಸಾಮಾನ್ಯ ಜನರಲ್ಲೂ ರಕ್ತದ ಧಮನಿ ಧಮನಿಗಳಲ್ಲಿ ಹರಿಯುತ್ತಿರುವುದರಿಂದ ಈ ದೇಶ, ಧರ್ಮ, ಸಂಸ್ಕೃತಿ, ಸಮಾಜ ನಿರಂತರತೆಯನ್ನು ಕಾಪಾಡಿಕೊಂಡು ಉಳಿದಿದೆ. ಅಂದಿನ ರಾಜ ಮಹಾರಾಜರ ಪ್ರತಿನಿಧಿಗಳಾಗಿ ಇಂದೂ ಕೂಡ ಪ್ರತಿನಿಧಿಸುವ ವಿಚಾರಧಾರೆ, ಪಕ್ಷ, ವಂಶಗಳಿವೆ. ಅವರ ಮೂಲ ಉದ್ದೇಶ ರಾಷ್ಟ್ರದ ಹಿತ, ಐಕ್ಯತೆಗೆ ಬದಲಾಗಿ ತಮ್ಮ ಹಿತ, ಸ್ವಾರ್ಥಕ್ಕಾಗಿ ಭಿನ್ನ ಭಿನ್ನ ಪ್ರಯತ್ನದಿಂದ ಕೆಲವೊಮ್ಮೆ ವ್ಯಕ್ತಿಗತವಾಗಿ ಇಲ್ಲದೇ ಪಕ್ಷವಾಗಿ ಅಥವಾ ಶತ್ರುತ್ವ ಭಾವನೆಯನ್ನು ಮರೆ ಮಾಚಿ ಒಗ್ಗಟ್ಟಿನ ಮಂತ್ರ ಜಪಿಸುತ್ತಾ ಸಮಾಜವನ್ನು ಮೋಸಗೊಳಿಸುವ ಪ್ರಯತ್ನ ಮಾಡುತ್ತಾರೆ.

ಕೃಷ್ಣನ ನಾಡಿನಿಂದ ಬಂದಿರುವ ಶ್ರೀ ನರೇಂದ್ರ ಮೋದಿ ಅವರು 2014 ರಿಂದ ರಾಷ್ಟ್ರದ ಚುಕ್ಕಾಣಿ ಹಿಡಿದು ವಿಶ್ವವೇ ಭಾರತದತ್ತ ಗಮನಿಸುವಂತೆ ಮಾಡಿದ್ದಾರೆ. ಕೆಲವು ದೇಶಗಳು ಅಸೂಯೆ, ದ್ವೇಷ, ಕುತ್ಸಿತ ಮನಸ್ಸಿನಿಂದ ಭಾರತದ ಪ್ರಭಾವವನ್ನು ಕ್ಷೀಣಿಸಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. ಇವರ ಸಹಾಯಕರಾಗಿ ಭಾರತದಲ್ಲಿ ಹಲವು ಪಕ್ಷಗಳು, ನಾಯಕರು, ವಿಚಾರವಂತರು, ವ್ಯಕ್ತಿಗಳು ಪರದೇಶಗಳ ಉದ್ದೇಶಗಳಿಗೆ ಸಹಕಾರ ನೀಡುವ 'ಆತತಾಯಿ ಮನೋಭಾವ' ಪ್ರದರ್ಶಿಸುತ್ತಿದ್ದಾರೆ. ಮೋದಿಜೀ ಮತ್ತು ಬಿಜೆಪಿ ಪ್ರಾಮಾಣಿಕವಾಗಿ ದೇಶದ ಅಭಿವೃದ್ಧಿಗಾಗಿ ಸರ್ವ ಪ್ರಯತ್ನ ಮಾಡಿದ ನಂತರವೂ ಚುನಾವಣೆಯ ಸಂದರ್ಭದಲ್ಲಿ ಜನಸಾಮಾನ್ಯ ಅದನ್ನು ಸಂಪೂರ್ಣವಾಗಿ ಒಪ್ಪಿಕೊಂಡಂತಿಲ್ಲ ಎನ್ನಲು ಕರ್ನಾಟಕದ 2023ರ ವಿಧಾನಸಭಾ ಚುನಾವಣೆಯೇ ಸಾಕ್ಷಿ. ಮೇಲ್ನೋಟಕ್ಕೆ ಎಲ್ಲವೂ ಸರಿಯಿಲ್ಲ ಎನ್ನುವ ಮನೋಭಾವ ಪ್ರದರ್ಶನವಾಗುತ್ತಿದೆ. ಮತದಾರ ಪ್ರಭು ಸರ್ವೋಚ್ಚ, ಆತನ ನಿರ್ಣಯ ಅಂತಿಮ. ಅದನ್ನು ಯಾರೂ ಪ್ರಶ್ನಿಸಲಾಗದು, ಆದರೆ ಮತದಾರರ ಗಮನ ಸೆಳೆಯಲು ವಿಫಲವಾದ ಅಂಶ ಯಾವುದು? ಧರ್ಮ ಗೆದ್ದರೆ ಸಮಾಜ ಗೆದ್ದಂತೆ ಎನ್ನುವ ಸತ್ಯವನ್ನು ಮನವರಿಕೆ ಮಾಡಿಕೊಡುವುದರಲ್ಲಿ ನಮ್ಮ ಪಾತ್ರ ಏನು? ಸಜ್ಜನ ಸಮಷ್ಟಿಯ ಭಾಗವಾಗಿ ನಮ್ಮ ಕರ್ತವ್ಯವೇನು? ಎಂದು ಚಿಂತಿಸುವ ಕಾಲವಿದು. ಪ್ರಜಾಪ್ರಭುತ್ವದಲ್ಲಿ ಸಜ್ಜನ ಸಮಾಜಶಕ್ತಿ ಅದರ ನೇತಾರರು, ರಾಜಕೀಯ, ಚದುರಂಗದಾಟಕ್ಕೆ ಮಿತಿ ಹಾಕದಿದ್ದರೆ, ಅಂದಿನ ಭೀಷ್ಮ, ದ್ರೋಣರಂತೆ ಕಣ್ಮುಚ್ಚಿ ಕುಳಿತರೆ ಆಗುವ ಅಪಾಯ ಅಪಾರ. ಜಗಜ್ಜನನಿ ಭಾರತ ಮಾತೆಯನ್ನು ಆರಾಧಿಸುವರು, ಒಟ್ಟಾಗಿ ಚಿಂತನೆ ನಡೆಸಲೇಬೇಕಾದ ಕಾರ್ಯಕ್ಕೆ ವೇಗವರ್ಧಕರಾಗುವಂತೆ,ಸಮಾಜದ ಪ್ರತಿಯೊಬ್ಬರನ್ನು ಸಜ್ಜುಗೊಳಿಸುವುದೇ ಇಂದಿನ ಆದ್ಯತೆಯ ಕಾರ್ಯ. ಪ್ರಜಾಪ್ರಭುತ್ವದ ನೈಜ ರೀತಿ ನೀತಿಗಳು, ಗುಣಮಟ್ಟತೆ, ಸ್ತರ, ಮತದಾರರ ಮನಸ್ಥಿತಿ, ಆದ್ಯತೆಗಳ ಸ್ತರ, ಎಲ್ಲವನ್ನೂ ವಿಶಧೀಕರಿಸಿ, ಗುರುತಿಸಿ ಜಾಗೃತಿಗೊಳಿಸುವುದೇ 'ಸಮಸ್ಥಿ ಧರ್ಮ'.

ದಿವಸ್ಪತಿ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG/BG/WPP-106 /2020-22
OFFICE OF POSTING : BENGALURU PSO - 560 025 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**